بِسْمِ اللّٰہِ الرَّحْمٰنِ الرَّحِیْمِ     نَحْمَدُہٗ وَنُصَلِّی عَلٰی رَسُوْلِہِ الْکَرِیْمِ     وَعَلٰی عَبْدِہٖ الْمَسِیْحِ الْمَوْعُوْدِ

وَلَقَدْ نَصَرَکُمُ اللّٰہُ بِبَدْرٍ وَّاَنْتُمْ اَذِلَّۃٌ

# ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವರ್ಷ: 02

ಸಂಚಿಕೆ: 07

ವಾರ್ಷಿಕ ಶುಲ್ಕ ರೂ.500/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

18 ಫೆಬ್ರವರಿ 2021, 18 ತಬ್‌ಲೀಗ್ 1400 ತಬ್‌ಲೀಗ್ ಹಿಜರಿ ಶಮ್‌ಸಿ, 05 ರಜಬ್ 1442 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– ಆಮೀನ್

اَللّٰھُمَّ اَیِّدْ اِمَامَنَا بِرُوْحِ الْقُدُسِ

وَبَارِکْ لَنَا فِیْ عُمُرِہٖ وَاَمْرِہٖ

## ಅಲ್ಲಾಹನ ಉಪದೇಶ

اِنْ تُبْدُوْا خَیْرًا اَوْ تُخْفُوْہُ

اَوْ تَعْفُوْا عَنْ سُوْٓءٍ

فَاِنَّ اللّٰہَ کَانَ عَفُوًّا قَدِیْرًا○

*(ಅನ್ನಿಸಾಅ್:150)*

ಅಂದರೆ: ನೀವು ಒಂದು ಒಳಿತನ್ನು ಬಹಿರಂಗಪಡಿಸಿದರೆ ಅಥವಾ ಅದನ್ನು ಮುಚ್ಚಿಟ್ಟರೆ ಅಥವಾ ಒಂದು ತಪ್ಪನ್ನು ನೀವು ಕ್ಷಮಿಸಿದರೆ (ತಿಳಿದುಕೊಳ್ಳಿರಿ) ನಿಸ್ಸಂದೇಹವಾಗಿ ಅಲ್ಲಾಹನು ಅತ್ಯಂತ ಕ್ಷಮಾಶೀಲನೂ ಸರ್ವಶಕ್ತನೂ ಆಗಿದ್ದಾನೆ.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

**ಪ್ರಯಾಣದ ಸಮಯದಲ್ಲಿ ಸ್ವಲ್ಪ ತಡ ಮಾಡಿ ನಮಾಝ್ ಜಮಾ ಮಾಡುತ್ತಿದ್ದರು.**

(1091) ಹಝ್‌ರತ್ ಅಬ್ದುಲ್ ಬಿನ್ ಉಮರ್(ರ) ವರದಿ ಮಾಡುತ್ತಾರೆ. ರಸೂಲುಲ್ಲಾಹ್(ಸ) ರವರನ್ನು ಕಂಡಿದ್ದೇನೆ. ಅವರಿಗೆ ಬೇಗ ಪ್ರಯಾಣ ಬೆಳೆಸಬೇಕಾಗಿದ್ದಲ್ಲಿ ಅವರು ಮಗ್ರಿಬ್ ನಮಾಝ್ ನಿರ್ವಹಿಸಲು ತಡ ಮಾಡುತ್ತಿದ್ದರು. ನಂತರ ಮಗ್ರಿಬ್ ಇಶಾಅ ಜಮಾ ಮಾಡಿ ನಿರ್ವಹಿಸಿಕೊಡುತ್ತಿದ್ದರು. ಸಾಲಿಂ ಹೇಳಿದರು. ಹಝ್‌ರತ್ ಅಬ್ದುಲ್ಲ (ಇಬ್ನು ಉಮರ್) ಸಹ ಬೇಗ ಪ್ರಯಾಣ ಹೋಗಬೇಕಾಗಿದ್ದಲ್ಲಿ ಹೀಗೆ ಮಾಡುತ್ತಿದ್ದರು.

**ಸವಾರಿಯ ಮೇಲೆ ನಫಿಲ್ ನಮಾಝ್ ನಿರ್ವಹಣೆ**

(1093) ಹಝ್‌ರತ್ ಆಮಿರ್ ಬಿನ್ ರಬಿಅ(ರ) ವರದಿ ಮಾಡುತ್ತಾರೆ. ನಾನು ನೋಡಿದೆ; ನಬಿ(ಸ) ತನ್ನ ಒಂಟೆ ಹೋಗುವ ಕಡೆಯೇ ಮುಖ ಮಾಡಿ ನಮಾಝ್ ನಿರ್ವಹಿಸುತ್ತಿದ್ದರು. ಅದು ಯಾವ ಕಡೆ ಹೋಗಬೇಕಾಗಿತ್ತೋ ಆ ಕಡೆಯೇ ಮುಖ ಮಾಡುತ್ತಿದ್ದರು.

**ಹಝ್‌ರತ್ ರಸೂಲುಲ್ಲಾಹ್(ಸ) ಫರ್ಝ್ ನಮಾಝ್ ನಿರ್ವಹಿಸಬೇಕಾದರೆ ಸವಾರಿಯಿಂದ ಕೆಳಗಿಳಿಯುತ್ತಿದ್ದರು.**

(1097) ಹಝ್‌ರತ್ ಆಮಿರ್ ಬಿನ್ ರಬಿಅ ವರದಿ ಮಾಡುತ್ತಾರೆ. ನಾನು ನೋಡಿದೆ. ರಸೂಲುಲ್ಲಾಹ್(ಸ) ಅವರು ತಮ್ಮ ಒಂಟೆಯ ಮೇಲೆ, ನಫಿಲ್ ನಮಾಝ್ ನಿರ್ವಹಿಸುತ್ತಿದ್ದರು. ರುಕು ಮತ್ತು ಸಜ್‌ದ ತನ್ನ ತಲೆಯ ಸಂಕೇತದಿಂದ ನಿರ್ವಹಿಸುತ್ತಿದ್ದರು. ಅವರ ಮುಖ ಒಂಟೆ ಹೋಗುವ ಕಡೆಯೇ ಇರುತ್ತಿತ್ತು. ರಸೂಲುಲ್ಲಾಹ್(ಸ) ಫರ್ಝ್ ನಮಾಝ್‌ನಲ್ಲಿ ಹೀಗೆ ಮಾಡುತ್ತಿರಲಿಲ್ಲ.

**(ಸಹೀ ಬುಖಾರಿ, ಸಂಪುಟ-2, ಕಿತಾಬ್ ತಖ್ಸೀರುಸ್ಸಲಾತ್, ಮುದ್ರಣ ಖಾದಿಯಾನ್ 2006)**

********

**ಇಸ್ಲಾಮ್ ಧರ್ಮವು ಲೋಕದಿಂದ ಅನೈತಿಕ ಸಂಬಂಧ ಮತ್ತು ವ್ಯಭಿಚಾರವನ್ನು ತಡೆಯುವ ಉದ್ದೇಶದಿಂದ ಒಂದಕ್ಕಿಂತ ಹೆಚ್ಚು ಪತ್ನಿಯರನ್ನು ಹೊಂದಲು ಅನುಮತಿ ನೀಡುತ್ತದೆ. ಇಸ್ಲಾಮಿ ಶರೀಅತ್ (ಧರ್ಮ ಸಂಹಿತೆ) ಸಹಜ ಹಾಗೂ ಪ್ರಾಕೃತಿಕ ರೀತಿಯಲ್ಲಿ ಬೇಕಾದ ಮಾನವೀಯ ಗುಣಗಳನ್ನು ತೆಗೆದುಕೊಂಡಿದೆ. ಅದು ಎಲ್ಲ ನಿಟ್ಟಿನಲ್ಲಿಯೂ ಅವನ ಗುಣಗಳನ್ನು ಹದ್ದುಬಸ್ತಿನಲ್ಲಿಡುತ್ತದೆ.**

**ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

ಬಹುಪತ್ನಿತ್ವದ ಮೇಲೆ ಆರೋಪ ಹೊರಿಸಲಾಗುತ್ತದೆ. ಇಸ್ಲಾಮ್ ಧರ್ಮವು ಬಹುಪತ್ನಿತ್ವಕ್ಕೆ ಅನುಮತಿ ನೀಡಿದೆ ಎಂದು ನಾವು ಹೇಳುತ್ತೇವೆ. ಆದರೆ ಒಬ್ಬನಾದರೂ ಪವಿತ್ರ ಖುರ್‌ಆನ್‌ನಲ್ಲಿ ನಿರ್ಭಂದವಾಗಿ ಹೆಚ್ಚು ಪತ್ನಿಯರನ್ನು ಹೊಂದಲೇಬೇಕು ಎಂದು ವಾದಿಸುವ ಪುರುಷನಿದ್ದಾನೆಯೇ? ಇದ್ದರೆ ಅವನನ್ನು ನಮಗೆ ತೋರಿಸಬೇಕು. ಹೌದು ಒಂದು ವಿಷಯ ನಿಜವಾಗಿದೆ ಮತ್ತು ಅದು ಸಹಜವಾದುದಾಗಿದೆ. ಕೆಲವೊಮ್ಮೆ ಮನುಷ್ಯನಿಗೆ ಒಂದಕ್ಕಿಂತ ಹೆಚ್ಚು ಪತ್ನಿಯರನ್ನು ಹೊಂದುವ ಅವಶ್ಯಕತೆ ಬೀಳುತ್ತದೆ. ಉದಾಹರಣೆಗೆ ಹೆಂಡತಿಯೊಬ್ಬಳು ಕುರುಡಿಯಾದರೆ ಅಥವಾ ಯಾವುದೇ ಅಪಾಯಕರ ರೋಗಕ್ಕೆ ತುತ್ತಾಗಿ ಗೃಹ ಕಾರ್ಯಗಳನ್ನು ನಡೆಸದಂತಾದರೆ ಮತ್ತು ಪುರುಷನು ಅನುಕಂಪ ಆಧಾರದ ಮೇಲೆ ಅವಳನ್ನು ಬಿಡಲು ಇಚ್ಛಿಸುವುದಿಲ್ಲವಾದರೆ ಅಂತಹ ಪರಿಸ್ಥಿತಿಗಳಲ್ಲಿ ಎರಡನೇ ವಿವಾಹಕ್ಕೆ ಅನುಮತಿ ಇರಲಿಲ್ಲ ಎಂದಾದರೆ ನೀವೇ ಹೇಳಿ ಆಗ ವ್ಯಭಿಚಾರ ಮತ್ತು ಅನೈತಿಕ ಸಂಬಂಧಗಳಿಗೆ ದಾರಿಯಾಗದಿರುತ್ತದೆಯೇ? ಹೀಗಿರುವಾಗ ಧರ್ಮ ಅಥವಾ ಶರೀಅತ್ (ಧರ್ಮ ಸಂಹಿತೆ) ಬಹುಪತ್ನಿತ್ವಕ್ಕೆ ತಡೆಯುವುದಾದರೆ ಖಂಡಿತವಾಗಿಯೂ ಅದು ಅನೈತಿಕತೆಗೆ ಪುಷ್ಟಿ ನೀಡಿದಂತಾಗುವುದು. ಆದರೆ ಇಸ್ಲಾಮ್ ಧರ್ಮವು ಲೋಕದಿಂದ ಅನೈತಿಕತೆ ಮತ್ತು ವ್ಯಭಿಚಾರವನ್ನು ದೂರ ಮಾಡಬಯಸುತ್ತದೆ. ಆದುದರಿಂದ ಅದನ್ನು ತಡೆಯುವ ಉದ್ದೇಶದಿಂದ ಹೆಚ್ಚು ಪತ್ನಿಯರನ್ನು ಹೊಂದಲು ಅನುಮತಿ ನೀಡುತ್ತದೆ. ಅದೇ ರೀತಿ ಸಂತಾನ ಆಗದಿದ್ದ ಪಕ್ಷದಲ್ಲೂ ಅನುಮತಿ ಇರುತ್ತದೆ. ಏಕೆಂದರೆ ಸಂತಾನ ಇಲ್ಲದ ಕಾರಣ ಕುಟುಂಬಗಳಲ್ಲಿ ಕಲಹಗಳು ಉಂಟಾಗುತ್ತವೆ. ಕೆಲವೊಮ್ಮೆ ರಕ್ತಪಾತದವರೆಗೂ ಸ್ಥಿತಿ ತಲುಪುತ್ತದೆ. ಇಂತಹ ಸ್ಥಿತಿಯಲ್ಲಿ ಸಜ್ಜನ ಪತ್ನಿಯರನ್ನು ವಿವಾಹ ಮಾಡಿಕೊಳ್ಳಲು ಸ್ವಯಂ ಅನುಮತಿ ನೀಡುತ್ತಾರೆ. ಆದುದರಿಂದ ಈ ವಿಷಯದಲ್ಲಿ ನೀವು ಎಷ್ಟು ಗಂಭೀರವಾಗಿ ಯೋಚಿಸುವರೋ ಅಷ್ಟೇ ಸ್ಪಷ್ಟ ಹಾಗೂ ಪ್ರಕಾಶದಾಯಕವಾಗಿ ಕಾಣುವುದು. ಈ ವಿಷಯದಲ್ಲಿ ಆಕ್ಷೇಪವೆತ್ತಲು ಕ್ರೈಸ್ತರಿಗಂತೂ ಹಕ್ಕೇ ಇರುವುದಿಲ್ಲ. ಏಕೆಂದರೆ ಅವರ ನಂಬಿಗಸ್ತ ಪ್ರವಾದಿ ಮತ್ತು ದೈವಿಕ ಸಂಬಂಧಿ ಈಸ ಮಸೀಹ್(ಅ) ರವರ ಮಹಾತ್ಮರುಗಳು

*(ಪುಟ ಸಂಖೆ 09 ರಲ್ಲಿ ಮುಂದುವರಿಸಲಾಗಿದೆ)*

**ಒಂದು ಸಮಯಕ್ಕೆ ಮುಸಲ್ಮಾನರು ತನ್ನ ಮಕ್ಕಳ ತರಬೇತಿಯ ಕರ್ತವ್ಯದಲ್ಲಿ ಆಲಸ್ಯ ವಹಿಸಿದರು ಅಥವಾ ಅವರು ವಿವಾಹ ವಿಷಯದಲ್ಲಿ ಜಾಗ್ರತೆ ವಹಿಸಲಿಲ್ಲ. ಅವರು ತಮ್ಮ ಮನೆಯಲ್ಲಿ ಇಸ್ಲಾಮಿ ಆಚಾರಕ್ಕೆ ಹೊಂದದಂತಹ ಸ್ತ್ರೀಯರನ್ನು ಬರಮಾಡಿಕೊಂಡರು. ಅದರ ಪರಿಣಾಮವಾಗಿ ರಸೂಲುಲ್ಲಾಹ್(ಸ) ಮತ್ತು ಅವರ ಸಹಾಬರುಗಳು ನಿರ್ಮಿಸಿದಂತಹ ಆ ಭವ್ಯವಾದ ಕಟ್ಟಡವು ತಮ್ಮ ಕೈಗಳಿಂದಲೇ ಬಿದ್ದು ಹೋಗುವಂತೆ ಮಾಡಿಕೊಂಡರು.**

ಸಯ್ಯುದ್‌ನಾ ಹಝ್‌ರತ್ ಮುಸ್ಲಿಹ್ ಮೌಊದ್(ರ) **ಸುಮ್ಮ ಜಅಲ್‌ನಾಕುಮ್ ಖಲಾಇಫ ಫಿಲ್ ಅರ್‌ಝಿ ಮಿಮ್ ಬಅದಿಹಿಮ್ ಲಿನನ್‌ಝುರ ಕೈಫ ತಅಲಮೂನ್** ಸೂರಃ ಯೂನುಸ್ ವಚನ:15 ರ ವ್ಯಾಖ್ಯಾನ ಮಾಡುತ್ತ ಹೇಳಿದರು. ಕರ್ಮಗಳು ಎರಡು ವಿಧಗಳದ್ದಾಗಿರುತ್ತದೆ. ಒಂದು ಕರ್ಮವು ಮನುಷ್ಯನನ್ನು ದೈವಿಕ ಅನುಗ್ರಹಗಳಿಗೆ ಪಾತ್ರರಾಗುವಂತೆ ಮಾಡುತ್ತದೆ. ಎರಡನೆಯದು ಆ ಕರ್ಮಗಳು ದೊರೆತ ಅನುಗ್ರಹಗಳನ್ನು ಖಾಯಂ ಆಗಿರಿಸಲು ಅನಿವಾರ್ಯವಾಗಿರುತ್ತದೆ. ಎಷ್ಟೋ ವಿದ್ಯಾರ್ಥಿಗಳು ವಿದ್ಯಾರ್ಥಿಯಾಗಿರುವಾಗ ಬಹಳ ಚತುರರಾಗಿರುತ್ತಾರೆ. ಆದರೆ ಜೀವನ ಕ್ರಮದ ಆಗುಹೋಗುಗಳಲ್ಲಿ ಅಸಫಲರಾಗುತ್ತಾರೆ. ಅದೇ ಅವಸ್ಥೆ ಸಮುದಾಯಗಳದ್ದಾಗಿರುತ್ತದೆ. ಕೆಲವು ಸಮುದಾಯಗಳು ವೈಭವ ಅಧಿಕಾರ ದೊರೆಯುವುದಕ್ಕಿಂತ ತುಂಬ ಒಳ್ಳೆಯ ಮಾದರಿಯನ್ನು ತೋರಿಸಿರುತ್ತಾರೆ. ಆದರೆ ಅಧಿಕಾರ ಸಿಕ್ಕಿದ ಮೇಲೆ ಸದಾಚಾರದ ಮಟ್ಟ ನಿಗ್ರಹಿಸುವುದು ದುಸ್ತರವಾಗುತ್ತದೆ. ಎರಡನೆಯದಾಗಿ ಈ ವಾಕ್ಯವನ್ನು ಹೆಚ್ಚಿಸಲು

*(ಪುಟ ಸಂಖೆ 10 ರಲ್ಲಿ ಮುಂದುವರಿಸಲಾಗಿದೆ)*

لَآ اِلٰہَ اِلَّا اللّٰہُ مُحَمَّدٌ رَّسُوْلُ اللّٰہِ

## ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِی العَالَمِ ✿ شَرَّ السُّمُوْمِ عَدَاوَةُ الصُّلَحَاءِ

## ಅಬ್ದುಲ್ಲ ಆಥಮನಿಗೆ ಮಹೋನ್ನತವಾದ ದೃಷ್ಟಾಂತ ತೋರಿಸಲು ಪಂಥಹ್ವಾನ: ದೃಷ್ಟಾಂತ ತೋರಿಸಿದ ಪಕ್ಷದಲ್ಲಿ ಎಲ್ಲಾ ಆಸ್ತಿ ಆಥಮನಿಗೆ ಕೊಡುವ ವಾಗ್ದಾನ.

ಸಯ್ಯದ್‌ನಾ ಹಝ್‌ರತ್ ಮೌಊದ್(ಅ) ರವರ ಈ ಪಂಥಹ್ವಾನ ಅವರ ಗ್ರಂಥ ಹುಜ್ಜತುಲ್ ಇಸ್ಲಾಂ ಸಂಪುಟ 6 ರಲ್ಲಿ ಮುದ್ರಿತಗೊಂಡಿದೆ. ನಾವು ಹಿಂದಿನ ಸಂಚಿಕೆಯಲ್ಲಿ ವಿವರಿಸಿದೆವು. ಅಮೃತಸರ ಚರ್ಚಾಕೂಟವು ಸಯ್ಯದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) ಮತ್ತು ಪಾದರಿ ಅಬ್ದುಲ್ಲ ಆಥಮ್ ಅವರ ಮಧ್ಯೆ ಅಮೃತಸರದಲ್ಲಿ 2 ಮೇ 1893 ರಿಂದ 5 ಜೂನ್ 1893 ರವರೆಗೆ ನಡೆದಿತ್ತು. ನಂತರ ಅದು "ಜಂಗೆ ಮುಖದ್ದಸ್ ಹೆಸರಿನ ಗ್ರಂಥದಲ್ಲಿ ಪ್ರಕಟಿಸಲಾಯಿತು. ಡಾ॥ ಪಾದರಿ ಹೆನ್ರಿ ಮಾರ್ಟಿನ್ ಕ್ಲಾರ್ಕ್ ಅದರ ಆಯೋಜಕರಾಗಿದ್ದರು. ಅವರು ಅಬ್ದುಲ್ಲ ಆಥಮನನ್ನು ಕ್ರೈಸ್ತರ ಪರವಾಗಿ ವಾದಿಸಲು ನಿಯುಕ್ತಗೊಳಿಸಿದರು. ಈ ಚರ್ಚಾಕೂಟ ಏರ್ಪಡಿಸುವ ಉದ್ದೇಶ ಅದರ ಹಿನ್ನಲೆಯಲ್ಲಿ ಹಿಂದಿನ ಸಂಚಿಕೆಯಲ್ಲಿ ನಾವು ವಿವರ ನೀಡಿರುತ್ತೇವೆ.

ಸಯ್ಯದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) ಪ್ರಾರಂಭದಿಂದಲೇ ಈ ಮಾತಿಗೆ ಒತ್ತು ಕೊಡುತ್ತಾ ಬಂದಿದ್ದರು. ಕೇವಲ ಚರ್ಚೆ ಮಾಡುವುದರಿಂದ ಏನು ಪ್ರಯೋಜನವಿಲ್ಲ. ಇದಕ್ಕಿಂತ ಮುಂಚೆಯೂ ಇಂತಹ ಹಲವು ಚರ್ಚಾಕೂಟ ಏರ್ಪಡಿಸಲಾಗಿದೆ. ಇಂತಹ ಚರ್ಚಾಕೂಟದಲ್ಲಿ ಎಂದೂ ಪ್ರತಿಸ್ಪರ್ಧಿ ತನ್ನ ಸೋಲು ಒಪ್ಪಿಕೊಂಡ ಉದಾಹರಣೆ ಇಲ್ಲ. ಬದಲು ಉಭಯೇತ್ರರು ತಾವೇ ವಿಜಯಿಯಾಗಿದ್ದೇವೆ ಎಂದು ವಾದಿಸುತ್ತಾರೆ. ಆದುದರಿಂದ ಇಂತಹದೊಂದು ಸ್ಪರ್ಧೆ ಏರ್ಪಡಿಸಬೇಕು. ಅದರಿಂದ ಲೋಕಕ್ಕೆ ಸ್ಪಷ್ಟವಾದ ಸಂದೇಶ ಹೋಗಬೇಕು. ಒಬ್ಬ ಸಾಮಾನ್ಯ ಅನಕ್ಷರಸ್ತ ಮನುಷ್ಯನು ಸಹ ಸರಳವಾಗಿ ತೀರ್ಮಾನಿಸುವಂತಿರಬೇಕು ಯಾರು ವಿಜಯಿಯಾಗಿದ್ದಾರೆಂದು ಮತ್ತು ಯಾರಿಗೆ ಸೋಲು ಉಂಟಾಗಿದೆ ಎಂದು. ಯಾರ ಜೊತೆಯಲ್ಲಿ ಅಲ್ಲಾಹನ ಅಭಯವಿದೆ ಮತ್ತು ಯಾರಿಗೆ ಅವನ ಅಭಯವಿಲ್ಲ, ಉದಾಹರಣೆಗೆ ಒಬ್ಬ ವ್ಯಕ್ತಿಯು ಭವಿಷ್ಯವಾಣಿ ಮಾಡಬೇಕು. ಅವನು ಒಂದು ವರ್ಷದವರೆಗೆ ಪರಲೋಕ ಸೇರುವನು ಅಥವಾ ಅವನು ಯಾವುದಾದರೊಂದು ಭಯಂಕವಾದ ರೋಗಕ್ಕೆ ತುತ್ತಾಗುವನು. ಅದರಿಂದ ಅವನ ಜೀವನ ಒಂದು ಶಿಕ್ಷೆಯಂತಾಗಬೇಕು. ಈ ಭವಿಷ್ಯವಾಣಿ ಪೂರ್ಣಗೊಂಡಾಗ ಪ್ರತಿಯೊಬ್ಬರಿಗೆ ಈ ದೃಷ್ಟಾಂತ ಸ್ಪಷ್ಟವಾಗಿ ಕಾಣಬಹುದಾಗಿದೆ ಮತ್ತು ಯಾವುದೇ ಸಂಶಯಕ್ಕೆ ಕಾರಣವಿರುವುದಿಲ್ಲ. ಅಂದ ಹಾಗೆ ಅವರು ಇಂತಹುದೇ ಆಧ್ಯಾತ್ಮಕ ಸ್ಪರ್ಧೆಗಾಗಿ ಆಹ್ವಾನಿಸುತ್ತ ಹೇಳಿದರು. "ಈ ಆರು ದಿನಗಳ ಚರ್ಚೆಯ ನಂತರ ಅಂದರೆ ಉಭಯತ್ರರು ತಮ್ಮ ತಮ್ಮ ಆರು ದಿನಗಳನ್ನು ಪೂರ್ಣಗೊಳಿಸಿಕೊಂಡ ನಂತರ "ಮುಬಾಹಲ" ವು ಏರ್ಪಡಿಸಬೇಕು. ಅದರಲ್ಲಿ ಕೇವಲ ಉಭಯತ್ರರು ತಮ್ಮ ಧರ್ಮದ ಪುಷ್ಟಿಗೋಸ್ಕರ ಅಲ್ಲಾಹನಿಂದ (ದೇವನಿಂದ) ದೈವಿಕ ದೃಷ್ಟಾಂತ ಬೇಡಬೇಕು. ಆ ದೃಷ್ಟಾಂತಕ್ಕಾಗಿ ಒಂದು ವರ್ಷದ ಅವಧಿ ನಿಗದಿಪಡಿಸಬೇಕು. ಆಗ ಯಾವ ಪಕ್ಷದ ಪರವಾಗಿ ಮಾನವ ಸಾಮರ್ಥ್ಯಕ್ಕೆ ಹೊರತಾದ ದೈವಿಕ ದೃಷ್ಟಾಂತ ಪ್ರಕಟವಾಗುವುದೋ. ಪ್ರತಿಸ್ಪರ್ಧಿ ಪಕ್ಷಕ್ಕೆ ಅಂತಹ ದೃಷ್ಟಾಂತ ಪ್ರಕಟವಾಗುವುದು. ಪ್ರತಿಸ್ಪರ್ಧಿ ಪಕ್ಷ ಅಂತಹ ದೃಷ್ಟಾಂತ ತೋರಿಸಲು ಅಸಮರ್ಥವಾಗಿರಬೇಕು. ಆಗ ಜರೂರಾಗಿ ಸೋಲುಂಡ ಪಕ್ಷವು ವಿಜಯಿಯಾದ ಪಕ್ಷದ ಅಂದರೆ ಅವನ ಪಕ್ಷದಲ್ಲಿ ದೇವಾನುಗ್ರಹದ ದೃಷ್ಟಾಂತ ಕಂಡು ಒಪ್ಪುವಂತಿರಬೇಕು. ಇಂತಹ ಪರಿಸ್ಥಿತಿಯಲ್ಲಿ ಸತ್ಯ ಮಿಥ್ಯವು ಸ್ಪಷ್ಟವಾಗಿ ಬಹಿರಂಗಗೊಳ್ಳುವುದು. ಏಕೆಂದರೆ ಒಂದು ಪವಾಡ ರೀತಿಯ ದೃಷ್ಟಾಂತ ಪ್ರತಿಸ್ಪರ್ಧಿಯ ಎದುರಿನಲ್ಲಿ ಗೋಚರಿಸಿದಾಗ ಮತ್ತು ಎದುರಾಳಿ ಪಕ್ಷದಿಂದ ಅದು ಅಸಾಧ್ಯವಾದಾಗ ಎಲ್ಲ ವಾದಗಳು ತಂತಾನೆ ಅಂತ್ಯಗೊಳ್ಳುವುದು ಮತ್ತು ಸತ್ಯವು ಬಹಿರಂಗಗೊಳ್ಳುವುದು. (ಹುಜ್ಜತುಲ್ ಇಸ್ಲಾಂ ರೂಹಾನಿ ಖಝಾಯಿನ್ ಸಂಪುಟ 6 ಪುಟ 48).

ಸಯ್ಯದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) ಹೇಳಿದರು. ಉಭಯತ್ರರು ತನ್ನ ಕಡೆಯಿಂದ ಒಬ್ಬನು ತನ್ನ ಧರ್ಮದ ಸತ್ಯವನ್ನು ಸಾದರಪಡಿಸಲು ದೃಷ್ಟಾಂತವನ್ನು ಪ್ರಸ್ತುತಪಡಿಸಬೇಕು. ಯಾರು ಪ್ರಸ್ತುತಪಡಿಸುವನೋ ಜರೂರಾಗಿ ಅವನ ಧರ್ಮ ಸತ್ಯ ಎಂದಾಗುವುದು. ಅವರು ಹೇಳಿದರು.

ಸಹಜವಾಗಿ ಉಭಯತ್ರರ ದಾವೆಯಿರುವುದು ತಮ್ಮ ತಮ್ಮ ಧರ್ಮವು ದೈವಿಕ ದೃಷ್ಟಾಂತಗಳು ಹೊಂದಿವೆ ಎಂದು. ಇದು ಸಹ ಉಭಯತ್ರರಿಗೆ ಒಪ್ಪಿತ ಮಾತಾಗಿರುತ್ತದೆ. ನಮ್ಮ ಧರ್ಮದ ಬುನಾದಿ ಸತ್ಯ ಸಾಕ್ಷ್ಯಗಳ ಮೇಲಿದೆ. ಅದು ಬರೀ ಕಥಾರೂಪದಲ್ಲಿಲ್ಲ. ಬದಲು ಇಂದಿಗೂ ತನ್ನ ಸತ್ಯಸಾಕ್ಷ್ಯಗಳೊಂದಿಗೆ ಜೀವಂತವಿದೆ ಎಂದು. ಅಂದ ಹಾಗೆ ಈ ಒಪ್ಪಿತ ಮಾತಾಗಿರುವಾಗ ಸ್ಪರ್ಧೆ ತುಂಬ ಸರಳವಾಗಿ ನಡೆಸಬಹುದಾಗಿದೆ. ಇಸ್ಲಾಂ ಧರ್ಮದ ಯಾರೊಬ್ಬ ವ್ಯಕ್ತಿಯು ಅದರ ಶಿಕ್ಷಣ ಹಾಗೂ ಲಕ್ಷಣಗಳಂತೆ ಪವಿತ್ರ ಖುರ್‌ಆನ್‌ನ ಪ್ರಕಾರ ನನ್ನನ್ನು ಪರಿಪೂರ್ಣ ಮುಸಲ್ಮಾನನೆಂದು ಸಾಬೀತುಪಡಿಸಬೇಕು. ಹಾಗೆ ಸಿದ್ಧಪಡಿಸಿ ತೋರಿಸಲಿಲ್ಲ ಎಂದಾದರೆ ಅವನು ಮೋಸಗಾರನೇ ಹೊರತು ಮುಸಲ್ಮಾನನಲ್ಲ. ಅದೇ ರೀತಿ ಕ್ರೈಸ್ತರ ಬಳಗದಿಂದ ಒಬ್ಬ ವ್ಯಕ್ತಿ ಇಂಜೀಲಿನ ಶಿಕ್ಷಣ ಹಾಗೂ ಲಕ್ಷಣಗಳೊಂದಿಗೆ ತನ್ನನ್ನು ಸಾಧರಪಡಿಸಬೇಕು. ಹಾಗೆ ಸಿದ್ಧಿಸಿ ತೋರಿಸಲಿಲ್ಲ ಎಂದಾದರೆ ಅವನು ಮೋಸಗಾರನೇ ಹೊರತು ನಿಜವಾದ ಕ್ರೈಸ್ತನಲ್ಲ. ಉಭಯತ್ರರಿಗೂ ಈ ದಾವೆ ಇದೆ. ಯಾವ ಪ್ರಕಾಶ ಅವರು ಪ್ರವಾದಿತ್ವದ ಜೊತೆಯಲ್ಲಿ ತಂದಿದ್ದರು ಅದು ತಾತ್ಕಾಲಿಕವಾಗಿರಲಿಲ್ಲ. ಬದಲು ಶಾಶ್ವತವಾಗಿದೆ, ಅಂದ ಹಾಗೆ ಯಾವ ಧರ್ಮದಲ್ಲಿ ಈ ಪ್ರಕಾಶ ಶಾಶ್ವತವಾದುದು ಎಂದು ಸಾಬೀತಾಗುವುದೇ, ವಿವೇಕವಂತರು ನಿರ್ಣಯಿಸುವರು ಅದೇ ಧರ್ಮ ಸತ್ಯವಾಗಿದೆ ಎಂದು." (ಅದೇ ಪುಟ 61, 62).

ಯಾವುದೇ ಧರ್ಮ ಸತ್ಯವೆಂದು ಹೇಳಲು ಸಾಕ್ಷವೇನೆಂದರೆ ದೇವನ ಪುಷ್ಟಿ ಸಹಕಾರ ಅದರ ಬೆನ್ನಿಗೆ ಇರಬೇಕು. ಆಗ ಅದು ಸತ್ಯವೆಂದಾಗುವುದು. ಅಂದ ಹಾಗೆ ಹಝ್‌ರತ್ ಮಸೀಹ್ ಮೌಊದ್(ಅ) ಹೇಳಿದರು. ನಾನು ಈ ಚರ್ಚೆ ಕೇವಲ ಭೌತಿಕ ಮಟ್ಟಕ್ಕೆ ಇರಿಸಲು ಬಯಸುವುದಿಲ್ಲ. ಬದಲು ದೈವಿಕ ಸಾಕ್ಷ್ಯವು ಒಳಗೊಂಡಿರಬೇಕು. ಸ್ಪರ್ಧೆಯು ಕೇವಲ ಆಧ್ಯಾತ್ಮಿಕ ಜೀವನ ಮತ್ತು ದೈವಿಕ ಬೆಂಬಲ ಹಾಗೂ ಆತ್ಮಜ್ಯೋತಿ ಯಾವ ಧರ್ಮದಲ್ಲಿದೆ, ನಾನು ಮತ್ತು ನನ್ನ ಪ್ರತಿಸ್ಪರ್ಧಿ ತಮ್ಮ ತಮ್ಮ ಗ್ರಂಥಗಳ ಅನುಗ್ರಹಗಳನ್ನು ತನ್ಮೂಲಕ ಸಾಬೀತುಪಡಿಸಬೇಕು. ಹೌದು ಅವರು ಬಯಸುವುದಾದರೆ ಅವರ ಈ ಎರಡು ವಿಶ್ವಾಸಗಳು ಅಂದರೆ ಮಸೀಹರು ದೇವನಾಗಿದ್ದನೋ ಅಥವಾ ಇತರ ಪ್ರವಾದಿಗಳಂತೆ ಕೇವಲ ಓರ್ವ ಪ್ರವಾದಿಯಾಗಿದ್ದಾರೋ. ಅದರ ಬಗ್ಗೆಯೂ ನಿರ್ಣಯವಾಗಲಿ ಎಂದರೆ ಇದು ಸಹ ಒಳ್ಳೆಯದೇ. ಆದರೆ ಅದಕ್ಕಿಂತ ಮುಂಚೆ ಆಧ್ಯಾತ್ಮಿಕ ಹಾಗೂ ದೈವಿಕ ಪರೀಕ್ಷೆ ಅನಿವಾರ್ಯವಾಗಿದೆ. (ಅದೇ ಪುಟ 66).

ಸಯ್ಯದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) ಅವರು 15 ಸಹಾಬರನ್ನು ಒಳಗೊಂಡ ಒಂದು ತಂಡ ಮಾರ್ಟಿನ್ ಕ್ಲಾರ್ಕ್ ಬಳಿ ಅಮೃತಸರಕ್ಕೆ ಕಳುಹಿಸಿಕೊಟ್ಟಿದ್ದರು. ಏಕೆಂದರೆ ಚರ್ಚೆಯ ಶರತ್ತುಗಳು ಮತ್ತು ಇತರ ವಿಧಿ ನಿಯಮಗಳು ಸಿದ್ಧಪಡಿಸಲೆಂದು. ಶರತ್ತುಗಳೆಲ್ಲ ಸಿದ್ಧಪಡಿಸಿದ ನಂತರ ಮಾರ್ಟಿನ್ ಕ್ಲಾರ್ಕ್ ಅವರು ಹಜ್‌ರತ್ ಮಸೀಹ್ ಮೌಊದ್(ಅ) ಅವರಿಗೆ ಬರೆದರು. ನೀವು ಈ ಶರತ್ತುಗಳನ್ನು ಒಪ್ಪುವರೋ ಅಥವಾ ಎಲ್ಲ ತಿಳಿಸಿಕೊಡಿರಿ ಎಂದು. ಆಗ ಹಝ್‌ರತ್ ಮಸೀಹ್ ಮೌಊದ್(ಅ) ಹೇಳಿದರು.

ನಾನು ಈ ಎಲ್ಲಾ ಶರತ್ತುಗಳನ್ನು ಅದು ನಿಮ್ಮ ಮತ್ತು ನಮ್ಮ ಮಿತ್ರರೊಡನೆ ನಿರ್ಣಯಿಸಲ್ಪಟ್ಟು ಸಹಿ ಹೊಂದಿರುವುದನ್ನು ಅಂಗೀಕರಿಸುತ್ತೇನೆ. ಆದರೆ ಮೊದಲು ಈ ಮಾತು ನಿರ್ಣಯಿಸಲ್ಪಡಬೇಕು. ಈ ಚರ್ಚೆ ಅಥವಾ ಸ್ಪರ್ಧೆಯ ಮೂಲ ಉದ್ದೇಶವೇನು. ಇದೇನು ಮಾಮೂಲಿನಂತೆ ನಡೆಯುವ ಚರ್ಚೆಗಳೇ, ಅದು ಹಲವು ವರ್ಷಗಳಿಂದ ಕ್ರೈಸ್ತರ ಮತ್ತು ಮುಸ್ಲಿಮರ ಮಧ್ಯೆ ಪಂಜಾಬ್ ಮತ್ತು ಭಾರತದಲ್ಲಿ ನಡೆಯುತ್ತಲೇ ಇದೆ. ಅದರ ಪರಿಣಾಮ ಎಂದರೆ ಮುಸಲ್ಮಾನರ ಭಾವನೆಗಳಲ್ಲಿ ನಾವು ಕ್ರೈಸ್ತರನ್ನು ಪ್ರತಿಯೊಂದು ವಿಷಯದಲ್ಲಿ ಸೋಲಿಸಿದ್ದೇವೆ ಎಂದು ಭಾವಿಸುತ್ತಾರೆ. ಅದೇ ರೀತಿ ಕ್ರೈಸ್ತರು ತಮ್ಮ ಮನೆಗಳಲ್ಲಿ ಆಡಿಕೊಳ್ಳುತ್ತಾರೆ. ಮುಸಲ್ಮಾನರು ನಿರುತ್ತರರಾದರೆಂದು. ಪರಿಣಾಮ ಇಷ್ಟೇ ಎಂದಾದರೆ ಅದು ನಿಷ್ಪ್ರಯೋಜಕ ಮತ್ತು ಏನೂ ಫಲವಿಲ್ಲ. ಆದುದರಿಂದ ಇದೀಗ ಚರ್ಚಾ ವಿಧಾನ, ಬದಲಿಸುವುದು ಲೇಸು. ಅಂದ ಹಾಗೆ ನನ್ನ ದೃಷ್ಟಿಯಲ್ಲಿ ಉತ್ತಮವಾದುದೇನೆಂದರೆ ಒಂದು ಆಧ್ಯಾತ್ಮಿಕ ಸ್ಪರ್ಧೆ ಮುಬಾಹಲ, ರೂಪದಲಿ ಏರ್ಪಡಿಸಬೇಕು. ಮೊದಲನೆಯದಾಗಿ ಪ್ರತಿ ಆರು ದಿನಗಳು ನಮ್ಮ ಮಿತ್ರರು ನಿರ್ಣಯಿಸಿಕೊಂಡಂತೆ ನಡೆಯಲಿ, ಏಳನೆಯ ದಿನ "ಮುಬಾಹಲ" ಆಗಲಿ. ಮುಬಾಹಲದಲ್ಲಿ ಉಭಯತ್ರರು ಹೀಗೆ ಪ್ರಾರ್ಥಿಸಬೇಕು. ಉದಾಹರಣೆಗೆ ಕ್ರೈಸ್ತರು ಹೇಳಬೇಕು. ನಾನು ವಿಶ್ವಾಸ ಹೊಂದಿದಂತಹ ಆ ಈಸಾ ಮಸೀಹ ನಾಸರಿ ಅವರು ದೇವನಾಗಿದ್ದಾನೆ ಮತ್ತು ಖುರ್‌ಆನ್ ಮನುಷ್ಯನು ಸೃಷ್ಟಿಸಿದ ಸುಳ್ಳಾಗಿದೆ ಹೊರತು ದೇವಗ್ರಂಥವಲ್ಲ. ಈ ಮಾತಿನಲ್ಲಿ ನಾನು ಸತ್ಯವಂತ ಎಂದಾಗಲಿಲ್ಲವಾದರೆ ಒಂದು ವರ್ಷದೊಳಗೆ ನನಗೆ

*(ಪುಟ ಸಂಖೆ 10 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದಾಗಿ ನಾನು ಕೇಳಿದ್ದೇನೆ: ಯಾರು ಹಝ್ರತ್ ಅಲಿಯನ್ನು(ರ) ಪ್ರೀತಿಸುತ್ತಾನೋ ಅವನು ನನ್ನನ್ನು ಪ್ರೀತಿಸಿದಂತೆ. ಯಾರು ನನ್ನನ್ನು ಪ್ರೀತಿಸಿದನೋ ಅವನು ಅಲ್ಲಾಹನನ್ನು ಪ್ರೀತಿಸಿದನು.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ, ಅಳಿಯ ಹಾಗೂ ಅಬೂ ತುರಾಬ್ ಹಝ್ರತ್ ಅಲಿ(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಅವರು ಎಲ್ಲ ಸದ್ಗುಣಗಳಲ್ಲೂ ವಾಕ್ಚಾತುರ್ಯ ಮತ್ತು ವಾಕ್ಪಟುತ್ವದಲ್ಲೂ ಪರಿಪೂರ್ಣತೆ ಹೊಂದಿದ್ದರು. ಯಾರು ಅವರ ಪರಿಪೂರ್ಣತೆಯನ್ನು ನಿರಾಕರಿಸುತ್ತಾರೋ ಅವರು ನಾಚಿಕೆಗೇಡಿನ ಮಾರ್ಗವನ್ನು ಅವಲಂಬಿಸಿರುವರು. (ಹಝ್ರತ್ ಮಸೀಹ್ ಮೌಊದ್(ಅ))**

**ಹಝ್ರತ್ ಅಲಿ(ರ) ಹೇಳಿದರು: ಕೇಳಿರಿ, ನನ್ನ ಕುರಿತು ಎರಡು ವಿಧಗಳ ಜನರು ನಾಶ ಹೊಂದುವರು. ಒಂದು ವಿಭಾಗದವರು ಪ್ರೇಮದಲ್ಲಿ ಮಿತಿಮೀರಿ ಕೊಂಡು ನನಗೆ ಸಲ್ಲಬಾರದ ಸ್ಥಾನವನ್ನು ನೀಡುವರು. ಇನ್ನೊಂದು ವಿಭಾಗದವರು ನನ್ನೊಡನೆ ಹಗೆ ಹೊಂದುವರು. ಅವರು ನನ್ನೊಡನೆ ಇರುವ ಶತ್ರುತ್ವದ ಕಾರಣದಿಂದ ನನ್ನ ಮೇಲೆ ಆರೋಪ ಹೊರಿಸುವರು.**

**ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿಗೆ ಹೀಗೆ ಉಪದೇಶಿಸಿದರು: ಹೆ ಅಲಿ, ನಿನ್ನ ತಬ್ಲೀಗಿನಿಂದ ಒಬ್ಬ ವ್ಯಕ್ತಿ ಕೂಡ ಸತ್ಯವಿಶ್ವಾಸ ಕೈಗೊಂಡರೆ ಅದು ನಿನಗೆ ಎರಡು ಪರ್ವತಗಳ ನಡುವೆ ಹೋಗುತ್ತಿರುವ ದೊಡ್ಡದಾದ ಒಂದು ಕೂಟ ಕುರಿಗಳು ಮತ್ತು ಆಡುಗಳಿಗಿಂತ ಉತ್ತಮ.**

**ಸಹಾಬರವರ ತಖ್ವ(ಭಯಭಕ್ತಿ) ಹೇಗಿತ್ತು ಎಂದರೆ ಅವರು ಪವಿತ್ರ ಖುರ್‌ಆನಿನ ಪ್ರತಿಯೊಂದು ಉಪದೇಶಗಳನ್ನು ಪಾಲಿಸಲು ಪ್ರಯತ್ನಿಸುತ್ತಿದ್ದರು.**

**ಎಂ.ಟಿ.ಎ. ಗಾನದ ಹೆಸರಲ್ಲಿ ಇಪ್ಪತ್ತಾನಾಲ್ಕು ಘಂಟೆಗಳ ಬ್ರಾಡ್‌ಕಾಸ್ಟ್ ಆಗುವ ಹೊಸ ಟಿ.ವಿ ಚಾನೆಲ್‌ನ ಉದ್ಘಾಟನೆ**

**ಅಲ್‌ಜೀರಿಯಾ ಮತ್ತು ಪಾಕಿಸ್ತಾನದ ಅಹ್ಮದಿಯರಿಗಾಗಿ ದುಆ ಮಾಡುವ ವಿಶೇಶ ಕೋರಿಕೆ**

**ವಿಶೇಷವಾಗಿ ಪಾಕಿಸ್ತಾನದಲ್ಲಿರುವ ಅಹ್ಮದಿಯರು ಐಚ್ಛಿಕ ಸತ್ಕರ್ಮಗಳನ್ನು ಮತ್ತು ದುಆಗಳನ್ನು ಹೆಚ್ಚು ಹೆಚ್ಚು ಮಾಡಬೇಕು. ಈ ದುಆಗಳಲ್ಲಿ ರಬ್ಬಿ ಕುಲ್ಲಿ ಶೈಇನ್ ಖಾದಿಮುಕ ರಬ್ಬಿ ಫಹ್‌ಫಝ್ನೀ ವನ್ಸುರ್‌ನೀ ವರ್‌ಹಮ್‌ನೀ ಎಂಬ ದುಆವನ್ನು ಅಧಿಕವಾಗಿ ಮಾಡಿರಿ.ಅಲ್ಲಾಹುಮ್ಮ ಇನ್ನಾ ನಜ್‌ಅಲುಕ ಫೀ ನುಹೂರಿಹಿಂ ವ ನಊಧುಬಿಕ ಮಿನ್ ಶುರೂರಿಹಿಂ ಎಂಬ ದುಆ ಸಹ ಹೆಚ್ಚಾಗಿ ಮಾಡಿರಿ. ಅಲ್ಲಾಹನು ಅವರಿಗೆ ಸೌಭಾಗ್ಯ ನೀಡಲಿ ಮತ್ತು ಬೇಗನೇ ಅಲ್ಲಿನ ಸ್ಥಿತಿಗತಿಗಳನ್ನು ಅಲ್ಲಾಹನು ಸರಿಪಡಿಸಲಿ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **15–01–2021** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَ اِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ಪ್ರಸ್ತಾಪ ನಡೆಯುತ್ತಿತ್ತು. ಇಂದು ಸಹ ಅವರದ್ದೇ ಪ್ರಸ್ತಾಪ ನಡೆಯುವುದು. ಅವರ ಬಗ್ಗೆ ನಾನು ಒಟ್ಟುಗೂಡಿಸಿದ್ದ ವಿಷಯಗಳು ಇಂದು ಮುಕ್ತಾಯವಾಗುವುದು ಇನ್‌ಶಾ ಅಲ್ಲಾಹ್.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹಝ್ರತ್ ಹಸನ್(ರ) ಹಝ್ರತ್ ಅಲಿಯೊಡನೆ(ರ) ಕೇಳಿದರು: ನಿಮಗೆ ನನ್ನೊಂದಿಗೆ ಪ್ರೀತಿಯಿದೆಯೇ? ಹೌದೆಂದು ಹಝ್ರತ್ ಅಲಿ(ರ) ಹೇಳಿದರು. ಇದನ್ನು ಕೇಳಿ, ಒಂದು ಹೃದಯದಲ್ಲಿ ಎರಡು ಸ್ನೇಹಗಳು ಹೇಗೆ ಸೇರುವುದು ಎಂದು ಯೋಚಿಸಿ ಹಝ್ರತ್ ಹಸನ್(ರ) ಅಚ್ಚರಿಗೊಂಡರು. ಎರಡೂ ಪ್ರೇಮಗಳು ಮುಖಾಮುಖಿಯಾದರೆ ನೀವು ಯಾರನ್ನು ಪ್ರೀತಿಸುತ್ತೀರಿ ಎಂದು ಹಝ್ರತ್ ಹಸನ್ ಪುನಃ ಸವಾಲು ಕೇಳಿದರು. ಹಾಗಾದರೆ ಅಲ್ಲಾಹನೊಂದಿಗೆ ಎಂದು ಹಝ್ರತ್ ಅಲಿ(ರ) ಹೇಳಿದರು. (ಮಲ್‌ಫೂಝಾತ್, ಸಂಪುಟ–7, ಪುಟ–57)

ಈ ಘಟನೆಯನ್ನು ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ:

ಹಝ್ರತ್ ಹಸನ್(ರ) ಹಝ್ರತ್ ಅಲಿಯೊಡನೆ(ರ) ಕೇಳಿದರು: ನಿಮಗೆ ನನ್ನೊಂದಿಗೆ ಪ್ರೀತಿಯಿದೆಯೇ? ಹೌದೆಂದು ಹಝ್ರತ್ ಅಲಿ(ರ) ಹೇಳಿದರು. ನಿಮಗೆ ಅಲ್ಲಾಹನೊಂದಿಗೆ ಸಹ ಪ್ರೇಮವಿದೆಯೇ? ಎಂದು ಹಝ್ರತ್ ಹಸನ್ ಪುನಃ ಸವಾಲು ಕೇಳಿದರು. ಹೌದು ಎಂದು ಹಝ್ರತ್ ಅಲಿ(ರ) ಹೇಳಿದರು. ಹಝ್ರತ್ ಹಸನ್ ಹೇಳಿದರು: ಹಾಗಾದರೆ ನೀವು ಒಂದು ರೀತಿಯಲ್ಲಿ ಶಿರ್ಕಿಗೆ ಒಳಗಾಗುತ್ತಿದ್ದೀರಿ. ಅಲ್ಲಾಹನೊಂದಿಗಿನ ಪ್ರೇಮದಲ್ಲಿ ಬೇರೆಯಾರನ್ನಾದರೂ ಸಹಭಾಗಿಯನ್ನಾಗಿ ಮಾಡುವುದು ಶಿರ್ಕ್ ಅಲ್ಲವೇ? ಹಝ್ರತ್ ಅಲಿ(ರ) ಹೇಳಿದರು: ಹೇ ಹಸನ್, ನಾನು ಶಿರ್ಕ್ ಮಾಡುತ್ತಿಲ್ಲ. ನಿಸ್ಸಂಶಯವಾಗಿಯೂ ನಾನು ನಿನ್ನನ್ನು ಪ್ರೀತಿಸುತ್ತಿದ್ದೇನೆ. ಆದರೆ ನಿನ್ನೊಡನೆ ಇರುವ ಪ್ರೀತಿ ಅಲ್ಲಾಹನೊಡನೆ ಇರುವ ಪ್ರೀತಿಯ ಮುಂದೆ ಬಂದರೆ, ನಾನು ಬೇಗನೇ ಅಲ್ಲಾಹ ನೊಡನೆ ಇರುವ ಪ್ರೀತಿಯನ್ನು ಆರಿಸಿ ಕೊಂಡು ನಿನ್ನೊಡನೆ ಇರುವ ಪ್ರೀತಿಯನ್ನು ಉಪೇಕ್ಷಿಸುವೆನು.
(ಖುರೂಲೆ ಊಲ ಕೆ ನಾಮ್ವರ್ ಖವಾತೀನ್ ಔರ್ ಸಹಾಬಿಯಾತ್ ಕೆ ಈಮಾನ್ ಅಫ್ರೋಝ್......... ಅನ್ವಾರುಲ್ ಉಲೂಮ್, ಸಂಪುಟ–21, ಪುಟ–623)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಅಲಿಗೆ(ರ) ಏನಾದರೂ ದೊಡ್ಡ ವಿಪತ್ತು ಎದುರಾದರೆ, ಅವರು ಅಲ್ಲಾಹನಲ್ಲಿ ಹೀಗೆ ದುಆ ಮಾಡುತ್ತಿದ್ದರು: **ಯಾಕಾಫ್ ಹಾ ಯಾ ಐನ್ ಸ್ವಾದ್ ಇಗ್‌ಫಿರ್‌ಲೀ.** (ತಫ್ಸೀರೆ ಕಬೀರ್, ಸಂಪುಟ–5, ಪುಟ–17)

ಉಮ್ಮೇ ಹಾನಿಯ ಒಂದು ವರದಿಯ ಪ್ರಕಾರ ಈ ತುಂಡು ಅಕ್ಷರಗಳ ಬಗ್ಗೆ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದರು: ಕಾಫ್ ಎಂದರೆ ಅಲ್ಲಾಹನ ಗುಣನಾಮವಾದ ಕಾಫಿ ಎಂದಾಗಿದೆ. ಹಾ ಎಂದರೆ ಹಾದೀ,

ಐನ್ ಎಂದರೆ ಆಲಿಂ ಅಥವಾ ಅಲೀಂ ಮತ್ತು ಸ್ವಾದ್ ಎಂದರೆ ಸಾದಿಖ್ ಎಂದಾಗಿದೆ. (ಅತಫ್ಸೀರೆ ಕಬೀರ್, ಸಂಪುಟ–5, ಪುಟ–17)

ಒಟ್ಟಿನಲ್ಲಿ ಇದರ ಅರ್ಥ ಹೀಗಿದೆ: ಹೇ ಅಲ್ಲಾಹ್, ನೀನೇ ನನಗೆ ಸಾಕು, ನೀನು ಮಾರ್ಗದರ್ಶಕನೂ ಎಲ್ಲವನ್ನೂ ತಿಳಿದವನೂ ಸತ್ಯವಂತನೂ ಆಗಿರುವಿ. ನಿನ್ನ ಈ ಎಲ್ಲ ಗುಣನಾಮಗಳ ಹೆಸರಲ್ಲಿ ನನ್ನನ್ನು ಕ್ಷಮಿಸು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ವ್ಯಾಖ್ಯಾನಗಾರರು ಹಝ್ರತ್ ಅಲಿಯ(ರ) ಒಂದು ಘಟನೆಯನ್ನು ಹೀಗೆ ವಿವರಿಸಿದ್ದಾರೆ: ಹಝ್ರತ್ ಅಲಿ(ರ) ಒಂದು ಬಾರಿ ತನ್ನ ಒಬ್ಬ ಸೇವಕನನ್ನು ಕರೆದರು. ಆದರೆ ಅವನು ಪ್ರತಿಕ್ರಯಿಸಲಿಲ್ಲ. ಪದೇ ಪದೇ ಉಚ್ಚ ಸ್ವರದಲ್ಲಿ ಕರೆದರು. ಆದರೂ ಅವನು ಉತ್ತರಿಸಲಿಲ್ಲ. ಸ್ವಲ್ಪ ಸಮಯದ ನಂತರ ಅವನನ್ನು ಅವರು ಆಕಸ್ಮಿಕವಾಗಿ ತನ್ನ ಮುಂದೆ ಕಂಡರು. ಅವರು ಅವನೊಡನೆ ಕೇಳಿದರು: ಮಾಲಕ್, ಲಂ ತುಜಿಬ್‌ನೀ? ನಿನಗೆ ಏನಾಯಿತು? ನಾನು ನಿನ್ನನ್ನು ಎಷ್ಟು ಸಲ ಕರೆದೆ. ಆದರೆ ನೀನು ಬರದೇ ಇರಲು ಕಾರಣವೇನು? ಅವನು ಹೇಳಿದನು: ನಿಜವೇನೆಂದರೆ, ನನಗೆ ನಿಮ್ಮ ಸೌಮ್ಯತೆಯ ಬಗ್ಗೆ ದೃಢವಿಶ್ವಾಸವಿತ್ತು. ನಿಮ್ಮ ಶಿಕ್ಷೆಯಿಂದ ನಾನು ನನ್ನನ್ನು ಸುರಕ್ಷಿತನೆಂದು ಭಾವಿಸುತ್ತೇನೆ. ಆದ್ದರಿಂದ ನಾನು ನಿಮ್ಮ ಕರೆಗೆ ಉತ್ತರಿಸಲಿಲ್ಲ. ಅವರಿಗೆ ಅವನ ಉತ್ತರ ಇಷ್ಟವಾಯಿತು. ಹಝ್ರತ್ ಅಲಿ(ರ) ಅವನನ್ನು ಸ್ವತಂತ್ರಗೊಳಿಸಿದರು. (ತಫ್ಸೀರೆ ಕಬೀರ್, ಸಂಪುಟ–8, ಪುಟ–255)

ಹುಝೂರ್ ಹೇಳುತ್ತಾರೆ: ಲೌಕಿಕನಾದ ವ್ಯಕ್ತಿಯಾಗಿದ್ದರೆ, ನನ್ನ ಸೌಮ್ಯತೆಯಿಂದ ತಪ್ಪಾದ ಪ್ರಯೋಜನ ಪಡೆಯುತ್ತಿದ್ದಾನೆಂದು ಹೇಳಿಕೊಂಡು ಬಹುಶಃ ಅವನನ್ನು ಶಿಕ್ಷಿಸುತ್ತಿದ್ದನು. ಆದರೆ ಹಝ್ರತ್ ಅಲಿ(ರ) ಅವನನ್ನು ಸಮ್ಮಾನಿಸಿದರು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಅಲಿಯ(ರ) ಮಕ್ಕಳಾದ ಹಸನ್ ಮತ್ತು ಹುಸೈನ್‌ರನ್ನು ಒಬ್ಬ ವ್ಯಕ್ತಿ ಕಲಿಸುತ್ತಿದ್ದರು. ಹಝ್ರತ್ ಅಲಿ(ರ) ಒಂದು ಸಲ ತನ್ನ ಮಕ್ಕಳ ಸಮೀಪದಿಂದ ಹಾದು ಹೋಗುತ್ತಿದ್ದಾಗ, ಅವರ ಮಕ್ಕಳಿಗೆ ಅವರ ಉಸ್ತಾದ್ **ಖಾತಿಮನ್ನಬಿಯ್ಯೀನ್** ಎಂದು ಕಲಿಸುತ್ತಿರುವುದಾಗಿ ಆಲಿಸಿದರು. ಹಝ್ರತ್ ಅಲಿ(ರ) ಹೇಳಿದರು: ನನ್ನ ಮಕ್ಕಳಿಗೆ **ಖಾತಿಮನ್ನಬಿಯ್ಯೀನ್** ಎಂದು ಕಲಿಸಬೇಡಿರಿ. ಬದಲಾಗಿ, **ಖಾತಮನ್ನಬಿಯ್ಯೀನ್** ಎಂದು ಕಲಿಸಿರಿ. ಎಂದರೆ 'ತ' ಎಂಬ ಅಕ್ಷರವನ್ನು ಇಕಾರದಿಂದ ಕಲಿಸಬೇಡಿರಿ. ಬದಲಿಗೆ ಅಕಾರದಿಂದ ಕಲಿಸಿರಿ. ನಿಸ್ಸಂಶಯವಾಗಿಯೂ ಈ ಎರಡು ರೀತಿಯೂ ಸರಿಯೇ. ಆದರೆ ನಾನು **ಖಾತಮನ್ನಬಿಯ್ಯೀನ್** ಎಂದು ಓದುವುದನ್ನು ಹೆಚ್ಚು ಇಷ್ಟಪಡುತ್ತೇನೆ. ಏಕೆಂದರೆ **ಖಾತಮನ್ನಬಿಯ್ಯೀನ್** ಎಂಬುದರ ಅರ್ಥ ಪ್ರವಾದಿಗಳ ಮುದ್ರೆಯೆಂದಾಗಿದೆ. **ಖಾತಿಮುನ್ನಬಿಯ್ಯೀನ್** ಎಂದರೆ ಪ್ರವಾದಿಗಳನ್ನು ಕೊನೆಗೊಳಿಸುವವರು ಎಂದಾಗಿದೆ. (ಫರೀಝೆ ತಬ್‌ಲೀಗ್ ಔರ್ ಅಹ್ಮದಿ ಖವಾತೀನ್, ಅನ್ವಾರುಲ್ ಉಲೂಮ್, ಸಂಪುಟ–20, ಪುಟ–429)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: "ಹಝ್ರತ್ ಅಲಿ(ರ) ಹಾಫಿಝ್ ಎಂದರೆ, ಪವಿತ್ರ ಖುರ್‌ಆನನ್ನು ಕಂಠಪಾಠ ಮಾಡಿದ್ದರು ಎಂದು ಸಾಬೀತಾದ ಸಂಗತಿಯಾಗಿದೆ. ಪವಿತ್ರ ಖುರ್‌ಆನನ್ನು ಅವತೀರ್ಣದ ಕ್ರಮದಲ್ಲಿ ಬರೆಯುವ ಕೆಲಸವನ್ನು ಅವರು ಹಝ್ರತ್ ಪೈಗಂಬರ್(ಸ) ನಿಧನವಾದ ಕೂಡಲೇ ಶುರುಮಾಡಿದರು." (ದೀಬಾಚ ತಫ್ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ–20, ಪುಟ–429)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರರನ್ನು(ಸ) ಸಹಾಬಿಯೋರ್ವರು ಊಟಕ್ಕಾಗಿ ಆಮಂತ್ರಿಸಿದರು. ಕೆಲವು ಸಹಾಬಿಯರನ್ನು ಸಹ ಆಮಂತ್ರಿಸಿದ್ದರು. ಅವರಲ್ಲಿ ಹಝ್ರತ್ ಅಲಿ(ರ) ಸಹ ಇದ್ದರು. ಹಝ್ರತ್ ಅಲಿಯ(ರ) ವಯಸ್ಸು ಇತರರಿಗಿಂತ ಕಡಿಮೆಯಾಗಿತ್ತು. ಆದ್ದರಿಂದ ಕೆಲವು ಸಹಾಬಿಯರು ಅವರೊಡನೆ ತಮಾಷೆ ಮಾಡಲು ಬಯಸಿದರು. ಅವರೆಲ್ಲರು ಖರ್ಜೂರವನ್ನು ತಿಂದುಕೊಂಡು ಅದರ ಬೀಜವನ್ನು ಹಝ್ರತ್ ಅಲಿಯ(ರ) ಮುಂದೆ ಇಡುತ್ತಿದ್ದರು. ಹಝ್ರತ್ ಪೈಗಂಬರ್(ಸ) ಸಹ ಹೀಗೆಯೇ ಮಾಡುತ್ತಿದ್ದರು. ಹಝ್ರತ್ ಅಲಿ(ರ) ಯುವ ಪ್ರಾಯದವರಾಗಿದ್ದರು. ಊಟ ಮಾಡುವುದರಲ್ಲಿ ಮಗ್ನರಾಗಿದ್ದರು. ಮೊದಲು ಅದರ ಕಡೆ ಗಮನವಹಿಸಿರಲಿಲ್ಲ. ನಂತರ ತನ್ನ ಮುಂದೆ ಖರ್ಜೂರದ ಬೀಜಗಳು ರಾಶಿಯಾಗಿ ಇರುವುದನ್ನು ಕಂಡರು. ಅಷ್ಟರಲ್ಲಿ ಸಹಾಬಿಯರು ತಮಾಷೆಯಾಗಿ ಹಝ್ರತ್ ಅಲಿಯೊಡನೆ(ರ) ಹೇಳಿದರು: ನೀವು ಎಲ್ಲ ಖರ್ಜೂರಗಳನ್ನು ತಿಂದಿದ್ದೀರಿ. ನೋಡಿರಿ ಎಲ್ಲ ಬೀಜಗಳು ನಿಮ್ಮ ಮುಂದಿವೆ. ಹಝ್ರತ್ ಅಲಿ(ರ) ತಮಾಷೆಯ ಪ್ರಕೃತದವರಾಗಿದ್ದರು. ಕೋಪಗೊಳ್ಳುವವರಾಗಿರಲಿಲ್ಲ. ಹಝ್ರತ್ ಅಲಿ(ರ) ಕೋಪ ಪ್ರಕೃತದವರಾಗಿದ್ದರೆ, 'ನೀವು ನನ್ನ ಮೇಲೆ ಆರೋಪ ಹೊರಿಸುತ್ತಿದ್ದೀರಿ ಅಥವಾ ನನ್ನನ್ನು ಸಂಶಯಿಸುತ್ತಿದ್ದೀರಿ' ಎಂದು ಹೇಳಿ ಸಹಾಬರೊಡನೆ ಜಗಳವಾಡುತ್ತಿದ್ದರು. ಆದರೆ ಹಝ್ರತ್ ಅಲಿಗೆ(ರ) ಇದು ತಮಾಷೆಯಾಗಿದೆ ಎಂದು ಗೊತ್ತಿತ್ತು. ಆದ್ದರಿಂದ ಅದಕ್ಕೆ ತಮಾಷೆಯ ರೂಪದಲ್ಲೇ ಉತ್ತರ ನೀಡುವುದು ಉತ್ತಮವೆಂದು ಭಾವಿಸಿದರು. ಆದ್ದರಿಂದ ಹಝ್ರತ್ ಅಲಿ(ರ) ಹೇಳಿದರು: ನೀವೆಲ್ಲರೂ ಖರ್ಜೂರಗಳೊಂದಿಗೆ ಬೀಜಗಳನ್ನೂ ತಿಂದಿದ್ದೀರಿ. ಆದರೆ ನಾನು ಬೀಜಗಳನ್ನು ಇಲ್ಲಿ ಇಡುತ್ತಾ ಹೋದೆನು. ನನ್ನ ಮುಂದಿರುವ ಬೀಜಗಳೇ ಇದಕ್ಕಿರುವ ಪುರಾವೆ. ಸಹಾಬಿಯರಿಗೆ ತಮಾಷೆಯಿಂದಲೇ ತಿರುಗೇಟು ನೀಡಿದರು. (ಖುತ್‌ಬಾತೆ ಮಹ್ಮೂದ್, ಸಂಪುಟ–33, ಪುಟ–259–260)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಒಂದು ಸಲ ಹಝ್ರತ್ ಪೈಗಂಬರ್(ಸ) ನಮಾಝಿನಲ್ಲಿ ಪವಿತ್ರ ಖುರ್‌ಆನ್ ಪಾರಾಯಣ ಮಾಡುತ್ತಿದ್ದರು. ಆಯತ್ ಮರೆತು ಹೋದಾಗ, ಹಝ್ರತ್ ಅಲಿ(ರ) ಹೇಳಿಕೊಟ್ಟರು. ನಮಾಝಿನ ನಂತರ ಹಝ್ರತ್ ಪೈಗಂಬರ್(ಸ) ಹೇಳಿದರು: ತಪ್ಪನ್ನು ಸರಿಪಡಿಸುವ ಕೆಲಸ ನಿನ್ನದಲ್ಲ. ಅದಕ್ಕಾಗಿ ನಾನು ಕೆಲವು ವ್ಯಕ್ತಿಗಳನ್ನು ನಿಶ್ಚಯಿಸಿದ್ದೇನೆ. (ಖುತ್‌ಬಾತೆ ಮಹ್ಮೂದ್, ಸಂಪುಟ–25, ಪುಟ–299)

ಹಝ್ರತ್ ಮುಸ್ಲಿಹ್ ಮೌಊದ್(ರ) ಒಂದು ಕಡೆ ಹೇಳುತ್ತಾರೆ:

ಹಝ್ರತ್ ಪೈಗಂಬರರೊಡನೆ(ಸ) ಏನಾದರೂ ಸಮಾಲೋಚನೆ ಮಾಡುವುದಕ್ಕೆ ಮುಂಚಿತವಾಗಿ ದಾನಧರ್ಮಗಳನ್ನು ಮಾಡಬೇಕೆಂದು ಪವಿತ್ರ ಖುರ್‌ಆನ್ ಆದೇಶಿಸುತ್ತದೆ. ಈ ಆದೇಶಕ್ಕೆ ಮುಂಚಿತವಾಗಿ ಹಝ್ರತ್ ಪೈಗಂಬರರೊಡನೆ(ಸ) ಹಝ್ರತ್ ಅಲಿ(ರ) ಯಾವುದೇ ವಿಷಯದಲ್ಲಿ ಸಮಾಲೋಚನೆ ನಡೆಸಿರಲಿಲ್ಲ. ಆದರೆ ಈ ಆದೇಶ ಅವತೀರ್ಣವಾದಾಗ ಹಝ್ರತ್ ಅಲಿ(ರ) ಹಝ್ರತ್ ಪೈಗಂಬರರ(ಸ) ಸನ್ನಿಧಿಯಲ್ಲಿ ಹಾಜರಾಗಿ ಸ್ವಲ್ಪ ಹಣವನ್ನುದಾನವಾಗಿ ಮುಂದಿರಿಸುತ್ತಾ ಹೇಳಿದರು: ಸಮಾಲೋಚನೆ ಮಾಡಲು ಬಯಸಿದ್ದೇನೆ. ಹಝ್ರತ್ ಪೈಗಂಬರ್(ಸ) ಇತರರಿಂದ ಬೇರ್ಪಟ್ಟುಕೊಂಡು ಹಝ್ರತ್ ಅಲಿಯೊಡನೆ(ರ) ಮಾತುಕತೆ ನಡೆಸಿದರು. ಯಾವುದಕ್ಕೆ ಸಂಬಂಧಿಸಿ ಸಮಾಲೋಚನೆ ನಡೆಸಿದ್ದೀರಿ ಎಂದು ಸಹಾಬಿಯೋರ್ವರು ಹಝ್ರತ್ ಅಲಿಯೊಡನೆ(ರ) ಕೇಳಿದರು. ಹಝ್ರತ್ ಅಲಿ(ರ) ಹೇಳಿದರು: ಯಾವುದೇ ವಿಶೇಷವಾದ ಸಮಾಲೋಚನೆ ನಡೆಸಲಿಕ್ಕೆ ಇರಲಿಲ್ಲ. ಆದರೆ ಪವಿತ್ರ ಖುರ್‌ಆನಿನ ಈ ಆದೇಶವನ್ನು ಪಾಲಿಸಲು ಉದ್ದೇಶಿಸಿದ್ದೆ ಅಷ್ಟೆ. (ಖುತ್ಬಾತೆ ಮಹ್ಮೂದ್, ಸಂಪುಟ–25, ಪುಟ–752)

ಇದಾಗಿತ್ತು ಸಹಾಬಿಯರ ರೀತಿ. ಒಂದು ಘಟನೆ ಹೀಗೆಯೂ ವರದಿಯಾಗಿದೆ. ಯಾವುದಾದರೂ ಮನೆಯವರು ನಿಮ್ಮೊಡನೆ ಮರಳಿ ಹೋಗಲು ಹೇಳಿದರೆ ಮರಳಿ ಹೋಗಬೇಕೆಂದು ಪವಿತ್ರ ಖುರ್‌ಆನಿನ ಆದೇಶವಿದೆ. ಈ ಆದೇಶದ ನಂತರ ಒಬ್ಬ ಸಹಾಬಿ ಕೆಲವು ಕಾಲ ದಿನಾಲೂ ಜನರ ಮನೆಗೆ ಹೋಗುತ್ತಿದ್ದರು. ಯಾರಾದರೂ ಮರಳಿ ಹೋಗಲು ಹೇಳಿದರೆ ಪವಿತ್ರ ಖುರ್‌ಆನಿನ ಆದೇಶದಂತೆ ಸಂತೋಷದಿಂದ ಮರಳಿ ಹೋಗಲಿಕ್ಕಾಗಿ ಹೀಗೆ ಮಾಡುತ್ತಿದ್ದರು. ಆದರೆ ಅವರ ಈ ಬಯಕೆ ಎಂದಿಗೂ ಪೂರ್ತಿಯಾಗಲಿಲ್ಲ. ಮರಳಿ ಹೋಗಲು ಯಾವುದೇ ಮನೆಯವರು ಹೇಳುತ್ತಿರಲಿಲ್ಲ.

(ತಫ್ಸೀರುಲ್ ಜಾಮಿಅಲ್ ಅಹ್ಕಾಮುಲ್ ಖುರ್‌ಅನ್ ಲಿಲ್‌ಖುರ್‌ತಬಿ, ಸಂಪುಟ–15, ಪುಟ–199, ಸೂರ ಅನ್ನೂರ್ ಆಯತ್ 29, ಮೊಅಸ್ಸಸುರ್ರಿಸಾಲ ಬೈರೂತ್ 2006)

ಇಂದಿನ ಕಾಲದಲ್ಲಿ, ಯಾರಾದರೂ ನಾನು ಕೆಲಸದಲ್ಲಿ ನಿರತನಾಗಿದ್ದೇನೆ ಮರಳಿಹೋಗು ಎಂದು ಹೇಳಿದರೆ, ಜನರು ತುಂಬ ತಪ್ಪಾಗಿ ತಿಳಿದುಕೊಳ್ಳುವರು. ಆದರೆ ಸಹಾಬಿಯರು ಪವಿತ್ರ ಖುರ್‌ಆನಿನ ಪ್ರತಿಯೊಂದು ಆದೇಶದಂತೆ ನಡೆಯಲು ಪ್ರಯತ್ನಿಸುತ್ತಿದ್ದರು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಒಂದು ಸಲ ಯಾವುದೋ ಉದ್ದೇಶಕ್ಕಾಗಿ ಸಹಾಬಿಯರಿಂದ ಚಂದಾ ಆವಶ್ಯಪಟ್ಟರು. ಹಝ್ರತ್ ಅಲಿ(ರ) ಹೊರಗೆ ಹೋಗಿ ಹುಲ್ಲುಗಳನ್ನು ಕತ್ತರಿಸಿ ಅವುಗಳನ್ನು ಮಾರಾಟ ಮಾಡಿ ಸಿಕ್ಕಿದ ಹಣವನ್ನು ಚಂದಾವಾಗಿ ಕೊಟ್ಟರು. (ಖುತ್ಬಾತೆ ಮಹ್ಮೂದ್, ಸಂಪುಟ–33, ಪುಟ–357)

ಒಂದು ಘಟನೆಯನ್ನು ವಿವರಿಸುತ್ತಾ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್ಮಹುಲ್ಲಾಹ್) ಬಹುಶಃ ಒಂದು ದರ್ಸ್‌ನಲ್ಲಿ ಹೀಗೆ ಹೇಳಿದ್ದರು: ಹಝ್ರತ್ ಅಲ್ಲಾಮ ಉಬೈದುಲ್ಲಾಹ್ ಬಿಸ್ಮಿಲ್ ಸಾಹಿಬ್ ಹಿರಿಯ ಶಿಯಾ ಪಂಡಿತರಾಗಿದ್ದರು. ಅವರು ಎಷ್ಟು ದೊಡ್ಡ ಪಂಡಿತರಾಗಿದ್ದರು ಎಂದರೆ, ಅವರು ಅಹ್ಮದಿಯಾದ ಮೇಲೂ ಅವರ ಪುಸ್ತಕಗಳನ್ನು ಶಿಯಾ ಮದ್ರಸಗಳಲ್ಲಿ ಕಲಿಸಲಾಗುತ್ತಿತ್ತು. ಈಗಲೂ ಕಲಿಸಲಾಗುತ್ತಿದೆ. ಅವರು ಹಝ್ರತ್ ಮಸೀಹ್ ಮೌಊದ್‌ರ(ಅ) ನಿಧನದ ನಂತರ ಅಹ್ಮದಿಯಾಗಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ್) ಹೇಳುತ್ತಾರೆ: ನಾನು ವಖ್‌ಫೇ ಜದೀದಿನಲ್ಲಿದ್ದಾಗ ಒಂದು ಸಲ ಒಬ್ಬ ಶಿಯಾ ಸಹೋದರ ನನ್ನ ಬಳಿಗೆ ಬಂದರು. ಮಾತುಕತೆ ನಂತರ ಅವರು ಅಲ್ಲಾಹನ ಅನುಗ್ರಹದಿಂದ ಅಹ್ಮದಿಯಾದರು. ಅಹ್ಮದಿಯಾದ ನಂತರ ಅವರು ಹೇಳಿದರು: ನಾನು ಮೊದಲು ಹೇಳದೇ ಇದ್ದ ಒಂದು ಸಂಗತಿಯನ್ನು ಹೇಳುತ್ತೇನೆ. ನಾನು ಶಿಯಾ

ಪಂಡಿತನಾಗಿದ್ದೇನೆ. ನನಗೆ ಶಿಯಾರ ನಡುವೆ ಸಾಕಷ್ಟು ಸ್ಥಾನವಿದೆ. ಉಬೈದುಲ್ಲಾಹ್ ಬಿಸ್ಮಿಲ್‌ರ ಗ್ರಂಥಗಳನ್ನು ಈಗಲೂ ನಮ್ಮ ಮದ್ರಸಗಳಲ್ಲಿ ಕಲಿಸಲಾಗುತ್ತಿದೆ. ಹಝ್ರತ್ ಖಲೀಫತುಲ್ ಮಸೀಹ್ ರಾಬಿಲ್ ಹೇಳುತ್ತಾರೆ: ಅವರ ಅರಿವಿನ ಪ್ರತಾಪ ಅಷ್ಟಿತ್ತು. ಆದರೆ ಇವರು ನಮ್ಮೊಡನೆ ಹೇಳುವುದಿಲ್ಲ. ಶಿಯಾ ವಿದ್ಯಾರ್ಥಿಗಳೊಡನೆ ಸಹ ಬಿಸ್ಮಿಲ್ ಸಾಹಿಬ್ ಅಹ್ಮದಿಯಾದ ಬಗ್ಗೆ ಹೇಳಿಕೊಡುವುದಿಲ್ಲ. ಬಿಸ್ಮಿಲ್ ಸಾಹಿಬ್ ಹಝ್ರತ್ ಮಸೀಹ್ ಮೌಊದ್‌ರನ್ನು ಸ್ವೀಕರಿಸಿಕೊಂಡು, ಆ ಕಾಲದಲ್ಲಿ ಶಿಯಾರ ನಡುವ ಅವರಿಗಿದ್ದ ತನ್ನೆಲ್ಲ ಸ್ಥಾನವನ್ನು ಬೆನ್ನಹಿಂದೆ ಬಿಸಾಕಿದರು. ಹಝ್ರತ್ ಮುಸ್ಲಿಹ್ ಮೌಊದ್(ರ) ಆ ಅಸಾಮಾನ್ಯ ವ್ಯಕ್ತಿಯ ಪುಸ್ತಕದಲ್ಲಿರುವ ಉಲ್ಲೇಖವನ್ನು ಉದ್ಧರಿಸಿ ಹೇಳುತ್ತಾರೆ: ಅಲ್‌ಬಾಝ್ಝಾರ್ ತನ್ನ ಮಸ್ನದ್‌ನಲ್ಲಿ ಬರೆಯುತ್ತಾರೆ: ಹಝ್ರತ್ ಅಲಿ(ರ) ಜನರೊಡನೆ ಕೇಳಿದರು: ಅತ್ಯಂತ ಧೈರ್ಯಶಾಲಿ ಯಾರು? ನೀವೇ ಅತ್ಯಂತ ಧೈರ್ಯಶಾಲಿ ಎಂದು ಹೇಳಲಾಯಿತು. ಹಝ್ರತ್ ಅಲಿ(ರ) ಹೇಳಿದರು: ನಾನಂತು ನನಗೆ ಸಮವಾದ ವ್ಯಕ್ತಿಗಳೊಡನೆ ಹೋರಾಡುತ್ತೇನೆ. ಹೀಗಿರುವಾಗ ನಾನು ಹೇಗೆ ಅತ್ಯಂತ ಧೈರ್ಯಶಾಲಿ ಆದೆ? ಅವರು ಪುನಃ ಕೇಳಿದರು: ಈಗ ಹೇಳಿರಿ, ಅತ್ಯಂತ ಧೈರ್ಯಶಾಲಿ ಯಾರು? ಜನರು ಹೇಳಿದರು: ನಮಗೆ ಗೊತ್ತಿಲ್ಲ. ನೀವೇ ಹೇಳಿರಿ. ಹಝ್ರತ್ ಅಲಿ(ರ) ಹೇಳಿದರು: ಅತ್ಯಂತ ಧೈರ್ಯಶಾಲಿ ಮತ್ತು ಶೂರ ಹಝ್ರತ್ ಅಬೂಬಕರ್(ರ) ಆಗಿದ್ದಾರೆ. ಬದ್ರ್ ಯುದ್ಧದಲ್ಲಿ ನಾವು ಹಝ್ರತ್ ಪೈಗಂಬರರಿಗೆ(ಸ) ಒಂದು ಡೇರೆಯನ್ನು ತಯಾರು ಮಾಡಿದ್ದೆವು. ಬಹುದೇವಾರಾಧಕರಲ್ಲಿ ಯಾರೂ ಹಝ್ರತ್ ಪೈಗಂಬರರ(ಸ) ಮೇಲೆ ಹಲ್ಲೆ ನಡೆಸದೇ ಇರಲು ಈ ಡೇರೆಯ ಬಳಿ ಹಝ್ರತ್ ಪೈಗಂಬರರ(ಸ) ಸಂರಕ್ಷಣೆಗಾಗಿ ಯಾರು ನಿಲ್ಲುವರು ಎಂದು ನಾವು ಸಮಾಲೋಚಿಸುತ್ತಿದ್ದೆವು. ಅಲ್ಲಾಹನಾಣೆ ನಮ್ಮಲ್ಲಿ ಯಾರು ಮುಂದಕ್ಕೆ ಧಾವಿಸಲಿಲ್ಲ. ಅಷ್ಟರಲ್ಲಿ ಹಝ್ರತ್ ಅಬೂಬಕರ್(ರ) ತೆರೆದ ಖಡ್ಗದೊಂದಿಗೆ ಹಝ್ರತ್ ಪೈಗಂಬರರ(ಸ) ಬಳಿ ನಿಂತರು. ಅನಂತರ ಯಾವುದೇ ಮುಶ್ರಿಕನಿಗೆ ಅವರ ಬಳಿಗೆ ಬರುವ ಧೈರ್ಯ ಬರಲಿಲ್ಲ. ಯಾರಾದರೂ ಧೈರ್ಯ ತೋರಿಸಿದರೆ ಅವರು ಬೇಗನೇ ಶತ್ರುವಿನ ಮೇಲೆ ಹಲ್ಲೆ ನಡೆಸುತ್ತಿದ್ದರು. ಆದ್ದರಿಂದ ಹಝ್ರತ್ ಅಬೂಬಕರ್(ರ) ಅತ್ಯಂತ ಧೈರ್ಯಶಾಲಿ ಆಗಿದ್ದರು.

ಹಝ್ರತ್ ಅಲಿ(ರ) ಹೇಳುತ್ತಾರೆ: ಒಂದು ಸಲ ಮುಶ್ರಿಕರು ಹಝ್ರತ್ ಪೈಗಂಬರರನ್ನು ತನ್ನ ದಿಗ್ಬಂಧನದಲ್ಲಿ ಇರಿಸಿದರು. ಅವರು ಹಝ್ರತ್ ಪೈಗಂಬರರನ್ನು(ಸ) ಎಳೆಯುತ್ತಿದ್ದರು ಮತ್ತು ಹೀಗೆ ಹೇಳುತ್ತಿದ್ದರು: ಅಲ್ಲಾಹನು ಒಬ್ಬನೆಂದು ಹೇಳುವ ವ್ಯಕ್ತಿ ನೀವೇ ಅಲ್ಲವೇ? ಅಲ್ಲಾಹನಾಣೆ ಯಾರಿಗೂ ಆ ಮುಶ್ರಿಕರನ್ನು ಎದುರಿಸಲು ಧೈರ್ಯ ಬರಲಿಲ್ಲ. ಆದರೆ ಹಝ್ರತ್ ಅಬೂಬಕ್ಕರ್(ರ) ಮುಂದಕ್ಕೆ ಧಾವಿಸಿದರು. ಅವರು ಮುಶ್ರಿಕರನ್ನು ಹೊಡೆಯುತ್ತಾ ನೂಕುತ್ತಾ ದೂರಕ್ಕೆ ಅಟ್ಟುತ್ತಿದ್ದರು ಮತ್ತು ಹೀಗೆ ಹೇಳುತ್ತಿದ್ದರು: ನನ್ನ ಪರಿಪಾಲಕ ಕೇವಲ ಅಲ್ಲಾಹನು ಎಂದು ಹೇಳುವ ವ್ಯಕ್ತಿಗೆ ಕಷ್ಟಕೊಡುತ್ತಿದ್ದೀರಿ ಎಂಬುದು ಖೇದಕರ. ಈ ಘಟನೆಯನ್ನು ವಿವರಿಸಿದ ನಂತರ ಹಝ್ರತ್ ಅಲಿ(ರ) ತನ್ನ ಚಾದರವನ್ನು ಎತ್ತಿಕೊಂಡು ಎಷ್ಟು ಅತ್ತುಬಿಟ್ಟರೆಂದರೆ, ಅವರ ಗಡ್ಡ ಒದ್ದೆಯಾಯಿತು. ಅವರು ಹೇಳಿದರು: ಅಲ್ಲಾಹನು ನಿಮಗೆ ಸನ್ಮಾರ್ಗ ನೀಡಲಿ. ಹೇ ಜನರೇ, ಫಿರ್‌ಔನಿನ ಕುಟುಂಬದವರಲ್ಲಿ ಸತ್ಯವಿಶ್ವಾಸ ಕೈಗೊಂಡ ಜನರು ಹೆಚ್ಚು ಉತ್ತಮರಾಗಿದ್ದರೇ? ಅಥವಾ ಹಝ್ರತ್ ಅಬೂಬಕರ್(ರ) ಹೆಚ್ಚು ಉತ್ತಮರಾಗಿದ್ದರೇ? ಹಝ್ರತ್ ಅಬೂಬಕರ್(ರ) ಮಾಡಿದಂತಹ ತ್ಯಾಗ ಫಿರ್‌ಔನಿನ ಕುಟುಂಬದಿಂದ ಸತ್ಯವಿಶ್ವಾಸ ಸ್ವೀಕರಿಸಿದ ಜನರು ಮಾಡಿರಲಿಲ್ಲ. ಇದನ್ನು ಕೇಳಿ ಜನರು ಮೌನವಾಗಿದ್ದರು. ಆಗ ಹಝ್ರತ್ ಅಲಿ(ರ) ಹೇಳಿದರು: ಹೇ ಜನರೇ, ನೀವೇಕೆ ಉತ್ತರ ಕೊಡುತ್ತಿಲ್ಲ? ಅಲ್ಲಾಹನಾಣೆ, ಹಝ್ರತ್ ಅಬೂಬಕರರ(ರ) ಒಂದು ನಿಮಿಷ ಫಿರ್‌ಔನಿನ ಕುಟುಂಬದ ಸಾವಿರ ನಿಮಿಷಗಳಿಗಿಂತ ಉತ್ತಮ. ಏಕೆಂದರೆ ಆ ಜನರು ವಿಶ್ವಾಸವನ್ನು ಬಚ್ಚಿಡುತ್ತಾ ಜೀವಿಸಿದ್ದರು. ಹಝ್ರತ್ ಅಬೂಬಕರ್(ರ) ತನ್ನ ವಿಶ್ವಾಸವನ್ನು ಬಹಿರಂಗವಾಗಿ ಘೋಷಿಸಿದ್ದರು. (ದರ್ಸುಲ್ ಖುರ್‌ಆನ್, ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರ), 16-02-1994)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿಗೆ ಹೀಗೆ ಉಪದೇಶಿಸಿದರು: ಹೆ ಅಲಿ, ನಿನ್ನ ತಬ್ಲೀಗಿನಿಂದ ಒಬ್ಬ ವ್ಯಕ್ತಿ ಕೂಡ ಸತ್ಯವಿಶ್ವಾಸ ಕೈಗೊಂಡರೆ ಅದು ನಿನಗೆ ಎರಡು ಪರ್ವತಗಳ ನಡುವೆ ಹೋಗುತ್ತಿರುವ ದೊಡ್ಡದಾದ ಒಂದು ಕೂಟ ಕುರಿಗಳು ಮತ್ತು ಆಡುಗಳಿಗಿಂತ ಉತ್ತಮ. (ಹವಾರೆ ರಿಝವ್ಮ್ಮ ತಮಾಮ್ ದುನ್ಯಾಂ ಕೊ ಫತಹ್ ಕರ್‌ನೇಕಾ ಕಾಮ್ ಹೈ, ಅನ್ವಾರುಲ್ ಉಲೂಮ್, ಸಂಪುಟ-18, ಪುಟ-464)

ಉಮ್ಮುಲ್ ಮೂಮಿನೀನ್ ಹಝ್ರತ್ ಸಲ್ಮಾ ಹೇಳುತ್ತಾರೆ – ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದಾಗಿ ನಾನು ಕೇಳಿದ್ದೇನೆ: ಯಾರು ಹಝ್ರತ್ ಅಲಿಯನ್ನು(ರ) ಪ್ರೀತಿಸುತ್ತಾನೋ ಅವನು ನನ್ನನ್ನು ಪ್ರೀತಿಸಿದಂತೆ. ಯಾರು ನನ್ನನ್ನು ಪ್ರೀತಿಸಿದನೋ ಅವನು ಅಲ್ಲಾಹನನ್ನು ಪ್ರೀತಿಸಿದನು. ಯಾರು ಹಝ್ರತ್ ಅಲಿಯೊಡನೆ(ರ) ಹಗೆಯಿರಿಸುತ್ತಾನೋ ಅವನು ನನ್ನನ್ನು ದ್ವೇಷಿಸಿದಂತೆ, ಯಾರು ನನ್ನನ್ನು ದ್ವೇಷಿಸುತ್ತಾನೋ ಅವನು ಅಲ್ಲಾಹನನ್ನು ದ್ವೇಷಿಸಿದಂತೆ ಆಗಿದ್ದಾನೆ. (ಮಜ್ಮ ಅಝ್ಝವಾಏದ್ ಸಂಪುಟ-9, ಪುಟ-126, ಕಿತಾಬುಲ್ ಮನಾಖಿಬ್, ಮನಾಖಿಬ್ ಅಲಿ ಬಿನ್ ತಾಲಿಬ್, ಹದೀಸ್-14757, ದಾರುಲ್ ಕುತುಬ್ ಇಲ್ಮಿಯ ಬೈರೂತ್ 2001)

ಹಝ್ರತ್ ಝುರ್(ರ) ವರದಿ ಮಾಡುತ್ತಾರೆ ಹಝ್ರತ್ ಅಲಿ(ರ) ಹೇಳಿದರು: ಧಾನ್ಯಗಳನ್ನು ಸೀಳುವ ಮತ್ತು ಆತ್ಮಗಳನ್ನು ಸೃಷ್ಟಿಸಿದ ಅಲ್ಲಾಹನಾಣೆ, ಖಂಡಿತವಾಗಿಯೂ ನನ್ನನ್ನು ಸತ್ಯವಿಶ್ವಾಸಿಗಳು ಮಾತ್ರ ಪ್ರೀತಿಸುವರು ಮತ್ತು ಕೇವಲ ಕಪಟ ವಿಶ್ವಾಸಿಗಳು ನನ್ನೊಂದಿಗೆ ಹಗೆಯನ್ನು ಹೊಂದುವವರು ಎಂದು ಹಝ್ರತ್ ಪೈಗಂಬರ್(ಸ) ನನ್ನೊಡನೆ ಒತ್ತಿಹೇಳಿದರು. (ಸಹೀಹ್ ಮುಸ್ಲಿಮ್, ಕಿತಾಬುಲ್ ಈಮಾನ್, ಹದೀಸ್-240)

ಹಝ್ರತ್ ಅಲಿ(ರ) ಹೇಳಿದರು: ಹಝ್ರತ್ ಪೈಗಂಬರ್(ಸ) ನನ್ನನ್ನು ಕರೆದು ಹೇಳಿದರು: ನಿನ್ನ ಉದಾಹರಣೆ ಹಝ್ರತ್ ಈಸಾ ಅಲೈಹಿಸ್ಸಲಾಮರ ಹಾಗಿದೆ. ಅವರನ್ನು ಯಹೂದಿಯರು ಎಷ್ಟು ದ್ವೇಷಿಸಿದರು ಎಂದರೆ, ಅವರ ತಾಯಿಯ ಮೇಲೆ ಆರೋಪ ಹೊರಿಸಿದ್ದರು. ಅದೇ ರೀತಿ ಯಲ್ಲಿ ಕ್ರೈಸ್ತರು ಹಝ್ರತ್ ಈಸಾ ಅಲೈಹಿಸ್ಸಲಾಮ್‌ರನ್ನು ಪ್ರೀತಿಸುವುದರಲ್ಲಿ ಎಷ್ಟು ಮಿತಿಮೀರಿದರೆಂದರೆ, ಅವರಿಗೆ ಇಲ್ಲದ ಸ್ಥಾನವನ್ನೂ ನೀಡಿದ್ದರು. ಅನಂತರ ಹಝ್ರತ್ ಅಲಿ(ರ) ಹೇಳಿದರು: ಕೇಳಿರಿ, ನನ್ನ ಕುರಿತು ಎರಡು ವಿಧಗಳ ಜನರು ನಾಶ ಹೊಂದುವರು. ಒಂದು ವಿಭಾಗದವರು ಪ್ರೇಮದಲ್ಲಿ ಮಿತಿಮೀರಿ ಕೊಂಡು ನನಗೆ ಸಲ್ಲಬಾರದ ಸ್ಥಾನವನ್ನು ನೀಡುವರು. ಇನ್ನೊಂದು ವಿಭಾಗದವರು ನನ್ನೊಡನೆ ಹಗೆ ಹೊಂದುವರು. ಅವರು ನನ್ನೊಡನೆ ಇರುವ ಶತ್ರುತ್ವದ ಕಾರಣದಿಂದ ನನ್ನ ಮೇಲೆ ಆರೋಪ ಹೊರಿಸುವರು.

(ಮಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ-1, ಪುಟ-439, ಮಸ್ನದ್ ಅಲಿ ಬಿನ್ ಅಬಿ ತಾಲಿಬ್, ಹದೀಸ್-1377, ಆಲಿಮುಲ್ ಕುತುಬ್ ಬೈರೂತ್ 1998)

ಶತ್ರುಗಳೊಡನೆ ಯುದ್ಧ ಮಾಡದೇ ಸಿಗುವ ಸಂಪತ್ತಿನ ವಿತರಣೆಯಲ್ಲಿ ಹಝ್ರತ್ ಅಬೂಬಕರ್(ರ) ಕೈಗೊಂಡ ಮಾರ್ಗವನ್ನೇ ಹಝ್ರತ್ ಅಲಿ(ರ) ಅವಲಂಬಿಸಿದ್ದರು. ಈ ರೀತಿಯ ಸಂಪತ್ತು ಅವರ ಬಳಿಗೆ ತರಲಾಗುವಾಗ, ಅವರು ಅದನ್ನು ಪೂರ್ತಿಯಾಗಿ ವಿತರಿಸುತ್ತಿದ್ದರು. ಅಂದು ವಿತರಿಸಲು ಬಾಕಿಯಿರುವ ಸಂಪತ್ತು ಹೊರತು ಏನೂ ಬಾಕಿಯಾಗುತ್ತಿರಲಿಲ್ಲ. ಅವರು ಹೀಗೆ ಹೇಳುತ್ತಿದ್ದರು: ಹೇ ಲೋಕ, ನನ್ನನ್ನು ಬಿಟ್ಟು ಬೇರೆಯಾರನ್ನಾದರೂ ನೀನು ಮೋಸಮಾಡು. ಆ ಸಂಪತ್ತನ್ನು ಅವರು ಸ್ವತಃ ಪಡೆಯುತ್ತಿರಲಿಲ್ಲ ಎಂದು ಮಾತ್ರವಲ್ಲ ಗೆಳೆಯರಿಗೆ ಅಥವಾ ಸಂಬಂಧಿಕರಿಗೆ ಅದರಿಂದ ಏನೂ ಕೊಡುತ್ತಿರಲಿಲ್ಲ. ಅಧಿಕಾರಗಳು, ಹುದ್ದೆಗಳು ಮುಂತಾದವುಗಳನ್ನು ಅವರು ಕೇವಲ ಪ್ರಾಮಾಣಿಕ ಮತ್ತು ವಿಶ್ವಾಸಯೋಗ್ಯ ಜನರಿಗೆ ಒಪ್ಪಿಸುತ್ತಿದ್ದರು. ಯಾರಾದರೂ ಮೋಸಮಾಡಿದ ವಿವರ ಅವರಿಗೆ ತಲುಪುವಾಗ ಅವರು ಈ ಆಯತ್ತುಗಳನ್ನು ಬರೆದು ಕಳುಹಿಸುತ್ತಿದ್ದರು: **ಖದ್ ಜಾಅತ್‌ಕುಂ ಮೌಇಝ್ಝತನ್ ಮಿರ್ರಬ್ಬಿಕುಂ. ಔಫುಲ್ ಮಿಕ್‌ಯಾಲ ವಲ್‌ಮೀಝ್ಝಾನ ಬಿಲ್‌ಖಿಸ್ತಿ ವಲಾ ತಬ್‌ಖಸುನ್ನಾಸ ಅಶ್‌ಯಾಹುಂ ವಲಾ ತಅ್‌ಸೌ ಫಿಲ್‌ಅರ್‌ಝ್ಝಿ ಮುಫ್‌ಸಿದೀನ್. ಬಖಿಯತುಲ್ಲಾಹು ಖೈರುಲ್ಲಕುಂ ಇನ್‌ಕುನ್‌ತುಂ ಮೂಮಿನೀನ ವಮಾ ಅನಾ ಅಲೈಕುಂ ಬಿಹಫೀಝ್ಝ್.** ಖಂಡಿತವಾಗಿಯೂ ನಿಮ್ಮ ಬಳಿಗೆ ನಿಮ್ಮ ಪ್ರಭುವಿನ ಉಪದೇಶ ಬಂದಾಗಿದೆ. ನೀವು ನ್ಯಾಯಯುತವಾಗಿಯೂ ಪೂರ್ಣವಾಗಿಯೂ ಅಳೆದು ಮತ್ತು ತೂಕಮಾಡಿ ಕೊಡಿರಿ. ಜನರಿಗೆ ಸಲ್ಲಬೇಕಾದುದನ್ನು ಪೂರ್ಣವಾಗಿ ಕೊಡುವುದರಲ್ಲಿ ಕಡಿಮೆಗೊಳಿಸಬೇಡಿರಿ. ನೀವು ಭೂಮಿಯಲ್ಲಿ ಕ್ಷೋಭೆ ಹರಡುತ್ತಾ ತಿರುಗಾಡಬೇಡಿರಿ. ನೀವು ಸತ್ಯವಿಶ್ವಾಸಿಗಳಾಗಿದ್ದರೆ, ಅಲ್ಲಾಹನು ನಿಮಗೆ ಬಾಕಿಯುಳಿಸುವ ಸಂಪತ್ತೇ ಉತ್ತಮವಾದುದು ಎಂದು ತಿಳಿಯಿರಿ. ನಾನು ನಿಮ್ಮ ಮೇಲ್ನೋಟಗಾರನೇನೂ ಅಲ್ಲ. ಅನಂತರ ಅವರು ಹೀಗೆ ಬರೆಯುತ್ತಿದ್ದರು: ನನ್ನ ಈ ಪತ್ರ ನಿಮ್ಮ ಬಳಿಗೆ ತಲುಪಿದ ನಂತರ, ನಿಮ್ಮ ಬಳಿಯಲ್ಲಿರುವ ನಮ್ಮ ಸಂಪತ್ತನ್ನು ನಿಮ್ಮಿಂದ ವಸೂಲು ಮಾಡಲು ನಮ್ಮ ಕಡೆಯಿಂದ ಕಳುಹಿಸುವ ವರೆಗೆ ಆ ಸಂಪತ್ತನ್ನು ಜೋಪಾನವಾಗಿಡಿರಿ. ಅನಂತರ ಅವರು ತಮ್ಮ ದೃಷ್ಟಿಗಳನ್ನು ಆಕಾಶದ ಕಡೆಗೆ ಮಾಡುತ್ತಾ ಹೀಗೆ ಹೇಳುತ್ತಿದ್ದರು: ಹೇ ಅಲ್ಲಾಹ್, ಖಂಡಿತವಾಗಿಯೂ ನಾನು ಅವರನ್ನು ನಿನ್ನ ಸೃಷ್ಟಿಗಳ ಮೇಲೆ ದೌರ್ಜನ್ಯವನ್ನು ಮಾಡಲು ಮತ್ತು ನಿನ್ನ ಹಕ್ಕುಗಳನ್ನು ಬಿಟ್ಟುಬಿಡಲು ಉಪದೇಶಿಸಿರಲಿಲ್ಲ.

ಅಬ್‌ಜರ್ ಬಿನ್ ಜರ್ಮೂಝ್ ತನ್ನ ತಂದೆಯಿಂದ ವರದಿ ಮಾಡುತ್ತಾರೆ: ಹಝ್ರತ್ ಅಲಿ ಬಿನ್ ಅಬೂತಾಲಿಬ್ ಕೂಫದಿಂದ ಹೊರಡುವಾಗ ಅವರ ದೇಹದ ಮೇಲೆ ಎರಡು ಖಿತ್‌ರೀ ಚಾದರವಿದ್ದನ್ನು ನಾನು ಕಂಡೆನು. ಖಿತ್ರ್ ಎಂಬುದು ಒಂದು ಗ್ರಾಮದ ಹೆಸರಾಗಿದೆ. ಅಲ್ಲಿ ಕೆಂಪು ದಾರದ ಚಾದರಗಳು ತಯಾರು ಮಾಡಲಾಗುತ್ತಿತ್ತು. ಅದರಲ್ಲಿ ಒಂದು ಚಾದರವನ್ನು ಅವರು ಲುಂಗಿಯ ಹಾಗೆ ಧರಿಸಿದ್ದರು ಮತ್ತು ಮತ್ತೊಂದನ್ನು ಮೇಲಿನ ಭಾಗದಲ್ಲಿ ಧರಿಸಿದ್ದರು.

ಹಝ್ರತ್ ಅಲಿ(ರ) ಒಂದು ಚಾವಟಿಯನ್ನು ಹಿಡಿದುಕೊಂಡು ಮಾರುಕಟ್ಟೆಯಲ್ಲಿ ಸುತ್ತುತ್ತಾ ಜನರೊಡನೆ ಅಲ್ಲಾಹನ ಭಯವಿರಿಸಲು, ಸತ್ಯವನ್ನು ಹೇಳಲು, ಉತ್ತಮ ರೀತಿಯಲ್ಲಿ ಖರೀದಿ ಮತ್ತು ಮಾರಾಟ ಮಾಡಲು ಹಾಗೂ ಅಳತೆ ಮತ್ತುತೂಕವನ್ನು ಸರಿಯಾಗಿ ಮಾಡಿಕೊಡಲು ಉಪದೇಶಿಸುತ್ತಿದ್ದರು.

ಮಜ್ಮ ತೈಮಿ ವರದಿ ಮಾಡುತ್ತಾರೆ: ಒಂದು ಸಲ ಹಝ್ರತ್ ಅಲಿ(ರ) ಬೈತುಲ್ ಮಾಲಿನಲ್ಲಿದ್ದ ಎಲ್ಲ ಸಂಪತ್ತನ್ನು ಮುಸ್ಲಿಮರಲ್ಲಿ ವಿತರಿಸಿದರು. ಅನಂತರ ಅವರ ಆಜ್ಞೆ ಪ್ರಕಾರ ಸುಣ್ಣ ಬಳಿಯಲಾಯಿತು. ಖಿಯಾಮತ್ ದಿನದಂದು ಅವರಿಗೆ ಅದು ಸಾಕ್ಷಿಯಾಗಲಿ ಎಂಬ ನಿರೀಕ್ಷೆಯಿಂದ ಅವರು ಅದರಲ್ಲಿ ನಮಾಝ್ ನಿರ್ವಹಿಸಿದರು. (ಅಲ್‌ಇಸ್ತಿಆಬ್ ಫೀ ಮಾರಿಫತಿಲ್ ಅಸ್ಹಾಬ್, ಸಂಪುಟ–3, ಪುಟ–1111–1113, ದಾರುಲ್ ಜೀಲ್ ಬೈರೂತ್ 1992) (ಲುಗಾತುಲ್ ಹದೀಸ್, ಸಂಪುಟ–3, ಪುಟ–575, ನುಮಾನಿ ಕುತುಬ್ ಖಾನ ಲಾಹೋರ್ 2005)

ಹಝ್ರತ್ ಮುಸ್ಲಿಹ್ ಮೌಊದ್(ರ) ಹಝ್ರತ್ ಅಲಿಯ ಬಗ್ಗೆ ಪ್ರಸ್ತಾಪಿಸುತ್ತಾ ಒಂದು ಕಡೆ ಹೇಳುತ್ತಾರೆ: 1892, ಡಿಸೆಂಬರ್ 7ರಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ತನ್ನ ಒಂದು ಕನಸನ್ನು ಹೀಗೆ ವಿವರಿಸುದ್ದಾರೆ: ನಾನು ಕನಸಿನಲ್ಲಿ ಹಝ್ರತ್ ಅಲಿ ಕರ್ರಮುಲ್ಲಾಹ್ ವಜ್‌ಹಹೂ ಆದೆನು. ಖವಾರಿಜಿಯರ ಒಂದು ಕೂಟ ನನ್ನ ಖಿಲಾಫತನ್ನು ವಿರೋಧಿಸುತ್ತಿದ್ದರು. ಆಗ ನಾನು ಹಝ್ರತ್ ಪೈಗಂಬರ್(ಸ) ನನ್ನ ಬಳಿ ಇದ್ದುಕೊಂಡು ಕರುಣೆ ಮತ್ತು ಪ್ರೀತಿಯಿಂದ ನನ್ನೊಡನೆ ಹೀಗೆ ಹೇಳುತ್ತಿರುವುದಾಗಿ ಕಂಡೆನು: **ಯಾ ಅಲಿ, ದಅ್‌ಹುಂ ವ ಅನ್ಸಾರಹುಂ ವ ಝಿರಾಅತಹುಂ**. ಎಂದರೆ, ಹೇ ಅಲಿ, ನೀನು ಇವರಿಂದ, ಇವರ ಸಹಾಯಕರಿಂದ ಮತ್ತು ಇವರ ಕೃಷಿಯಿಂದ ದೂರವಿರು ಹಾಗೂ ಅವರನ್ನು ಬಿಟ್ಟುಕೊಂಡು ಅವರಿಂದ ಮುಖ ತಿರುಗಿಸು. ಈ ಫಿತ್ನದ ಸಮಯದಲ್ಲಿ ಸಹನೆಯನ್ನು ಕೈಗೊಳ್ಳಲು ಹಝ್ರತ್ ಪೈಗಂಬರ್(ಸ) ನನ್ನೊಡನೆ ಹೇಳುತ್ತಿದ್ದರು. ನೀನೇ ಸತ್ಯದ ಮೇಲೆ ನಿಂತಿರುವೆ. ಆದರೆ ಅವರೊಡನೆ ಮಾತನಾಡದೇ ಇರುವುದು ಉತ್ತಮವೆಂದು ಹೇಳುತ್ತಿದ್ದರು.(ಬರ್ಕಾತೆ ಖಿಲಾಫತ್, ಅನ್ವಾರುಲ್ ಉಲೂಮ್, ಸಂಪುಟ–2, ಪುಟ–176)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಅಲಿ(ರ) ಖವಾರಿಜಿಯರ ಸೈನ್ಯದ ಎಲ್ಲ ವಸ್ತುಗಳನ್ನು ವಶಪಡಿಸಿಕೊಂಡಿದ್ದರು. ಅಸ್ತ್ರಗಳನ್ನು ಮತ್ತು ಯುದ್ಧದ ಸವಾರಿಗಳನ್ನು ಜನರ ನಡುವೆ ವಿತರಿಸಿದರು. ಆದರೆ ಇತರ ಸಾಮಾನುಗಳು, ಗುಲಾಮರನ್ನೆಲ್ಲ ಕೂಫಕ್ಕೆ ಮರಳಿಹೋದಾಗ ಅದರ ಮಾಲಿಕರಿಗೆ ವಾಪಾಸ್ಸು ಕೊಟ್ಟರು. (ಮಸ್‌ಅಲ ವಹಿ ವ ನಬುವ್ವತ್ ಕೆ ಮುತಅಲ್ಲಕ್ ಇಸ್ಲಾಮಿ ನಝ್ರಿಯ್ಯ, ಅನ್ವಾರುಲ್ ಉಲೂಮ್, ಸಂಪುಟ–23, ಪುಟ–363)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಉಮರರ ಖಿಲಾಫತ್ ಕಾಲ ಹಝ್ರತ್ ಅಬೂಬಕರರ(ರ) ಖಿಲಾಫತ್ ಕಾಲಕ್ಕೆ ಹೋಲಿಸಿದರೆ, ಹಝ್ರತ್ ಪೈಗಂಬರರಿಂದ(ಸ) ಹೆಚ್ಚು ದೂರವಿತ್ತು. ಇದೇ ಸ್ಥಿತಿ ಹಝ್ರತ್ ಉಸ್ಮಾನ್ ಮತ್ತು ಹಝ್ರತ್ ಅಲಿಯದ್ದಾಗಿತ್ತು. ನಿಸ್ಸಂಶಯವಾಗಿಯೂ ಅವರ ಪದವಿ ಅವರಿಗಿಂತ ಮುಂಚಿನ ಖಲೀಫರಿಗಿಂತ ಕಡಿಮೆಯಾಗಿತ್ತು. ಆದರೆ ಅವರ ಕಾಲದಲ್ಲಿ ಉಂಟಾದ ಕಲಹದ ಘಟನೆಗಳಿಗೆ ಕಾರಣ ಅವರ ಪದವಿಯಾಗಿರಲಿಲ್ಲ, ಬದಲಿಗೆ ಆ ಕಾಲಘಟ್ಟ ಹಝ್ರತ್ ಪೈಗಂಬರರ(ಸ) ಕಾಲಘಟ್ಟದಿಂದ ಹೆಚ್ಚು ದೂರವಾಗಿತ್ತು. ಏಕೆಂದರೆ ಹಝ್ರತ್ ಅಬೂಬಕರ್ ಮತ್ತು ಹಝ್ರತ್ ಉಮರರ ಸಮಯದಲ್ಲಿ ಹಝ್ರತ್ ಪೈಗಂಬರರ ಸಹವಾಸದಲ್ಲಿದ್ದ ಹೆಚ್ಚಿನ ಜನರು ಇದ್ದರು. ಆದರೆ ನಂತರ ಕಾಲದಲ್ಲಿ ಅಂತಹ ಜನರು ಕಡಿಮೆ, ಇತರ ಜನರು ಹೆಚ್ಚಾದರು. ಹಝ್ರತ್ ಅಲಿಯೊಡನೆ ಯಾರೋ ಒಬ್ಬರು ಹೇಳಿದರು: ನಿಮ್ಮ ಕಾಲದಲ್ಲಿ ಆಗುತ್ತಿರುವಂತಹ ಫಿತ್ನಗಳು ಹಝ್ರತ್ ಅಬೂಬಕರ್ ಮತ್ತು ಹಝ್ರತ್ ಉಮರರ ಕಾಲದಲ್ಲಿ ಆಗುತ್ತಿರಲಿಲ್ಲ. ಹಝ್ರತ್ ಅಲಿ(ರ) ಹೇಳಿದರು: ಸತ್ಯವೇನೆಂದರೆ, ಅಬೂಬಕರ್ ಮತ್ತು ಉಮರರ ಕೆಳಗೆ ನನ್ನಂತಹ ಜನರಿದ್ದರು. ನನ್ನ ಕೆಳಗೆ ನಿಮ್ಮಂತಹ ಜನರಿದ್ದಾರೆ. (ಜಮಾಅತೆ ಅಹ್ಮದಿಯ ಔರ್ ಹಮಾರಿ ಝಿಮ್ಮೆದಾರಿಯಾಂ, ಅನ್ವಾರುಲ್ ಉಲೂಮ್, ಸಂಪುಟ–5, ಪುಟ–95)

ಹಝ್ರತ್ ಮುಸ್ಲಿಹ್ ಮೌಊದ್(ರ) ಒಂದು ಘಟನೆಯನ್ನು ವಿವರಿಸುತ್ತಾ ಹೇಳುತ್ತಾರೆ: ಹಝ್ರತ್ ಅಲಿ(ರ) ಮತ್ತು ಮುಆವಿಯರ ನಡುವೆ ಯುದ್ಧ ಜಾರಿಯಲ್ಲಿದ್ದಾಗ ಹಝ್ರತ್ ಅಬ್ದುಲ್ಲಾಹ್ ಬಿನ್ ಉಮರರ ಬಳಿಗೆ ಒಬ್ಬ ವ್ಯಕ್ತಿ ಬಂದು ಕೇಳಿದರು: ನೀವು ಹಝ್ರತ್ ಅಲಿಯ ಕಾಲದ ಯುದ್ಧಗಳಲ್ಲಿ ಏಕೆ ಭಾಗವಹಿಸಿಲ್ಲ. **ವಖಾತಿಲೂಹುಂ ಹತ್ತಾ ಲಾ ತಕೂನ ಫಿತ್ನತನ್** ಎಂದರೆ, ಪಿತೂರಿ ಬಾಕಿಯಾಗದ ವರೆಗೆ ಯುದ್ಧ ಮಾಡಿರಿ ಎಂದು ಪವಿತ್ರ ಖುರ್‌ಆನ್ ಹೇಳುತ್ತದೆಯಲ್ಲವೇ? ಅವರು ಹೇಳಿದರು: ನಾವು ಈ ಆದೇಶವನ್ನು ಹಝ್ರತ್ ಪೈಗಂಬರರ(ಸ) ಕಾಲದಲ್ಲಿ ಪೂರೈಸಿದ್ದೇವೆ. ಆ ಸಮಯದಲ್ಲಿ ಮುಸ್ಲಿಮರು ಬಹಳ ಕಡಿಮೆಯಿದ್ದರು ಮತ್ತು ಮುಸ್ಲಿಮರನ್ನು ಧರ್ಮದ ಕಾರಣದಿಂದ ಫಿತ್ನಕ್ಕೆ ಹಾಕಲಾಗುತ್ತಿತ್ತು. ಎಂದರೆ ಅವರನ್ನು ಕೊಲ್ಲಲಾಗುತ್ತಿತ್ತು ಅಥವಾ ಶಿಕ್ಷಿಸಲಾಗುತ್ತಿತ್ತು. ಅನಂತರ ಇಸ್ಲಾಂ ಹರಡಿತು. ಅನಂತರ ಯಾರನ್ನು ಫಿತ್ನಕ್ಕೆ ಒಳಪಡಿಸಲಾಗುತ್ತಿರಲಿಲ್ಲ. (ತಫ್ಸೀರೆ ಕಬೀರ್, ಸಂಪುಟ–2, ಪುಟ–427–428)

ಎಂದರೆ ಆ ಸಮಯದಲ್ಲಿ ಯುದ್ಧಗಳು ಧರ್ಮವನ್ನು ಬದಲಾಯಿಸಿದ ಕಾರಣದಿಂದ ಮುಸ್ಲಿಮರ ವಿರುದ್ಧ ಮಾಡಲಾಗುತ್ತಿತ್ತು. ಆದರೆ ಈಗ ಧರ್ಮ ಸ್ಥಾಪಿತಗೊಂಡಿದೆ, ಇಸ್ಲಾಂ ನೆಲೆನಿಂತಿದೆ. ವಿಶ್ವಾಸದಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಕೆಲವು ದೃಷ್ಟಿಕೋನದ ಭಿನ್ನಾಭಿಪ್ರಾಯವಾಗಿದೆ. ಆದ್ದರಿಂದ ನಾನು ಯುದ್ಧಗಳಲ್ಲಿ ಭಾಗವಹಿಸಿಲ್ಲ. ಹೇಗಿದ್ದರೂ ಅದು ಅವರ ಒಂದು ಅಭಿಪ್ರಾಯವಾಗಿತ್ತು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಅಲಿ(ರ) ಮತ್ತು ಹಝ್ರತ್ ಮುಆವಿಯರ ನಡುವೆ ಯುದ್ಧ ನಡೆಯುತ್ತಿರುವ ಸುದ್ದಿ ರೋಮಿನ ಅರಸನಿಗೆ ಗೊತ್ತಾದಾಗ, ಅವನು ಇಸ್ಲಾಮಿನ ದೇಶಗಳ ಮೇಲೆ ಹಲ್ಲೆ ನಡೆಸಲು ಬಯಸಿದನು. ಆಗ ಹಝ್ರತ್ ಮುಆವಿಯ(ರ) ಅವರಿಗೆ ಹೀಗೆ ಪತ್ರ ಬರೆದರು: ಎಚ್ಚರಿಕೆಯಿಂದಿರಿ, ನಮ್ಮ ಪರಸ್ಪರದ ಭಿನ್ನಾಭಿಪ್ರಾಯದಿಂದ ಮೋಸಗೊಳ್ಳದಿರಿ. ನೀನು ಹಲ್ಲೆ ನಡೆಸಿದರೆ, ಹಝ್ರತ್ ಅಲಿಯ ಪರವಾಗಿ ನಿನ್ನ ವಿರುದ್ಧ ಹೋರಾಡಲು ಧಾವಿಸುವ ಮೊದಲ ಸೇನಾಧಿಪತಿ ನಾನಾಗಿರುವೆನು. (ತಫ್ಸೀರೆ ಕಬೀರ್, ಸಂಪುಟ–4, ಪುಟ–430)

ಇದರ ವಿಶದ ವಿವರಣೆಯನ್ನು ಹಝ್ರತ್ ಮುಸ್ಲಿಹ್ ಮೌಊದ್(ರ) ಹೀಗೆಯೂ ಹೇಳಿದ್ದಾರೆ: ಒಂದು ಕಾಲದಲ್ಲಿ ರೋಮಿನ ಅರಸ ಹಝ್ರತ್ ಅಲಿ ಮತ್ತು ಹಝ್ರತ್ ಮುಆವಿಯರ ನಡುವೆ ಭಿನ್ನಾಭಿಪ್ರಾಯವನ್ನು ನೋಡಿಕೊಂಡು ಮುಸ್ಲಿಮರ ಮೇಲೆ ಹಲ್ಲೆ ನಡೆಸಲು ಒಂದು ಸೈನ್ಯವನ್ನು ಕಳುಹಿಸಿದನು. ಈಗ ಅಮೇರಿಕವನ್ನು ಹಿರಿಯ ಶಕ್ತಿಯೆಂದು ಭಾವಿಸಲಾಗುವ ರೀತಿಯಲ್ಲೇ ಆ ಕಾಲದಲ್ಲಿ ರೋಮನ್ನರ ಆಡಳಿತವನ್ನು ಭಾವಿಸಲಾಗುತ್ತಿತ್ತು. ಅವರು ಸೈನ್ಯವನ್ನು ಕಳುಹಿಸುವ ಉದ್ದೇಶವನ್ನು ನೋಡಿಕೊಂಡು ಅವರ ಒಬ್ಬ ಬುದ್ಧಿವಂತ ಪಾದ್ರಿ ಹೇಳಿದರು: ಅರಸರೇ, ನೀವು ನನ್ನ ಮಾತನ್ನು ಕೇಳಿರಿ. ಸೈನ್ಯವನ್ನು ಕಳುಹಿಸಬೇಡಿರಿ. ಮುಸ್ಲಿಮರು ಪರಸ್ಪರ ಭಿನ್ನಾಭಿಪ್ರಾಯವನ್ನು ಹೊಂದಿದ್ದರೂ ನಿಮ್ಮ ವಿರುದ್ಧ ಒಟ್ಟಾಗುವರು. ಅವರ ಭಿನ್ನಾಭಿಪ್ರಾಯವನ್ನು ಅವರು ಆಗ ಮರೆತುಬಿಡುವರು. ಹೀಗೆ ಹೇಳುತ್ತಾ ಆ ಪಾದ್ರಿ ಒಂದು ಉದಾಹರಣೆಯನ್ನು ಕೊಟ್ಟರು. ಈ ಉದಾಹರಣೆ ಅವರು ಮುಸ್ಲಿಮರನ್ನು ನಿಂದಿಸಲು ಕೊಟ್ಟರೋ ಅಥವಾ ಹೀಗೆಯೇ ಕೊಟ್ಟರೋ ಎಂದು ಗೊತ್ತಿಲ್ಲ ಹೇಗಿದ್ದರೂ ಅವರು ಹೇಳಿದರು: ನೀವು ನಾಯಿಗಳನ್ನು ತನ್ನಿರಿ. ಅವುಗಳನ್ನು ಒಂದು ಕಾಲದ ವರೆಗೆ ಹಸಿವಿನಿಂದ ಇಡಿರಿ. ಅನಂತರ ಅವುಗಳ ಮುಂದೆ ಮಾಂಸವನ್ನು ಹಾಕಿರಿ. ಅವುಗಳು ಪರಸ್ಪರ ಜಗಳವಾಡುವುವು. ಆದರೆ ಆ ನಾಯಿಗಳ ಮುಂದೆ ಸಿಂಹವನ್ನು ಬಿಟ್ಟರೆ ಅವುಗಳು ತಮ್ಮ ಭಿನ್ನತೆಯನ್ನು ಮರೆತುಬಿಟ್ಟು ಸಿಂಹದ ಮೇಲೆ ಹಲ್ಲೆ ನಡೆಸುವುವು. ಈ ಉದಾಹರಣೆಯಿಂದ ಅವರು ಹೇಳಬಯಸಿದ್ದೇನೆಂದರೆ, ಈಗ ನೀನು ಹಝ್ರತ್ ಅಲಿ ಮತ್ತು ಮುಆವಿಯರ ನಡುವೆ ಇರುವ ಭಿನ್ನಾಭಿಪ್ರಾಯದಿಂದ ಪ್ರಯೋಜನ ಪಡೆಯಲು ಬಯಸುತ್ತಿಯಾ. ಆದರೆ ಹೊರಗಿನಿಂದ ಒಬ್ಬ ಶತ್ರು ಅವರ ಮೇಲೆ ಹಲ್ಲೆ ನಡೆಸಿದರೆ ಅವರಿಬ್ಬರೂ ತಮ್ಮ ಪರಸ್ಪರದ ಭಿನ್ನಾಭಿಪ್ರಾಯಗಳನ್ನ ಮರೆತು ಶತ್ರುಗಳ ವಿರುದ್ಧ ಒಟ್ಟಾಗುವರು. ಹಾಗೆಯೇ ಆಯಿತು. ಹಝ್ರತ್ ಮುಆವಿಯಾಗೆ ರೋಮಿನ ಅರಸನ ಉದ್ದೇಶದ ಬಗ್ಗೆ ಗೊತ್ತಾದಾಗ, ಅವರು ರೋಮಿನ ಅರಸನಿಗೆ ಹೀಗೆ ಪತ್ರ ಬರೆದರು: ನಮ್ಮ ಭಿನ್ನಾಭಿಪ್ರಾಯದಿಂದ ಪ್ರಯೋಜನ ಪಡೆಯಲು ನೀನು ಬಯಸಿ ಮುಸ್ಲಿಮರ ಮೇಲೆ ಹಲ್ಲೆ ನಡೆಸಲು ನೀನು ಬಯಸುತ್ತಿಯಾ. ಆದರೆ ನನಗೆ ಹಝ್ರತ್ ಅಲಿಯ ವಿರುದ್ಧ ಜಗಳವಿದೆ. ಆದರೆ ನಿನ್ನ ಸೈನ್ಯ ಹಲ್ಲೆ ನಡೆಸಿದರೆ, ಹಝ್ರತ್ ಅಲಿಯ ಪರವಾಗಿ ಆ ಸೈನ್ಯದ ವಿರುದ್ಧ ಹೋರಾಡಲು ಮೊತ್ತಮೊದಲು ಹೊರಡುವ ಸೇನಾಧಿಪತಿ ನಾನಾಗಿರುವೆನು. (ಮಜ್ಲಿಸ್ ಖುದ್ದಾಮುಲ್ ಅಹ್ಮದಿಯ ಮರ್‌ಕಝಿಯ ಕೆ ಸಾಲಾನ ಇಜ್ತೆಮಾ 1956 ಮೇಂ ಖಿತಾಬಾತ್, ಅನ್ವಾರುಲ್ ಉಲೂಮ್, ಸಂಪುಟ–25, ಪುಟ–416–417)

ಹಝ್ರತ್ ಇಬ್ನು ಅಬ್ಬಾಸ್ ವರದಿ ಮಾಡುತ್ತಾರೆ: ನಮ್ಮಲ್ಲಿ ಅತ್ಯಂತ ಉತ್ತಮವಾಗಿ ಪವಿತ್ರ ಖುರ್‌ಆನ್ ಓದುವವರು ಅಬೀ ಬಿನ್ ಕಅ್‌ಬ್ ಆಗಿದ್ದರು ಮತ್ತು ನಮ್ಮಲ್ಲಿ ಅತ್ಯಂತ ಉತ್ತಮ ತೀರ್ಮಾನ ಮಾಡುವವರು ಹಝ್ರತ್ ಅಲಿ ಆಗಿದ್ದರು ಎಂದು ಹಝ್ರತ್ ಉಮರ್(ರ) ಹೇಳುತ್ತಿದ್ದರು.
(ಸಹೀಹ್ ಬುಖಾರಿ, ಕಿತಾಬುತ್ತಫ್ಸೀರ್ ಸೂರ ಬಖರ, ಹದೀಸ್–4481)

ಹಝ್ರತ್ ಉಮ್ಮೇ ಅತಿಯ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಒಂದು ಸೈನ್ಯವನ್ನ ಕಳುಹಿಸಿದರು. ಅದರಲ್ಲಿ ಹಝ್ರತ್ ಅಲಿ(ರ) ಸಹ ಇದ್ದರು. ಹಝ್ರತ್ ಪೈಗಂಬರ್(ಸ) ಹೀಗೆ ದುಆ ಮಾಡುತ್ತಿರುವುದಾಗಿ ನಾನು ಕೇಳಿದೆ: ಹೇ ಅಲ್ಲಾಹ್, ನನಗೆ ಅಲಿಯನ್ನು ಕಾಣಿಸುವ ವರೆಗೆ ನೀನು ನನ್ನನ್ನು ಮೃತಪಡಿಸಬೇಡ.

(ಅಸದುಲ್‌ಗಾಬ ಲಿವಾರಿಫತಿಸ್ಸಹಾಬ, ಸಂಪುಟ-4, ಪುಟ-100, ದಾರುಲ್‌ಫಿಕರ್ ಬೈರೂತ್ 2003)

ಹಝ್ರತ್ ಪೈಗಂಬರ್(ಸ) ಒಂದು ಬಾರಿ ಹಝ್ರತ್ ಅಲಿಯನ್ನು ಒಂದು ಯುದ್ಧಕ್ಕಾಗಿ ಕಳುಹಿಸಿದರು. ಅವರು ಮರಳಿಬಂದಾಗ ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿಯೊಡನೆ ಹೇಳಿದರು: ಅಲ್ಲಾಹನು, ಅವನ ಪ್ರವಾದಿ ಮತ್ತು ಜಿಬ್ರೀಲ್(ಅ) ನಿನ್ನಲ್ಲಿ ಸಂಪ್ರೀತರಾಗಿದ್ದಾರೆ.
(ಕನ್‌ಝುಲ್ ಅಮಾಲ್, ಸಂಪುಟ-13, ಪುಟ-107, ಪುಟ-36349, ಮೊಅಸ್ಸಸುರ್ರಿಸಾಲ ಬೈರೂತ್ 1985)

ಒಂದು ಘಟನೆ ಹೀಗೆ ವರದಿಯಾಗಿದೆ: ಒಂದು ಬಾರಿಅಮೀರ್ ಮುಆವಿಯ ಝಿರಾರ್ ಸೌದಾಯಿಯೊಡನೆ ಹಝ್ರತ್ ಅಲಿಯ(ರ) ಗುಣವೈಶಿಷ್ಟ್ಯಗಳನ್ನು ಕೇಳಿದರು. ಅವರು ಹೇಳಿದರು: ಯಾಅಮೀರಲ್ ಮೂಅ್‌ಮಿನೀನ್ ನನ್ನನ್ನು ಕ್ಷಮಿಸು. ಅಮೀರ್ ಮುಆವಿಯಾ ಹೇಳಿದರು: ನೀನು ಹೇಳಲೇ ಬೇಕು. ಝಿರಾರ್ ಹೇಳಿದರು: 'ಹಾಗಾದರೆ ಕೇಳಿರಿ, ಅಲ್ಲಾಹನಾಣೆ, ಹಝ್ರತ್ ಅಲಿ ಧೈರ್ಯಶಾಲಿ ಮತ್ತು ಬಲಾಢ್ಯರಾಗಿದ್ದರು. ಅವರು ಉತ್ತಮ ತೀರ್ಪು ನೀಡುತ್ತಿದ್ದರು ಹಾಗೂ ನ್ಯಾಯ - ನೀತಿಯಿಂದ ತೀರ್ಪು ನೀಡುತ್ತಿದ್ದರು. ಅವರು ಅರಿವು ಮತ್ತು ಜ್ಞಾನದ ಹರಿಯುವ ಕಾರಂಜಿಯಾಗಿದ್ದರು. ಅವರ ಪ್ರತಿಯೊಂದು ಮಾತಿನಲ್ಲಿ ಯುಕ್ತಿ ಇರುತ್ತಿತ್ತು. ಅವರು ಲೋಕ ಮತ್ತು ಅದರ ರಮ್ಯತೆಗಳಿಂದ ದೂರವಿರುತ್ತಿದ್ದರು. ರಾತ್ರಿ ಮತ್ತು ಅದರ ಏಕಾಂತತೆಯನ್ನು ಪ್ರೀತಿಸುತ್ತಿದ್ದರು. ಅವರು ಅಲ್ಲಾಹನ ಮುಂದೆ ತುಂಬ ಅಳುವವರು ಮತ್ತು ಆಳವಾಗಿ ಚಿಂತನ ಮಂಥನ ಮಾಡುವ ವ್ಯಕ್ತಿಯಾಗಿದ್ದರು. ಅವರು ಅಲ್ಪ ವಸ್ತ್ರಗಳನ್ನು ಮತ್ತು ಅತ್ಯಂತ ಸರಳವಾದ ಆಹಾರಗಳನ್ನು ಇಷ್ಟಪಡುತ್ತಿದ್ದರು. ಅವರು ನಮ್ಮ ನಡುವೆ ನಮ್ಮ ಹಾಗೆಯೇ ಸಾಮಾನ್ಯ ವ್ಯಕ್ತಿಯಂತೆ ಇರುತ್ತಿದ್ದರು. ಅವರೊಡನೆ ಸವಾಲು ಕೇಳಿದರೆ ಅವರು ಉತ್ತರ ಕೊಡುತ್ತಿದ್ದರು ಮತ್ತು ಯಾವುದಾದರೂ ಘಟನೆಯ ಬಗ್ಗೆ ಅವರೊಡನೆ ಅನ್ವೇಷಿಸಿದರೆ ಅವರು ಅದರ ಬಗ್ಗೆ ಹೇಳಿಕೊಡುತ್ತಿದ್ದರು. ಅಲ್ಲಾಹನಾಣೆ, ನಮಗೆ ಅವರೊಡನೆ ಮತ್ತು ಅವರಿಗೆ ನಮ್ಮೊಡನೆ ಪ್ರೀತಿ ಮತ್ತು ಸಾಮಿಪ್ಯದ ಹಿರಿದಾದ ಸಂಬಂಧವಿದ್ದರೂ ನಾವು ಅವರ ಪ್ರತಾಪದ ಕಾರಣದಿಂದ ಅವರೊಡನೆ ಅಲ್ಪವಾಗಿ ಮಾತ್ರ ಮಾತುಕತೆ ನಡೆಸುತ್ತಿದ್ದೆವು. ಅವರು ಧಾರ್ಮಿಕ ಜನರನ್ನು ಗೌರವಿಸುತ್ತಿದ್ದರು ಮತ್ತು ಬಡವರಿಗೆ ತಮ್ಮ ಸಮೀಪದಲ್ಲೇ ಜಾಗ ಮಾಡಿಕೊಡುತ್ತಿದ್ದರು. ಅವರ ನಾಲಗೆಯಿಂದ ಸುಳ್ಳು ಮಾತನ್ನು ಅಂಗೀಕರಿಸುವಂತೆ ಮಾಡಲು ಯಾವನೇ ಶಕ್ತಿಶಾಲಿ ವ್ಯಕ್ತಿಗೆ ಸಾಧ್ಯವಿರಲಿಲ್ಲ. ಯಾವನೇ ದುರ್ಬಲ ವ್ಯಕ್ತಿ ಅವರ ನ್ಯಾಯ - ನೀತಿಯಿಂದ ನಿರಾಶೆಗೊಳ್ಳುತ್ತಿರಲಿಲ್ಲ. ಅಲ್ಲಾಹನಾಣೆ, ರಾತ್ರಿ ಆಗಿ ನಕ್ಷತ್ರಗಳು ಮಂದವಾಗಿ ಹೊಳೆಯುತ್ತಿರುವ ಸಮಯದಲ್ಲಿ, ಅವರು ತನ್ನ ಗಡ್ಡವನ್ನು ಹಿಡಿದುಕೊಂಡು, ಹಾವು ಕಚ್ಚಿದ ವ್ಯಕ್ತಿ ನಡುಗುಂತೆ ನಡುಗುತ್ತಿದ್ದದ್ದನ್ನು ಮತ್ತು ಅತ್ಯಂತ ದುಃಖದಿಂದ ಇರುವ ವ್ಯಕ್ತಿಯ ಹಾಗೆ ಅಳುತ್ತಿರುವುದನ್ನು ಕೆಲವು ಸಂದರ್ಭದಲ್ಲಿ ನಾನು ಕಂಡಿದ್ದೇನೆ. ಅವರು ಹೇಳುತ್ತಿದ್ದರು: ಹೇ ಲೋಕ ಹೋಗು, ನನ್ನನ್ನು ಬಿಟ್ಟು ಬೇರೆಯಾರನ್ನಾದರೂ ನೀನು ಮೋಸಮಾಡು. ಏನು, ನೀನು ನನ್ನ ಮುಂದೆ ಬರುತ್ತಿದ್ದೀಯಾ ಮತ್ತು ನಿನ್ನ ಶೃಂಗಾರವನ್ನು ನನಗೆ ತೋರಿಸುತ್ತಿದ್ದೀಯಾ? ನೀನು ಬಯಸುವುದು ಎಂದಿಗೂ ಆಗಲಿಕ್ಕಿಲ್ಲ. ಖಂಡಿತ ಆಗುವುದಿಲ್ಲ. ನಾನು ನಿನಗೆ ಮೂರು ತಲಾಖ್‌ಗಳನ್ನು ನೀಡಿದ್ದೇನೆ. ಅದರ ನಂತರ ಮರಳಿಕೆ ಇಲ್ಲ. ಏಕೆಂದರೆ ನಿನ್ನ ಆಯಸ್ಸು ಅಲ್ಪ ಮತ್ತು ನಿನಗೆ ಯಾವ ಬೆಲೆಯೂ ಇಲ್ಲ. ಅಕಟಾ, ಯಾತ್ರೆಯ ಸಾಮಾನುಗಳು ಅಲ್ಪವೇ ಇವೆ ಮತ್ತು ಯಾತ್ರೆ ದೀರ್ಘವಾದಯಾತ್ರೆ ಮಾಡಲಿಕ್ಕೆ ಇದೆ ಹಾಗೂ ಮಾರ್ಗವು ಭಯಾನಕವಾಗಿದೆ.' ಇದನ್ನು ಆಲಿಸಿಕೊಂಡು ಅಮೀರ್ ಮುಆವಿಯ ಅತ್ತುಬಿಟ್ಟರು ಮತ್ತು ಹೀಗೆ ಹೇಳಿದರು: ಅಲ್ಲಾಹನು ಅಬುಲ್ ಹಸನಿನ (ಹಝ್ರತ್ ಅಲಿಯ) ಮೇಲೆ ಕರುಣೆದೋರಲಿ. ಅಲ್ಲಾಹನಾಣೆ ಅವರು ಹೀಗೆಯೇಆಗಿದ್ದರು. ಹೇ ಝಿರಾರ್‌ಅಲಿಯ ನಿಧನದಿಂದ ನಿನಗೆ ಎಷ್ಟು ದುಃಖವುಂಟಾಗಿತ್ತು? ಝಿರಾರ್ ಹೇಳಿದರು: ತಾಯಿಯೊಬ್ಬಳ ಮಗುವನ್ನು ಅವಳ ಮಡಿಯಲ್ಲೇ ಕೊಯ್ಯಲಾದರೆ, ಅವಳಿಗೆ ಉಂಟಾಗುವ ದುಃಖದಷ್ಟು ನನಗೆ ದುಃಖವುಂಟಾಗಿತ್ತು. (ಅಲ್‌ಇಸ್ತಿಆಬ್ ಫೀ ಮಾರಿಫತಿಸ್ಸಹಾಬ, ಸಂಪುಟ-3, ಪುಟ-1107-1108, ದಾರುಲ್‌ಜೀಲ್ ಬೈರೂತ್ 1992)

ಹಝ್ರತ್ ಅಲಿಯ(ರ) ನ್ಯಾಯಾಲಯದ ತೀರ್ಪು ಬಹಳ ಪ್ರಸಿದ್ಧವಾದುದಾಗಿದೆ. ಅವುಗಳಲ್ಲಿ ಕೆಲವನ್ನು ಹೇಳುತ್ತೇನೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ:

ಹಝ್ರತ್ ಅಲಿಯ ಕಾಲದ ಒಂದು ಘಟನೆ ತಬರಿಯಲ್ಲಿ ಬರೆಯಲಾಗಿದೆ. ಇಸ್ಲಾಮಿನ ಆರಂಭದಿಂದ ಇದರ ಪ್ರಕಾರ ಬಹಳ ಎಚ್ಚರಿಕೆಯಿಂದ ನಡೆಯಲಾಗುತ್ತಿತ್ತು ಎಂದು ಗೊತ್ತಾಗುತ್ತದೆ. ಘಟನೆ ಹೀಗಿದೆ: ಅದ್ಲ್ ಬಿನ್ ಉಸ್ಮಾನ್ ವರದಿ ಮಾಡುತ್ತಾರೆ: ಹಝ್ರತ್ ಅಲಿ(ರ) ಹಂದಾನಿನಿ ಹೊರಗೆ ಇದ್ದರು. ಅದೇ ವೇಳೆ ಅವರು ಎರಡು ಗುಂಪುಗಳು ಪರಸ್ಪರ ಜಗಳ ವಾಡುವುದನ್ನು ಕಂಡರು. ಅವರು ಅವರ ಮಧ್ಯ ಸಂಧಾನ ಮಾಡಿದರು. ಆದರೆ ಸ್ವಲ್ಪ ಸಮಯದ ನಂತರ, ಯಾರಾದರೂ ಸಹಾಯಕ್ಕಾಗಿ ಬನ್ನಿರಿ ಎಂಬ ಸ್ವರ ಕೇಳಿಬಂತು. ಹಝ್ರತ್ ಅಲಿ(ರ) ಬೇಗನೇ ಶಬ್ದ ಕೇಳಿಬಂದ ಕಡೆಗೆ ಓಡಿಹೋದರು. ಓಡುವಾಗ ಅವರ ಬೂಟಿನ ಶಬ್ದ ಸಹ ಬರುತ್ತಿತ್ತು ಮತ್ತು ಅವರು ಸಹಾಯಬಂತು ಸಹಾಯಬಂತು ಎಂದೂ ಹೇಳುತ್ತಿದ್ದರು. ಹಾಗೆ ಅವರು ಅಲ್ಲಿಗೆ ಹೋದಾಗ, ಒಬ್ಬ ವ್ಯಕ್ತಿ ಮತ್ತೊಬ್ಬನನ್ನು ಬಿಗಿಯಾಗಿ ಹಿಡಿದಿರುವುದನ್ನು ಕಂಡರು. ಆ ವ್ಯಕ್ತಿ ಹಝ್ರತ್ ಅಲಿಯನ್ನು ಕಂಡಾಗ ಹೀಗೆ ಹೇಳಿದನು: ಯಾ ಅಮೀರಲ್ ಮೂಮಿನೀನ್, ನಾನು ಇವನಿಗೆ ಒಂದು ಬಟ್ಟೆಯನ್ನು ನೂರು ದಿರ್ಹಮಿಗೆ ಮಾರಿದ್ದೆ. ಅವನು ಕೊಡುವ ದಿರ್ಹಮ್‌ಗಳಲ್ಲಿ ಯಾವುದೇ ದಿರ್ಹಮ್ ತುಂಡಾಗಿರಬಾರದು ಮತ್ತು ಸಂಶಯಾಸ್ಪದವಾಗಿರಬಾರದು ಎಂದು ಶರತ್ತು ಹಾಕಿದ್ದೆ. ಅದನ್ನು ಇವನು ಅಂಗೀಕರಿಸಿದ್ದನು. ಇಂದು ನಾನು ಅವನ ಕೊಟ್ಟ ದಿರ್ಹಂಗಳಲ್ಲಿ ಕೆಲವು ಕಳಪೆಯಾದವುಗಳನ್ನು ತಿರುಗಿಕೊಡಲು ಬಂದೆ. ಆದರೆ ಅವನು ಬದಲಿ ಮಾಡಿ ಕೊಡಲು ನಿರಾಕರಿಸಿದನು. ನಾನು ಅವನ ಹಿಂದೆ ಬಿದ್ದಾಗ ಅವನು ನನ್ನ ಕೆನ್ನೆಗೆ ಹೊಡೆದನು. ಹಝ್ರತ್ ಅಲಿ(ರ) ಖರೀದಿ ಮಾಡಿದವನೊಡನೆ ದಿರ್ಹಂ ಬದಲಿಸಿ ಕೊಡಲು ಹೇಳಿದರು. ಆಗ ಖರೀದಿದಾರ ಹೇಳಿದ: ಅವನನ್ನು ಹೊಡೆದದಕ್ಕೆ ಸಬೂತುಕೊಡು. ಮಾರಾಟ ಮಾಡಿದ ವ್ಯಕ್ತಿ ಅದರ ಸಬೂತು ನೀಡಿದನು. ಆಗ ಹಝ್ರತ್ ಅಲಿ(ರ) ಹೊಡೆದವನನ್ನು ಕುಳ್ಳಿರಿಸಿದರು. ಮಾರಾಟ ಮಾಡಿದವನೊಡನೆ ಕೆನ್ನೆಗೆ ಹೊಡೆದದ್ದಕ್ಕೆ ಪ್ರತಿಕಾರ ಮಾಡಲು ಹೇಳಿದರು. ಮಾರಾಟಗಾರನು ಹೇಳಿದನು: ಯಾ ಅಮೀರಲ್‌ಮೂಮಿನೀನ್, ನಾನು ಅವನನ್ನು ಕ್ಷಮಿಸಿದ್ದೇನೆ. ಹಝ್ರತ್ ಅಲಿ(ರ) ಹೇಳಿದರು: ನೀನಂತು ಕ್ಷಮಿಸಿರುವೆ. ಆದರೆ ನಾನು ನಿನ್ನ ಪರವಾಗಿ ಎಚ್ಚರಿಕೆಯಿಂದ ಕ್ರಮ ಕೈಗೊಳ್ಳಲು ಬಯಸುತ್ತೇನೆ. ಹೀಗೆ ಕೆನ್ನೆಗೆ ಹೊಡೆದ ವ್ಯಕ್ತಿಗೆ ಏಳು ಚಾವಟಿಯೇಟು ಕೊಡಲಾಯಿತು. ಹೀಗೆ ಸರ್ಕಾರದ ಕಡೆಯಿಂದ ಅವನನ್ನು ಶಿಕ್ಷಿಸಲಾಯಿತು. (ತಫ್ಸೀರೆ ಕಬೀರ್, ಸಂಪುಟ-2, ಪುಟ-362-363)

ಇನ್ನೊಂದು ಘಟನೆಯನ್ನು ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಒಂದು ಉತ್ತಮ ಉದಾಹರಣೆ ಹಝ್ರತ್ ಅಲಿಯ ಕೆಲಸಗಳಿಂದ ಸಿಗುತ್ತದೆ. ಒಂದು ಸಲ ಒಬ್ಬನನ್ನು ಹೊಡೆದ ವ್ಯಕ್ತಿಯೊಡನೆ ಹಝ್ರತ್ ಅಲಿ(ರ) ಪ್ರತಿಕಾರವಾಗಿ ಹೊಡೆಯಲು ಹೇಳಿದರು. ಆದರೆ ಅವನು ಹೇಳಿದನು ನಾನು ಹೊಡೆದವನನ್ನು ಕ್ಷಮಿಸಿದ್ದೇನೆ. ಅವನು ಹೆದರಿಕೆಯಿಂದ ತಿರುಗಿ ಹೊಡೆಯುವುದನ್ನು ನಿರಾಕರಿಸಿದ್ದಾನೆಂದು ಹಝ್ರತ್ ಅಲಿಗೆ ಗೊತ್ತಾಯಿತು. ಏಕೆಂದರೆ ಹೊಡೆದವನು ಬಹಳ ಶಕ್ತಿವಂತ ವ್ಯಕ್ತಿಯಾಗಿದ್ದನು. ಹಝ್ರತ್ ಅಲಿ(ರ) ಹೇಳಿದರು: ನೀನು ನಿನ್ನ ಸ್ವಂತ ಹಕ್ಕನ್ನು ತ್ಯಜಿಸಿ ಇವನನ್ನು ಕ್ಷಮಿಸಿದ್ದೀಯ. ಆದರೆ ನಾನೀಗ ಸರ್ಕಾರದ ಹಕ್ಕನ್ನು ಉಪಯೋಗಿಸುವೆನು. ಹೀಗೆ ದುರ್ಬಲ ವ್ಯಕ್ತಿಯನ್ನು ಹೊಡೆದದಷ್ಟು ಅವನನ್ನು ಹೊಡೆಯಲಾಯಿತು. (ತಫ್ಸೀರೆ ಕಬೀರ್, ಸಂಪುಟ-4, ಪುಟ-331)

ಹಝ್ರತ್ ಮುಸ್ಲಿಹ್ ಮೌಊದ್‌ರ(ರ) ಹೇಳುತ್ತಾರೆ: ಹಝ್ರತ್ ಅಲಿಯ ಒಂದು ಮೊಕದ್ದಮೆ ಒಬ್ಬ ಮುಸ್ಲಿಮ್ ಮೆಜಿಸ್ಟ್ರೇಟಿನ ಮುಂದೆ ಇರಿಸಲಾಯಿತು. ಮೆಜಿಸ್ಟ್ರೇಟ್ ಮೊಕದ್ದಮೆಯ ವಿವರವನ್ನು ಅರಿಯುವ ಮುಂಚೆಯೇ ಹಝ್ರತ್ ಅಲಿಯ ಪರವಾಗಿ ನಿಂತಂತೆ ತೋರುತ್ತಿದ್ದರು. ಇದನ್ನು ಕಂಡು ಹಝ್ರತ್ ಅಲಿ ಹೇಳಿದರು: ಹೀಗೆ ನನ್ನ ಪರವಾಗಿ ನಿಲ್ಲುವುದು ನೀನು ಮಾಡುತ್ತಿರುವ ಮೊದಲ ಅನ್ಯಾಯವಾಗಿದೆ. ಈಗ ನಾನು ಮತ್ತು ಅವನು ಸಮ. (ಖುತ್‌ಬಾತೆ ಮಹ್ಮೂದ್, ಸಂಪುಟ-16, ಪುಟ-516)

ಹಝ್ರತ್ ಅಲಿಯ(ರ) ಸ್ವಭಾವ ಶ್ರೇಷ್ಠತೆಗಳನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

ಅವರು ಸಮುದಾಯದ ಅತ್ಯಂತ ವಾಗ್ಮಿಯಾದ, ವಾಕ್ಪಟುತ್ವ ಹೊಂದಿದ್ದ ಮತ್ತು ಮಾತಿನಲ್ಲಿ ಜೀವ ತುಂಬುತ್ತಿದ್ದ ವ್ಯಕ್ತಿಯಾಗಿರಲಿಲ್ಲವೇ? ತನ್ನ ವಾಕ್ಚಾತುರ್ಯ ಮತ್ತು ಮನೋಹರವಾದ ಮಾತುಗಳ ಬಲದಿಂದ ಜನರನ್ನು ಒಟ್ಟುಸೇರಿಸುವುದು ಅವರಿಗೆ ಒಂದು ಗಂಟೆಯ ಅಥವಾ ಅದಕ್ಕಿಂತ ಕಡಿಮೆ ಸಮಯದ ಕೆಲಸವಾಗಿತ್ತು. (ಸಿರ್ರುಲ್ ಖಿಲಾಫ, ರೂಹಾನಿ ಖಝಾಇನ್, ಸಂಪುಟ-8, ಪುಟ-350)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತೆ ಹೇಳುತ್ತಾರೆ:

ಹಝ್ರತ್ ಅಬೂಬಕ್ಕರ್, ಉಮರ್, ಉಸ್ಮಾನ್, ಅಲಿ ರಝಿಯಲ್ಲಾಹು ಅನ್‌ಹುಮ್‌ರಿಗೆ ಸಮಾನವಾದ ಗುಣವನ್ನು ತನ್ನೊಳಗೆ ಉಂಟುಮಾಡುವ ತನಕ ಯಾವುದೇ ವ್ಯಕ್ತಿ ಮೂಮಿನ್ ಮತ್ತು ಮುಸ್ಲಿಮ್ ಆಗಲಾರನು. ಇವರು ಲೌಕಿಕತೆಗೆ ಮೋಹಿತರಾಗಿರಲಿಲ್ಲ. ಬದಲಿಗೆ ಅವರು ತಮ್ಮ ಜೀವಿತಗಳನ್ನು ಅಲ್ಲಾಹನ ಮಾರ್ಗದಲ್ಲಿ ಅರ್ಪಿಸಿದ್ದರು. (ಲೆಕ್ಚರ್ ಲುಧಿಯಾನ, ರೂಹಾನಿ ಖಝಾಇನ್, ಸಂಪುಟ-20, ಪುಟ-294)

ಮತ್ತೆ ಅವರು ಹೇಳುತ್ತಾರೆ: ಖ಼ವಾರಿಜಿಯರು ಹಝ್ರ್‌ರತ್ ಅಲಿಯನ್ನು ಫಾಸಿಕ್ ಎಂದು ಹೇಳುತ್ತಾರೆ. ದೇವಭಕ್ತಿಗೆ ವಿರುದ್ಧವಾದ ಹಲವು ಸಂಗತಿಗಳನ್ನು ಅವರ ಮೇಲೆ ಆರೋಪಿಸುತ್ತಾರೆ. ಅವರು ಸತ್ಯವಿಶ್ವಾಸವೇ ಇರಲಿಲ್ಲವೆಂದು ಭಾವಿಸುತ್ತಾರೆ. ಸತ್ಯಸಂಧರಾದ ಪ್ರವಾದಿ ಮತ್ತು ಈ ಎಲ್ಲ ಶ್ರೇಷ್ಠ ವ್ಯಕ್ತಿಗಳಿಗೆ ದೇವಭಕ್ತಿ, ಪ್ರಾಮಾಣಿಕತೆ ಇರಬೇಕೆಂಬುದು ಶರತ್ತಾಗಿರುವಾಗ, ಅವರ ಜೀವನವನ್ನು ಜನಸಾಮಾನ್ಯರ ದೃಷ್ಟಿಯಲ್ಲಿ ಸಂಶಯದ ಸ್ಥಿತಿಯಲ್ಲಿ ಅಲ್ಲಾಹನು ಏಕೆ ಇರಿಸಿದ್ದನು ಎಂಬ ಸವಾಲು ಇಲ್ಲಿ ಏಳುತ್ತದೆ. ಎಂದರೆ ಅವರ ಜೀವನ ಜನರಿಗೆ ಸರಿಯಾಗಿ ಗೊತ್ತಾಗದೇ ಅವರನ್ನು ದೇವಭಯ ಇಲ್ಲದವರೂ, ಪ್ರಾಮಾಣಿಕತೆ ಇಲ್ಲದವರೂ ದೌರ್ಜನ್ಯ ಮಾಡುವವರೂ ಹರಾಮಾದ ಸಂಪತ್ತು ತಿನ್ನುವವರೂ ಅನ್ಯಾಯವಾಗಿ ಕೊಲ್ಲುವವರೂ ಸುಳ್ಳು ಹೇಳುವವರೂ ಪ್ರತಿಜ್ಞೆ ಮುರಿಯುವವರೂ ಸ್ವಾರ್ಥರೂ ಮತ್ತು ಪಾಪಿಗಳೆಂದು ಭಾವಿಸಲಾಯಿತು. ಹೀಗೆ ಏಕೆ ಆಯಿತೆಂಬ ಸವಾಲು ಏಳುತ್ತದೆ. ಏಕೆಂದರೆ ಲೋಕದಲ್ಲಿ ಪ್ರವಾದಿಯಾಗಿರದ, ವಲಿಯಾಗಿರದ ಮತ್ತು ಖ಼ಲೀಫತುಲ್ ಮುಸ್ಲಿಮೀನೆಂದು ವಾದಿಸದ ಹಲವಾರು ಇತರ ಒಳ್ಳೆಯ ಜನರೂ ಇದ್ದರು. ಆದರೆ ಅವರ ಮೇಲೆ ಇಂತಹ ಯಾವುದೇ ಆರೋಪ ಅವರ ಜೀವನದ ಮೇಲೆ ಹೊರಿಸಲಾಗಿಲ್ಲ. ಇದಕ್ಕಿರುವ ಉತ್ತರವೇನೆಂದರೆ, ಅಲ್ಲಾಹನ ಅಸ್ತಿತ್ವ ಯಾವ ರೀತಿಯಲ್ಲಿ ದುರ್ಭಾವನೆ ಹೊಂದಿರುವ ಮತ್ತು ಸಂಶಯಗ್ರಸ್ತರಿಂದ ರಹಸ್ಯವಾಗಿದೆಯೋ ಅದೇ ರೀತಿಯಲ್ಲಿ ಅಲ್ಲಾಹನು ತನ್ನ ವಿಶಿಷ್ಟ ಇಷ್ಟದಾಸರನ್ನು ಸಂಶಯಗ್ರಸ್ತ ಮತ್ತು ದುರ್ಭಾವನೆ ಹೊಂದಿರುವ ಇಂತಹ ನತದೃಷ್ಟರಾದ ಜನರಿಂದ ರಹಸ್ಯವಾಗಿ ಇರಿಸಲು ಬಯಸಿರುವ ಕಾರಣ ಹೀಗೆ ಮಾಡಿದ್ದಾನೆ. ಆದ್ದರಿಂದ ಸ್ವತಃ ದೇವಭಕ್ತಿಯಿಲ್ಲದ ಜನರು ಮುತ್ತಕಿಯರಾದ ಈ ಶ್ರೇಷ್ಠ ವ್ಯಕ್ತಿಗಳ ಮೇಲೆ ಆರೋಪ ಹೊರಿಸುತ್ತಾರೆ. (ತಿರ್‌ಯಾಖುಲ್ ಖುಲೂಬ್, ರೂಹಾನಿ ಖಝಾಇನ್, ಸಂಪುಟ–15, ಪುಟ–422 ಅಡಿಟಿಪ್ಪಣಿ)

ಹಝ್ರ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅವರು ಸಮುದಾಯದ ನಿಸ್ಸಂಶಯವಾಗಿಯೂ ಹಝ್ರ್‌ರತ್ ಅಲಿ ರಝಿಯಲ್ಲಾಹು ಅನ್‌ಹು ಸತ್ಯಾನ್ವೇಷಿಗಳ ಪ್ರತೀಕ್ಷೆಯ ಕೇಂದ್ರಬಿಂಧು, ಉದಾರಿಗಳಿಗೆ ಅತುಲ್ಯವಾದ ಮಾದರಿ ಮತ್ತು ದೇವನ ದಾಸರಿಗೆ ಹುಜ್ಜತುಲ್ಲಾಹ್ ಎಂದರೆ ಅಲ್ಲಾಹನ ಅಸ್ತಿತ್ವಕ್ಕೆ ಸ್ಪಷ್ಟವಾದ ಒಂದು ಪುರಾವೆಯಾಗಿದ್ದರು. ಅದೇ ರೀತಿಯಲ್ಲಿ ಅವರು ತಮ್ಮ ಕಾಲಘಟ್ಟದ ಜನರಲ್ಲಿ ಅತ್ಯುತ್ತಮ ವ್ಯಕ್ತಿ ಮತ್ತು ದೇಶಗಳನ್ನು ಬೆಳಗಿಸುವ ಅಲ್ಲಾಹನ ಪ್ರಕಾಶವಾಗಿದ್ದರು. ಆದರೆ ಅವರ ಖ಼ಿಲಾಫತಿನ ಕಾಲಘಟ್ಟವು ಶಾಂತಿ ಮತ್ತು ಸಮಾಧಾನದ ಕಾಲವಾಗಿರಲಿಲ್ಲ. ಬದಲಾಗಿ ಫಿತ್ನಗಳ, ಅಕ್ರಮ ಮತ್ತು ದೌರ್ಜನ್ಯಗಳ ತೀವ್ರ ಬಿರುಗಾಳಿಯ ಕಾಲವಾಗಿತ್ತು. ಜನಸಾಮಾನ್ಯರು ಅಲಿ ರಝಿಯಲ್ಲಾಹು ಅನ್‌ಹುರ ಮತ್ತು ಅಬೂ ಸುಫ್‌ಯಾನ್‌ರ ಮಗನ ಖ಼ಿಲಾಫತ್ ಬಗ್ಗೆ ಭಿನ್ನಾಭಿಪ್ರಾಯ ಹೊಂದಿದ್ದರು. ಇಬ್ಬರ ಕಡೆಗೂ ಅಚ್ಚರಿಗೊಂಡ ವ್ಯಕ್ತಿಗಳ ಹಾಗೆ ದಿಟ್ಟಿಸಿ ನೋಡುತ್ತಾ ಕುಳಿತ್ತಿದ್ದರು. ಕೆಲವರು ಈ ಇಬ್ಬರನ್ನೂ ಆಕಾಶದ ಫುರ್ಖ಼ತ್ ಎಂಬ ಹೆಸರಿನ ಎರಡು ವಿದೂರ ನಕ್ಷತ್ರಗಳಿಗೆ ಸಮಾನವೆಂದು ಭಾವಿಸುತ್ತಿದ್ದರು ಮತ್ತು ಇಬ್ಬರಿಗೂ ಸಮಾನವಾದ ಸ್ಥಾನವನ್ನು ನೀಡುತ್ತಿದ್ದರು. ಆದರೆ ನಿಜವೇನೆಂದರೆ, ಸತ್ಯ ಅಲಿ ಮುರ್ತಝ಼ಾ ರಝಿಯಲ್ಲಾಹು ಅನ್‌ಹುರೊಂದಿಗೆ ಆಗಿತ್ತು. ಯಾರು ಅವರ ಕಾಲದಲ್ಲಿ ಅವರೊಂದಿಗೆ ಯುದ್ಧ ಮಾಡಿದರೋ ಅವರು ವಿದ್ರೋಹ ಮತ್ತು ಅವಿಧೇಯತೆ ತೋರಿಸಿದರು. ಅಲ್ಲಾಹನ ಕಡೆಯಿಂದ ಖ಼ಿಲಾಫತಿಗೆ ಸಾಮಾನ್ಯವಾಗಿರುವ ಸಮಾಧಾನದ ವಾಗ್ದಾನ ಪ್ರಕಾರ ಹಝ್ರ್‌ರತ್ ಅಲಿಯ ಖ಼ಿಲಾಫತ್ ಸಮಾಧಾನ ಪರವಾಗಿರಲಿಲ್ಲ. ಬದಲಿಗೆ ಹಝ್ರ್‌ರತ್ ಅಲಿಗೆ ಅವರ ವಿರೋಧಿಗಳ ಕಡೆಯಿಂದ ದುಃಖ ಕೊಡಲಾಗಿತ್ತು. ಅವರ ಖ಼ಿಲಾಫತ್ ವಿವಿಧ ತರದ ಫಿತ್ನಗಳ ಕೆಳಗೆ ನಾಶವಾಯಿತು. ಅವರ ಮೇಲೆ ಅಲ್ಲಾಹನ ಹಿರಿದಾದ ಅನುಗ್ರಹವಿತ್ತು. ಆದರೆ ಅವರು ಜೀವಿತ ಪೂರ್ತಿ ದುಃಖಿತರಾಗಿದ್ದರು. ಹಿಂದಿನ ಖ಼ಲೀಫರ ಹಾಗೆ ಧರ್ಮದ ಪ್ರಚಾರ ಮತ್ತು ಶತ್ರುಗಳನ್ನು ಹೊಡೆದೋಡಿಸಲು ಅವರಿಂದ ಸಾಧ್ಯವಾಗಲಿಲ್ಲ. ಅವರಿಗೆ ಸ್ವಂತ ಸಮುದಾಯದ ಆರೋಪಗಳಿಂದ ಮುಕ್ತವಾಗುವ ಸಾವಾಕಾಶ ಸಹ ಸಿಗಲಿಲ್ಲ. ಅವರನ್ನು ಪ್ರತಿಯೊಂದು ಉದ್ದೇಶ ಮತ್ತು ಅಭಿಲಾಷೆಯಿಂದ ದೂರವಿರಿಸಲಾಯಿತು. ಅವರಿಗೆ ನೆರವು ನೀಡಲು ಜನರು ಒಟ್ಟುಗೂಡಲಿಲ್ಲ. ಬದಲಿಗೆ ಅವರನ್ನು ದೌರ್ಜನ್ಯ ಮಾಡುವುದಕ್ಕೆ ಒಟ್ಟುಗೂಡಿದರು. ಅವರನ್ನು ಸಂಕಷ್ಟಕ್ಕೆ ಸಿಲುಕಿಸಲು ಪ್ರತಿಯೊಂದು ಮಾರ್ಗದಲ್ಲಿ ಕುಳಿತುಕೊಂಡರು. ಹಝ್ರ್‌ರತ್ ಅಲಿ(ರ) ಬಹಳ ಸಹನೆಯುಳ್ಳವರೂ ಸಾತ್ವಿಕರೂ ಆಗಿದ್ದರು. ಆದರೆ ಸಾಮಾನ್ಯವಾಗಿ ಖ಼ಿಲಾಫತಿಗೆ ಅಲ್ಲಾಹನು ನೀಡಿರುವಂತಹ ಸಮಾಧಾನದ ವಾಗ್ದಾನ ಅವರ ಖ಼ಿಲಾಫತ್ ಕಾಲದಲ್ಲಿ ಇತ್ತು ಎಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ಅವರ ಖ಼ಿಲಾಫತ್ ಕಲಹ, ವಿದ್ರೋಹ ಮತ್ತು ನಷ್ಟದ ಕಾಲದಲ್ಲಾಗಿತ್ತು. (ಸಿರ್‍ರುಲ್ ಖಿಲಾಫ, ರೈಹಾನಿ ಖಝಾಇನ್, ಸಂಪುಟ–8, ಪುಟ–352–353)

ಹಝ್ರ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತೆ ಹೇಳೂತ್ತಾರೆ: ಹಝ್ರ್‌ರತ್ ಅಬೂಬಕ್ಕರ್ ಸಿದ್ದೀಖ್ ರಝಿಯಲ್ಲಾಹು ಅನ್‌ಹು, ಹಝ್ರ್‌ರತ್ ಉಮರ್ ಫಾರೂಖ್ ರಝಿಯಲ್ಲಾಹು ಅನ್‌ಹು, ಹಝ್ರ್‌ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹು ಮತ್ತು ಹಝ್ರ್‌ರತ್ ಅಲಿ ಮುರ್ತಝ಼ಾ ರಝಿಯಲ್ಲಾಹು ಅನ್‌ಹು ಸತ್ಯವಾಗಿಯೂ ಧರ್ಮದ ಸಂರಕ್ಷಕರಾಗಿದ್ದರು.

ಹಝ್ರ್‌ರತ್ ಅಲಿಯ(ರ) ಸ್ಥಾನ ಮತ್ತು ಪದವಿಯನ್ನು ಪ್ರಸ್ತಾಪಿಸುತ್ತಾ ಹಝ್ರ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹಝ್ರ್‌ರತ್ ಅಲಿ ರಝಿಯಲ್ಲಾಹು ಅನ್‌ಹು ದೇವಭಕ್ತರೂ ಪರಿಶುದ್ಧ ಅಂತರಾಳವಿರುವವರೂ ಮತ್ತು ದಯವಂತನಾದ ಅಲ್ಲಾಹನ ಸನ್ನಿಧಿಯಲ್ಲಿ ಅತ್ಯಂತ ಪ್ರಿಯರಾದವರಲ್ಲಿ ಸೇರಿದರವರಾಗಿದ್ದರು. ಅವರು ಸಮುದಾಯದ ವರಿಷ್ಠ ವ್ಯಕ್ತಿ ಮತ್ತು ಆ ಕಾಲದ ನೇತಾರರಲ್ಲಿ ಒಬ್ಬರಾಗಿದ್ದರು. ಅವರು ಸರ್ವಶಕ್ತನಾದ ಅಲ್ಲಾಹನ ಸಿಂಹವೂ ದಯಾವಂತನಾದ ಅಲ್ಲಾಹನ ಶೂರ ಉದಾರಿ ಮತ್ತು ಪರಿಶುದ್ಧ ಹೃದಯ ಹೊಂದಿರುವ ಪುರುಷರಾಗಿದ್ದರು. ಶತ್ರುಗಳ ಒಂದು ಸೈನ್ಯವೇ ಎದುರಿಗೆ ಬಂದರೂ ಯುದ್ಧ ಮೈದಾನದಲ್ಲಿ ತಮ್ಮ ಜಾಗವನ್ನು ಬಿಟ್ಟುಹೋಗದ ಏಕಾಂಗಿ ಮತ್ತು ಧೈರ್ಯಶಾಲಿ ವ್ಯಕ್ತಿಯಾಗಿದ್ದರು. ಅವರು ಜೀವನ ಪೂರ್ತಿ ಬಡತನದಲ್ಲಿ ಕಳೆದರು ಮತ್ತು ಮನುಷ್ಯನಿಗೆ ತಲುಪಬಹುದಾದ ಭಕ್ತಿಯ ಉನ್ನತ ಮಟ್ಟವನ್ನು ತಲುಪಿದ್ದರು. ಸಂಪತ್ತನ್ನು ವಿತರಣೆ ಮಾಡುವುದರಲ್ಲಿಯೂ, ಜನರ ದುಃಖಗಳನ್ನು ದೂರ ಮಾಡುವುದರಲ್ಲಿಯೂ ಅನಾಥರನ್ನು, ದರಿದ್ರರನ್ನು ಮತ್ತು ನೆರೆಕರೆಯವರನ್ನು ಸಹಾಯ ಮಾಡುವುದರಲ್ಲಿಯೂ ಮೊದಲಿಗರಾಗಿದ್ದರು. ಅವರು ಯುದ್ಧಗಳಲ್ಲಿ ವಿವಿಧ ರೀತಿಯ ಶೌರ್ಯದ ಕೌಶಲ್ಯವನ್ನು ತೋರಿಸಿದ್ದರು. ಬಾಣ ಮತ್ತು ಖಡ್ಗದ ಯುದ್ಧದಲ್ಲಿ ಅವರಿಂದ ಆಶ್ಚರ್ಯಕರವಾದ ಕಾರ್ಯಗಳು ಪ್ರಕಟವಾಗುತ್ತಿದ್ದುವು. ಅದರೊಂದಿಗೆ ಅವರು ಅತ್ಯಂತ ಮಧುರಭಾಷಿಯೂ ಮತ್ತು ವಾಕ್ಚಾತುರ್ಯವಿರುವ ವಾಗ್ಮಿಯೂ ಆಗಿದ್ದರು. ಅವರು ಮಾತುಗಳು ಹೃದಯಾಂತರಾಳಕ್ಕೆ ಇಳಿಯುತ್ತಿತ್ತು. ಅವುಗಳಿಂದ ಮಿದುಳಿನ ತುಕ್ಕು ಸ್ವಚ್ಛವಾಗುತ್ತಿತ್ತು. ಸತ್ಯದ ಪ್ರಕಾಶದಿಂದ ಅವರ ಮುಖ ಬೆಳಗುತ್ತಿತ್ತು. ಅವರು ವಿವಿಧ ರೀತಿಯಲ್ಲಿ ಮಾತುಕತೆ ನಡೆಸಲು ಬಲ್ಲವರಾಗಿದ್ದರು. ಯಾವನಾದರೂ ಅವರೊಡನೆ ವಾದಕ್ಕೆ ಇಳಿದರೆ, ಅವನು ಪರಾಜಿತನಾದ ವ್ಯಕ್ತಿಯ ಹಾಗೆ ಕ್ಷಮೆ ಕೇಳಬೇಕಾಗಿ ಬರುತ್ತಿದ್ದನು. ಅವರು ಎಲ್ಲ ಸದ್ಗುಣಗಳಲ್ಲೂ ವಾಕ್ಚಾತುರ್ಯ ಮತ್ತು ವಾಕ್ಪಟುತ್ವದಲ್ಲೂ ಪರಿಪೂರ್ಣತೆ ಹೊಂದಿದ್ದರು. ಯಾರು ಅವರ ಪರಿಪೂರ್ಣತೆಯನ್ನು ನಿರಾಕರಿಸುತ್ತಾರೋ ಅವರು ನಾಚಿಕೆಗೇಡಿನ ಮಾರ್ಗವನ್ನು ಅವಲಂಬಿಸಿರುವರು. ಅವರು ದರಿದ್ರರನ್ನು ಮತ್ತು ದುಃಖಿತರನ್ನು ಸಹಾಯ ಮಾಡಲು ಉಪದೇಶಿಸುತ್ತಿದ್ದರು. ಬಡವರಿಗೆ ಮತ್ತು ನಿರ್ಗತಿಕರಿಗೆ ಆಹಾರ ನೀಡಲು ಆಜ್ಞಾಪಿಸುತ್ತಿದ್ದರು. ಅವರು ಅಲ್ಲಾಹನ ಸಾಮೀಪ್ಯ ಗಳಿಸಿದ ದಾಸರಲ್ಲಿ ಒಬ್ಬರಾಗಿದ್ದರು. ಅವರು ಪವಿತ್ರ ಖುರ್‌ಆನಿನ ಸೂಕ್ಷ್ಮವಾದ ಜ್ಞಾನದಲ್ಲಿ ವಿಸ್ಮಯಕರವಾದ ಪಾಂಡಿತ್ಯವನ್ನು ಪಡೆದಿದ್ದರು.

ದಿವ್ಯದರ್ಶನದಲ್ಲಿ ಹಝ್ರ್‌ರತ್ ಅಲಿ ರಝಿಯಲ್ಲಾಹು ಅನ್‌ಹುರೊಡನೆ ನನ್ನ ಭೇಟಿಯಾಯಿತು. ಎಂದರೆ ಎಚ್ಚರದಲ್ಲಿ ಇರುವಾಗಲೇ, ಕನಸಿನಲ್ಲಿ ಅಲ್ಲ. ಅದೇ ಸ್ಥಿತಿಯಲ್ಲಿ ನಾನು ಇರುವಾಗ ಹಝ್ರ್‌ರತ್ ಅಲಿ ರಝಿಯಲ್ಲಾಹು ಅನ್‌ಹು ನನಗೆ ಅದೃಶ್ಯ ಕಾರ್ಯಗಳನ್ನು ಅರಿಯುವ ಅಲ್ಲಾಹನ ಗ್ರಂಥವಾದ ಪವಿತ್ರ ಖುರ್‌ಆನಿನ ವ್ಯಾಖ್ಯಾನವನ್ನು ನೀಡಿದರು. ಅವರು ಹೇಳಿದರು, ಇದು ನನ್ನ ವ್ಯಾಖ್ಯಾನವಾಗಿದೆ, ಈಗ ನಾನು ಅದನ್ನು ನಿಮಗೆ ಕೊಡುತ್ತಿದ್ದೇನೆ. ಆದ್ದರಿಂದ ನಿಮಗೆ ಲಭಿಸಿದ ಕಾಣಿಕೆಯ ಕಾರಣ ನಿಮಗೆ ಶುಭಾಶಯಗಳನ್ನು ಅರ್ಪಿಸುತ್ತೇನೆ ಎಂದು ಅವರು ಹೇಳಿದರು. ಆಗ ನಾನು ನನ್ನ ಕೈಯನ್ನು ಚಾಚಿ ಆ ವ್ಯಾಖ್ಯಾನವನ್ನು ಪಡೆದೆ. ನಾನು ಸರ್ವಶಕ್ತನೂ ಕೃಪಾಳೂ ಆದ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಿದೆ. ಹಝ್ರ್‌ರತ್ ಅಲಿ ರಝಿಯಲ್ಲಾಹು ಅನ್‌ಹು ಉತ್ತಮ ಮೈಕಟ್ಟಿನ ವ್ಯಕ್ತಿಯಾಗಿದ್ದರು ಎಂದು ನಾನು ಕಂಡೆ. ಅವರು ಪರಿಪಕ್ವ ಮತ್ತು ದೃಢವಾದ ಸ್ವಭಾವವನ್ನು ಹೊಂದಿದ್ದರು. ನಾನು ಅವರನ್ನು ವಿನಯಾನ್ವಿತರೂ ತೇಜಸ್ವಿಯೂ ಮತ್ತು ಪ್ರಕಾಶಮಯಿಯೂ ಆಗಿ ಕಂಡೆನು. ಅಲ್ಲಾಹನಾಣೆ, ಅವರು ಬಹಳ ಪ್ರೀತಿ ಮತ್ತು ವಾತ್ಸಲ್ಯದಿಂದ ನನ್ನನ್ನು ಭೇಟಿಯಾದರು. ಅವರು ನನ್ನನ್ನು ಮತ್ತು ನನ್ನ ವಿಶ್ವಾಸಗಳನ್ನು ತಿಳಿದಿರುವವರು ಎಂದು ನನಗೆ ಅಲ್ಲಾಹನು ತಿಳಿಸಿಕೊಟ್ಟನು. ಶಿಯಾ ವಿಭಾಗದವರೊಡನೆ ನನಗೆ ಭಿನ್ನಾಭಿಪ್ರಾಯವಿರುವ ವಿಶ್ವಾಸ ಮತ್ತು ಆದರ್ಶಗಳು ಸಹ ಅವರಿಗೆ ಗೊತ್ತಿತ್ತು. ಆದರೆ ಅವರು ಆ ಕಾರಣದಿಂದ ಯಾವುದೇ ರೀತಿಯ ಅನಿಷ್ಟತೆ ಮತ್ತು ಅತೃಪ್ತಿಯನ್ನು ತೋರಿಸಲಿಲ್ಲ. ನನ್ನಿಂದ ಅವರು ತನ್ನ ಮುಖವನ್ನು ತಿರುಗಿಸಲಿಲ್ಲ. ಬದಲಿಗೆ ಅವರು ನಿಷ್ಠಾವಂತ ಪ್ರೇಮಿಯ ಹಾಗೆ ಬಹಳ ಪ್ರೀತಿಯಿಂದ ನನ್ನನ್ನು ಭೇಟಿಯಾದರು. ಅವರು ಪರಿಶುದ್ಧ ಹೃದಯ ಹೊಂದಿರುವ ಜನರ ಹಾಗೆ ತಮ್ಮ ಪ್ರೀತಿಯನ್ನು ವ್ಯಕ್ತಪಡಿಸಿದರು. ಅವರೊಂದಿಗೆ ಹಸನ್, ಹುಸೈನ್ ರಝಿಯಯಲ್ಲಾಹು ಅನ್‌ಹುಮ್ ಮತ್ತು ಪ್ರವಾದಿಗಳ

ನೇತಾರರಾದ ಖಾತಮುನ್ನಬಿಯ್ಯೀನ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಹ ಇದ್ದರು. ಅವರೊಂದಿಗೆ ಅತ್ಯಂತ ಸುಂದರಿಯಾದ, ಸುಶೀಲೆಯಾದ, ಆದರಣೀಯರಾದ, ಅನುಗ್ರಹೀತರಾದ, ಪರಿಶುದ್ಧರಾದ ಗೌರವಾನ್ವಿತರಾದ, ಸಭ್ಯರಾದ, ಅಂತರಂಗ ಮತ್ತು ಬಹಿರಂಗ ಪ್ರಕಾಶದಿಂದ ಕೂಡಿದ ಯುವತಿಯೂ ಇದ್ದರು. ಅವರು ಬಹಳ ದುಃಖದಿಂದ ಇರುವುದನ್ನು ನಾನು ಕಂಡೆ. ಆದರೆ ಅವರು ತನ್ನ ದುಃಖವನ್ನು ಅಡಗಿಸಿಟ್ಟಿದ್ದರು. ಅವರು ಫಾತಿಮತುಝ್ಝುಹ್ರಾ ರಝಿಯಲ್ಲಾಹು ಅನ್‌ಹಾ ಆಗಿರುವರು ಎಂದು ನನಗೆ ತಿಳಿಸಲಾಯಿತು. ಅವರು ನನ್ನ ಬಳಿ ಬಂದರು. ನಾನು ಮಲಗಿದ್ದೆ. ಅವರು ನನ್ನ ಸಮೀಪ ಕುಳಿತುಕೊಂಡರು. ಅವರು ನನ್ನ ತಲೆಯನ್ನು ತನ್ನ ಮಡಿಯಲ್ಲಿ ಇರಿಸಿದರು. ನನ್ನೊಡನೆ ವಾತ್ಸಲ್ಯದಿಂದ ವರ್ತಿಸಿದರು. ಅವರು ನನ್ನ ಯಾವುದೋ ದುಃಖದ ಕಾರಣದಿಂದ ದುಃಖಿತರಾಗಿದ್ದರು ಎಂದು ನನಗೆ ಗೊತ್ತಾಯಿತು. ಮಕ್ಕಳ ವೇದನೆಯ ಸಮಯದಲ್ಲಿ ವಾತ್ಸಲ್ಯ, ಕರುಣೆ ಮತ್ತು ಅಸ್ವಸ್ಥತೆ ತೋರಿಸುವ ತಾಯಂದಿರ ಹಾಗೆ ಅವರು ಚಿಂತಿರಾಗಿದ್ದರು.'

ಈ ಉಲ್ಲೇಖದ ಬಗ್ಗೆ ಕೆಲವು ಅಹ್ಮದಿಯೇತರು ಆಕ್ಷೇಪಿಸುತ್ತಿರುತ್ತಾರೆ. ಮಡಿಯಲ್ಲಿ ಇರಿಸಿದರು ಎಂದು ಎಷ್ಟು ತಪ್ಪಾಗಿ ಹೇಳಿದ್ದಾರೆ ಎಂದು ಹೇಳುತ್ತಾರೆ. ಆದರೆ ಇಲ್ಲಿ ತಾಯಿಯ ವಾತ್ಸಲ್ಯದ ಉದಾಹರಣೆಯನ್ನು ನೀಡಲಾಗಿದೆ. ಅವರ ಸ್ವಭಾವ ವೈಶಿಷ್ಟ್ಯಗಳ ಬಗ್ಗೆ ಹಝ್ರತ್ ಮಸೀಹ್ ಮೌಊದ್(ಅ) ಬರೆದ ಮೇಲಿನ ಎಲ್ಲ ಸಂಗತಿಯನ್ನು ಗಮನವಿಟ್ಟು ಓದಿದರೆ ಎಲ್ಲ ಆಕ್ಷೇಪ ದೂರವಾಗುತ್ತವೆ. ಆದರೆ ಕೊಳಕು ಮನಸ್ಸಿನ ಒಳಗೆ ಇಂತಹ ಆಕ್ಷೇಪ ಉಂಟಾಗುತ್ತವೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಧರ್ಮದ ವಿಷಯದಲ್ಲಿ ಹಝ್ರತ್ ಫಾತಿಮಾರೊಡನೆ ನನ್ನ ಸಂಬಂಧ ಪುತ್ರನಂತೆ ಆಗಿದೆ ಎಂದು ನನಗೆ ತಿಳಿಸಲಾಯಿತು. ನಾನು ನನ್ನ ಸಮುದಾಯದವರ, ದೇಶವಾಸಿಯರ ಮತ್ತು ಶತ್ರುಗಳ ಹಿಂಸೆಯನ್ನು ಅನುಭವಿಸಬೇಕಾಗಿ ಬರುವುದು ಎಂಬುದರಿಂದ ಅವರು ದುಃಖಿತರಾಗಿದ್ದರು ಎಂದು ನನಗೆ ಗೊತ್ತಾಯಿತು. ನನ್ನ ಮಗನಿಗೆ ಈ ಎಲ್ಲ ದೌರ್ಜನ್ಯಗಳನ್ನು ನೋಡಬೇಕಾಗಿ ಬರುವುದು ಎಂಬುದರ ಬಗ್ಗೆ ಚಿಂತಿಸಿ ಹಝ್ರತ್ ಫಾತಿಮಾ ರಝಿಯಲ್ಲಹು ಅನ್‌ಹಾ ದುಃಖಿತರಾಗಿದ್ದರು. ಅನಂತರ ಹಸನ್ ಮತ್ತು ಹುಸೈನ್ ಇಬ್ಬರೂ ನನ್ನ ಸಮೀಪ ಬಂದರು. ಸಹೋದರರ ಹಾಗೆ ನನ್ನೊಡನೆ ತಮ್ಮ ಪ್ರೀತಿಯನ್ನು ವ್ಯಕ್ತಪಡಿಸುತ್ತಿದ್ದರು. ಸಹಾನುಭೂತಿಯಿಂದ ನನ್ನೊಡನೆ ಭೇಟಿಯಾದರು. ಇದು ನಾನು ಎಚ್ಚರದಲ್ಲಿರುವಾಗಲೇ ಕಂಡ ಒಂದು ದಿವ್ಯದರ್ಶನವಾಗಿತ್ತು. ಇದನ್ನು ನಾನು ಕಂಡು ಬಹಳ ವರ್ಷಗಳು ಕಳೆದುಹೋಗಿವೆ. ನನಗೆ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಮತ್ತು ಹಝ್ರತ್ ಹುಸೈನ್ ರಝಿಯಲ್ಲಾಹು ಅನ್‌ಹುರೊಡನೆ ಒಂದು ಸೂಕ್ಷ್ಮವಾದ ಸಾಮ್ಯತೆಯಿದೆ. ಈ ಹೋಲಿಕೆಯ ನೈಜತೆಯನ್ನು ಪೂರ್ವ ಪಶ್ಚಿಮಗಳ ಪ್ರಭುವಾದ ಅಲ್ಲಾಹನಲ್ಲದೆ ಬೇರೆ ಯಾರೂ ತಿಳಿಯದು. ನಾನು ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಮತ್ತು ಅವರ ಇಬ್ಬರು ಮಕ್ಕಳನ್ನು ಪ್ರೀತಿಸುತ್ತೇನೆ. ಅವರನ್ನು ಶತ್ರುಗಳಾಗಿ ಕಾಣುವವರನ್ನು ನಾನು ನನ್ನ ಶತ್ರುಗಳಾಗಿ ಕಾಣುತ್ತೇನೆ. ಆದರೆ ನಾನು ಕಠಿಣವಾಗಿ ವರ್ತಿಸುವವನಲ್ಲ. ಅಲ್ಲಾಹನು ನನಗೆ ತೋರಿಸಿಕೊಟ್ಟ ಸಂಗತಿಗಳಿಂದ ಮುಖ ತಿರುಗಿಸಲು ನನಗೆ ಸಾಧ್ಯವಲ್ಲ. ನಾನು ಅತಿರೇಕದಿಂದ ವರ್ತಿಸುವವನೂ ಅಲ್ಲ. ನೀವು ಅಂಗೀಕರಿಸದಿದ್ದರೆ ನನ್ನ ಕರ್ಮ ನನಗೆ ನಿಮ್ಮ ಕರ್ಮ ನಿಮಗೆ. ಅಲ್ಲಾಹನು ನಮ್ಮ ನಡುವೆ ಖಂಡಿತ ತೀರ್ಮಾನ ಮಾಡುವನು. ತೀರ್ಮಾನ ಮಾಡುವವರಲ್ಲಿ ಅಲ್ಲಾಹನು ಅತ್ಯಂತ ಉತ್ತಮನಾಗಿದ್ದಾನೆ.

ಇದರೊಂದಿಗೆ ಹಝ್ರತ್ ಅಲಿಯ(ರ) ಪ್ರಸ್ತಾಪ ಮುಕ್ತಯವಾಯಿತು. ಈಗ ನಾನೊಂದು ಘೋಷಣೆಯನ್ನು ಮಾಡಲು ಹೋಗುತ್ತಿರುವೆನು. ನಮಾಝಿನ ನಂತರ ನಾನೊಂದು ಹೊಸ ಟಿ.ವಿ. ಚಾನೆಲನ್ನು ಲಾಂಚ್ ಮಾಡುವೆನು. **ಇನ್‌ಶಾ ಅಲ್ಲಾಹ್**. ಅದು ಎಂ.ಟಿ.ಎ. ಗಾನದ ಹೆಸರಲ್ಲಿ ಇಪ್ಪತ್ತಾನಾಲ್ಕು ಘಂಟೆಗಳ ಬ್ರಾಡ್‌ಕಾಸ್ಟ್ ಆಗಿರುವುದು. ಗಾನದ ಅಮೀರ್ ಮತ್ತು ಮಿಶನರಿ ಇಂಚಾರ್ಜ್ ಆಗಿದ್ದ ಅಬ್ದುಲ್‌ವಹ್ಹಾಬ್ ಆದಂ ಸಾಹಿಬ್‌ರ ಹೆಸರಲ್ಲಿ 2007ರಲ್ಲಿ ಗಾನದಲ್ಲಿ ವಹಾಬ್ ಸ್ಟುಡಿಯೋ ಸ್ಥಾಪಿಸಲಾಗಿತ್ತು. ಎಂ.ಟಿ.ಎ. ಆಫ್ರಿಕದ ಈಗಿನ ಪ್ರೋಗ್ರಾಮ್‌ಗಳಲ್ಲಿ ಶೇಕಡ 60 ಪ್ರತಿಶತ ಭಾಗ ಈ ಸ್ಟುಡಿಯೋದಿಂದಲೇ ತಯಾರಾಗುತ್ತಿದೆ. ಸ್ಟುಡಿಯೋದಲ್ಲಿ ಎಪ್ಪತ್ತು ಫುಲ್‌ಟೈಮ್ ಸೇವಕರು ಇದ್ದಾರೆ. 60ಕ್ಕಿಂತ ಹೆಚ್ಚು ಸ್ವಯಂಸೇವಕರೂ ಇದ್ದಾರೆ. ಅವರು ವಿವಿಧ ವಿಭಾಗಗಳಲ್ಲಿ ಪರಿಣತರಾಗಿರುವರು. ವಹಾಬ್ ಸ್ಟುಡಿಯೋ ಗಾನದ ನವೀನ ಸ್ಟುಡಿಯೋಗಳಲ್ಲಿ ಒಂದಾಗಿದೆ. ಇದರಲ್ಲಿ ಹಲವು ಅತ್ಯುತ್ತಮ ಸೌಲಭ್ಯಗಳಿವೆ. ವಿವಿಧ ಮೀಡಿಯದವರು ಮತ್ತು ಬ್ರಾಡ್‌ಕಾಸ್ಟಿನವರು ಟ್ರೈನಿಂಗಿಗಾಗಿ ತಮ್ಮ ಕೆಲಸಗಾರರನ್ನು ಈ ಸ್ಟುಡಿಯೊಕ್ಕೆ ಕಳುಹಿಸುತ್ತಾರೆ. ಸ್ಟುಡಿಯೋ ಹಲವಾರು ನೇರಪ್ರಸಾರ ಕಾರ್ಯಕ್ರಮಗಳನ್ನು ಪ್ರಸಾರ ಮಾಡಿದೆ. ಅದರಲ್ಲಿ ಆಫ್ರಿಕದ ಮೊದಲ ಪವಿತ್ರ ಖುರ್‌ಆನಿನ ತಿಲಾವತಿನ ಸ್ಪರ್ಧೆ ಮತ್ತು ರಮಝಾನಿನ ಕಾರ್ಯಕ್ರಮಗಳು ಸೇರಿವೆ. ಈಗ ಇದು ಎಂ.ಟಿ.ಎ.ಗಾನದ ಹೆಸರಲ್ಲಿ ಈಗ ಹೊಸ ಚಾನೆಲ್ ಲಾಂಚ್ ಮಾಡಲಾಗುತ್ತಿದೆ. ಇದು ಗಾನದಲ್ಲಿ ಡಿಜಿಟಲ್ ಪ್ಲಾಟ್‌ಫಾರ್ಮಿನಲ್ಲಿ 24ಗಂಟೆ ಪ್ರಸಾರವಾಗಲಿರುವ ದೇಶದ ಹೊಸ ಟಿ.ವಿ. ಚಾನೆಲ್ ಆಗಿರುವುದು. ಅದನ್ನು ಸ್ಯಾಟ್‌ಲೈಟ್ ಡಿಶ್ ಇಲ್ಲದೇ ಸಾಧಾರಣವಾದ ಏರಿಯಲ್ ಮೂಲಕ ಸಹ ನೋಡಬಹುದಾಗಿದೆ. ಎಂದರೆ ಗಾನದ ಜನರು ಸುಲಭವಾಗಿ ಸಾಮಾನ್ಯ ಏಂಟೇನ ಮೂಲಕ ಇದನ್ನು ನೋಡಬಹುದಾಗಿದೆ. ಗಾನದ ದೊಡ್ಡ ದೊಡ್ಡ ಇತರ ಚಾನೆಲ್‌ಗಳು ಇರುವ ಅದೇ ಲೋಕೆಶನಿನಲ್ಲಿ ಇದು ಲಭ್ಯವಾಗುವುದು. ಈ ರೀತಿಯಲ್ಲಿ ದೇಶದ ಎಲ್ಲಡೆ ಲಕ್ಷಾಂತರ ಮನೆಗಳಿಗೆ ಇದು ತಲುಪುವುದು. ಸೌತಿನಿಂದ ನೋರ್ಥ್ ವರೆಗಿನ ಪ್ರದೇಶವನ್ನು ಇದು ಕವರ್ ಮಾಡುವುದು. ಇನ್‌ಶಾ ಅಲ್ಲಾಹ್. ಗಾನದ ಹಲವು ಭಾಷೆಗಳಲ್ಲಿ ಸಹ ವಹಾಬ್ ಸ್ಟುಡಿಯೋದಿಂದ ಪ್ರೋಗ್ರಾಮ್ ತಯಾರು ಮಾಡಲಾಗುವುವು. ಅದರಲ್ಲಿ ಇಂಗ್ಲಿಷ್, ಚೂಇಗಾಹೌಸ ಮತ್ತು ಇತರ ಭಾಷೆಗಳು ಇವೆ. ಚಾನೆಲಿನ ಟ್ರಾನ್ಸ್‌ಮಿಶನ್ ಮತ್ತು ಶೆಡ್ಯೂಲಿಂಗಿನ ಕೆಲಸ ಅಲ್ಲಿಯ ಲಜ್ನದ ಸ್ವಯಂ ಸೇವಕರ ಮತ್ತು ಇತರ ಟೀಮ್ ತಯಾರು ಮಾಡುವುದು. ನೈತಿಕ, ಶೈಕ್ಷಣಿಕ ಮತ್ತು ತರಬೇತಿ ಕಾರ್ಯಕ್ರಮಗಳು ಮಾಡಲಾಗುವುವು. ಇದರ ಮೂಲಕ ಇಸ್ಲಾಮಿನ ಸರಿಯಾದ ಮತ್ತು ಸುಂದರವಾದ ಅಧ್ಯಾಪನೆಗಳು ಸಂಪೂರ್ಣವಾಗಿ ಅರ್ಪಿತವಾದ ಚಾನೆಲ್ ಆಗಿರುವುದು. ಇನ್‌ಶಾ ಅಲ್ಲಾಹ್. ಒಂದು ಕಡೆ ನಮ್ಮ ವಿರೋಧಿಗಳು ಮಾರ್ಗಗಳನ್ನು ಮುಚ್ಚಲು ಪ್ರಯತ್ನಿಸುತ್ತಾರೆ. ಇನ್ನೊಂದು ಕಡೆ ಅಲ್ಲಾಹನು ಹಲವಾರು ಮಾರ್ಗಗಳನ್ನು ತೆರೆಯುತ್ತಾನೆ. ಇದು ಜಮಾಅತಿನ ಮೇಲೆ ಅಲ್ಲಾಹನ ಅನುಗ್ರಹವಾಗಿದೆ. ಇನ್‌ಶಾ ಅಲ್ಲಾಹ್. ಅದರ ಸಮಯದಲ್ಲಿ ಮುಚ್ಚಲ್ಪಟ್ಟ ಮಾರ್ಗಗಳು ಸಹ ತೆರೆಯಲ್ಪಡುವುವು. ಆದರೆ ಅಲ್ಲಾಹನು ಸಂತೋಷದ ಸಂಗತಿಗಳನ್ನು ಅದರೊಂದಿಗೆ ನೀಡುತ್ತಿದ್ದಾನೆ. ಹೇಗಿದ್ದರೂ ಈ ಚಾನೆಲ್ ಈ ದೇಶವನ್ನು ಕವರ್ ಮಾಡುವುದು. ಬಹುಶಃ ನೆರೆಕರೆಯ ದೇಶಗಳ ಕೆಲವು ಪ್ರದೇಶಗಳನ್ನು ಸಹ ಕವರ್ ಮಾಡುವುದು. ಇನ್‌ಶಾ ಅಲ್ಲಾಹ್ ಜುಮಾ ನಮಾಝಿನ ನಂತರ ಅದರ ಉದ್ಘಾಟನೆ ಮಾಡುವೆನು. **ಇನ್‌ಶಾ ಅಲ್ಲಾಹ್**.

****************

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಮೂನ್ನೂರರಿಂದ ಏಳೇಳು ನೂರರಷ್ಟು ಪತ್ನಿಯರನ್ನು ಹೊಂದಿದ್ದರು. ಅವರು ವಂಚಕರು ಅಥವಾ ಧಿಕ್ಕಾರಿಗಳಾಗಿದ್ದರು ಎಂದರೆ ಅವರಿಗೆ ಉತ್ತರ ಕೊಡುವುದು ಕಷ್ಟವಾಗುವುದು. ಅವರ ವಾಣಿಗಳು ದೇವವಾಣಿಗಳಾಗಲು ಹೇಗೆ ಸಾಧ್ಯ?

ಅದೇ ರೀತಿ ಇತರ ಸಮಸ್ಯೆಗಳಾದ ಗುಲಾಮ ಪದ್ಧತಿ ಮತ್ತು ಜಿಹಾದಿನ ಮೇಲೂ ಅವರ ಆಕ್ಷೇಪಗಳು ಸರಿಯಲ್ಲ. ಏಕೆಂದರೆ ತೌರಾತಿನಲ್ಲಿ ಯುದ್ಧಗಳ ಒಂದು ದೀರ್ಘ ಅವಧಿಯೇ ಕಳೆಯುತ್ತದೆ, ಇಸ್ಲಾಮಿನ ಯುದ್ಧಗಳಂತೂ ರಕ್ಷಣಾತ್ಮಕವಾಗಿದ್ದವು. ಮತ್ತು ಅದು ಹತ್ತು ವರ್ಷದೊಳಗೆ ಅಂತ್ಯವಾದವು. ನಾನು ದಾವೆಯಿಂದ ಹೇಳುವೆನು. ಈ ಸಮಸ್ಯೆಗಳನ್ನು ಅವರ ಗ್ರಂಥಗಳಿಂದ ಎತ್ತಿ ತೋರಿಸುವೆನು. ಅಂತೆಯೇ ನನ್ನ ದಾವೆಯ ಎಲ್ಲ ಸತ್ಯತೆಗಳು ಪವಿತ್ರ ಖುರ್‌ಆನ್ ಒಳಗೊಂಡಿದೆ. ಯಾರಾದರೂ ಇಂತಹ ದಾವೆದಾರನು ಇಂತಹ ಸತ್ಯ ಸಾಕ್ಷ್ಯಗಳನ್ನು ಪ್ರಸ್ತುತಪಡಿಸಿದರೆ ಅದು ಖುರ್‌ಆನ್‌ನಲ್ಲಿ ಇಲ್ಲ ಎಂದು, ನಾನು ಅವನಿಗೆ ತೋರಿಸಲು ಸಿದ್ಧನಿದ್ದೇನೆ. ಇಸ್ಲಾಮಿ ಶರೀಅತ್ (ಧರ್ಮ ಸಂಹಿತೆ) ಸಹಜ ಹಾಗೂ ಪ್ರಾಕೃತಿಕ ರೀತಿಯಲ್ಲಿ ಮನುಷ್ಯರಿಗೆ ಬೇಕಾದ ಗುಣಗಳನ್ನು ತೆಗೆದುಕೊಂಡಿದೆ. ಅದು ಎಲ್ಲ ನಿಟ್ಟಿನಲ್ಲೂ ಅವನ ಗುಣಗಳ ಬೆಳವಣಿಗೆಗೆ ಕಾರಣವಾಗುವುದು. ಅದರ ಮೇಲೆ ಆಕ್ಷೇಪವೆತ್ತಲು ಸಾಧ್ಯವಿಲ್ಲ. ಹೌದು! ಇಸ್ಲಾಮ್ ಧರ್ಮ ಅನ್ಯ ಧರ್ಮಗಳ ಮೇಲೆ ಮಾಡುವಂತ ಆರೋಪಗಳ ಉತ್ತರ ಅವರಿಂದ ಸಾಧ್ಯವಿಲ್ಲ. (ಮಲ್ಫೂಝಾತ್ ಸಂಪುಟ 1, ಪುಟ 250, ಮುದ್ರಣ ಖಾದಿಯಾನ್ 2018).

## ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:**

"ಎಲ್ಲ ಪ್ರವಾದಿಗಳಲ್ಲಿ ಅತ್ಯಂತ ಪರಿಪೂರ್ಣ ಉಪದೇಶಗಳನ್ನು ನೀಡಿದವರು, ಅತ್ಯುನ್ನತ ಮಟ್ಟದ ಪರಿಶುದ್ಧತೆ ಹಾಗು ಜಾಣ್ಮೆಯಿಂದ ಕೂಡಿದ ಉಪದೇಶ ನೀಡಿದವರು ಮತ್ತು ಅತ್ಯುತ್ತಮ ಮಾನವೀಯ ಗುಣಗಳನ್ನು ತನ್ನ ಜೀವಿತದಲ್ಲಿ ಅಳವಡಿಸಿ ಲೋಕಕ್ಕೆ ಅತ್ಯುತ್ತಮ ಮಾದರಿಯಾಗಿ ತೋರಿಸಿಕೊಟ್ಟವರು ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್ರತ್ ಮುಹಮ್ಮದ್(ಸ) ಆಗಿರುವರು ಎಂದು ನನಗೆ ಮನವರಿಕೆ ಮಾಡಿಕೊಡಲಾಗಿದೆ." ***(ಅರ್‌ಬಈನ್ ನಂ. 1; ರೂಹಾನೀ ಖಝಾಇನ್ ಸಂಪುಟ 17, ಪುಟ 345)***

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಕಾರಣವೆಂದರೆ, ಮನುಷ್ಯನ ಕರ್ಮಗಳು ಎರಡು ವಿಧವಾಗಿರುತ್ತವೆ. ಒಂದು ಅವರ ಸ್ವಯಂ ಸತ್ಕರ್ಮ. ಇನ್ನೊಂದು ಆ ಸತ್ಕರ್ಮಗಳಲ್ಲಿ ಸ್ಥಿರತೆ ಸಾಧಿಸುವುದು. ಅಂದ ಹಾಗೆ ಈ ವಾಕ್ಯ ಹೆಚ್ಚಿಸಲು ಇನ್ನೊಂದು ಅರ್ಥ ಹೀಗೂ ಇದೆ. ನಿಮ್ಮ ವೈಯಕ್ತಿಕ ಸತ್ಕರ್ಮಗಳ ಕಾರಣಗಳಿಂದಾಗಿ ನಾವು ನಿಮ್ಮನ್ನು "ಖಿಲಾಫತ್ ಫಿಲ್‌ಅರ್ಝ್" ಮಾಡಿದ್ದೇವೆ. ಅದಾದ ನಂತರ ನೋಡಬಯಸಿದ್ದೇನೆಂದರೆ ನೀವು ಆ ಸತ್ಕರ್ಮಗಳಲ್ಲಿ ಹೇಗೆ ಸ್ಥಿರತೆ ಸಾಧಿಸುವಿರಿ. ನಿಜ ಹೇಳಬೇಕೆಂದರೆ ಸತ್ಕರ್ಮ ಮಾಡುವುದಕ್ಕಿಂತಲೂ ಹೆಚ್ಚು ಕಷ್ಟದ ಕೆಲಸವೇನೆಂದರೆ ಸತ್ಕರ್ಮಗಳಲ್ಲಿ, ಸ್ಥಿರತೆ ಸಾಧಿಸುವುದಾಗಿದೆ. ಸಮುದಾಯಗಳು ನಾಶ ಹೊಂದಲು ಕಾರಣವೇನೆಂದರೆ ಅವು ಪ್ರಗತಿಗೋಸ್ಕರ ಪ್ರಯತ್ನಗಳಂತೂ ಮಾಡುತ್ತಿರುತ್ತವೆ. ಆದರೆ ಅದನ್ನು ಖಾಯಂಗೊಳಿಸಲು ಪ್ರಯತ್ನಿಸುವುದಿಲ್ಲ. ತನ್ನ ಭಯಭಕ್ತಿಯ ಗಮನವಿರುತ್ತದೆ. ಆದರೆ ಸಂತಾನದ ರೀತಿ ನೀತಿಯ ಕಡೆ ಪೂರ್ಣ ಲಕ್ಷ್ಯ ವಹಿಸುವುದಿಲ್ಲ. ಪರಿಣಾಮವಾಗಿ ಸತ್ಕರ್ಮಗಳ ಮಟ್ಟ ಕ್ಷೀಣಿಸತೊಡಗುತ್ತದೆ. ಕೊನೆಗೆ ಶಬ್ದಗಳು ಉಳಿಯುತ್ತವೆ. ವಾಸ್ತವ ಮಾಯವಾಗಿ ಬಿಡುತ್ತದೆ. ಅಂದ ಹಾಗೆ ಈ ಬದಲಾವಣೆ ಎಷ್ಟೋ ಪೀಳಿಗೆ ನಂತರ ಬಂದಿರುತ್ತದೆ. ಅಂತಿಮವಾಗಿ ಸಮುದಾಯಗಳು ನಾಶಕ್ಕೆ ಗುರಿಯಾಗುತ್ತವೆ. ಆದುದರಿಂದ ಈ ವಾಕ್ಯದಲ್ಲಿ ಆ ಕಡೆ ಗಮನ ಸೆಳೆಯಲಾಗಿದೆ. ಇದೀಗ ನಾವು ನೋಡುವೆವು. ನೀವು ತಮ್ಮ ಖಿಲಾಫತನ್ನು ಎಷ್ಟು ಸಮಯದವರೆಗೆ ಖಾಯಂ ಉಳಿಸುವಿರಿ ಎಂದು.

ಮುಸಲ್ಮಾನರು ಈ ಅದ್ವಿತೀಯ ತತ್ವವನ್ನು ಪಾಲಿಸುವವರಾಗುತ್ತಿದ್ದರೆ ಇಂದು ಈ ಪರಿಸ್ಥಿತಿ ಬರುತ್ತಿರಲಿಲ್ಲ. ಅವರು ಒಂದು ಸಮಯಕ್ಕೆ ತನ್ನ ಸಂತಾನದ ತರಬೇತಿ ಕಾರ್ಯಗಳಲ್ಲಿ ನಿರ್ಲಕ್ಷ್ಯ ಮಾಡಿದರು. ಅವರ ಧರ್ಮರಹಿತ ಪ್ರೇಮ ಅವರ ಮೇಲೆ ಹಿಡಿತ ಸಾಧಿಸಿತು. ಅವರು ವಿವಾಹ ವಿಷಯದಲ್ಲಿ ಜಾಗ್ರತೆ ವಹಿಸಲಿಲ್ಲ. ಅವರು ತಮ್ಮ ಮನೆಗಳಲ್ಲಿ ಇಸ್ಲಾಮಿ ಆಚಾರಕ್ಕೆ ಹೊಂದದಂತಹ ಸ್ತ್ರೀಯರನ್ನು ಬರಮಾಡಿಕೊಂಡರು. ಅದರ ಪರಿಣಾಮವಾಗಿ ರಸೂಲುಲ್ಲಾಹ್(ಸ) ಅವರ ಸಹಾಬರುಗಳು ನಿರ್ಮಿಸಿದಂತಹ ಆ ಭವ್ಯವಾದ ಕಟ್ಟಡವು ತಮ್ಮ ಕೈಗಳಿಂದಲೇ ಬಿದ್ದು ಹೋಗುವಂತೆ ಮಾಡಿದರು. 'ಇನ್ನ ಲಿಲ್ಲಾಹಿ ವ ಇನ್ನ ಇಲೈಹಿ ರಾಜಿಊನ್'. ಮುಂದೆಯು ಸಹ ಅಲ್ಲಾಹನು ಆ ಸಮುದಾಯವನ್ನು ಇಸ್ಲಾಮಿನ ಪ್ರಗತಿಗೋಸ್ಕರ ಆಯ್ಕೆ ಮಾಡಿಕೊಂಡರೆ ಆ ಸಮಯದಲ್ಲಿ ಈ ಸಂಗತಿಯನ್ನು ಗಮನದಲ್ಲಿಟ್ಟುಕೊಂಡರೆ 'ಇನ್ ಶಾ ಅಲ್ಲಾಹ್' ಲೋಕದಲ್ಲಿ ಒಂದು ಅಸಾಮಾನ್ಯ ಕ್ರಾಂತಿ ಉಂಟಾಗಬಹುದಾಗಿದೆ. ರಸೂಲುಲ್ಲಾಹ್(ಸ) ಈ ಕರ್ತವ್ಯದ ಕಡೆ ಹೀಗೆ ಗಮನ ಸೆಳೆದಿರುವರು. 'ಕುಲ್ಲುಕುಂ ರಾಯಿನ್' ಅಂದರೆ ನಿಮ್ಮಲ್ಲಿಯ ಪ್ರತಿಯೊಬ್ಬ ವ್ಯಕ್ತಿಯು ತನ್ನ ವೈಯಕ್ತಿಕ ಜವಾಬ್ದಾರಿ ಅಲ್ಲದೇ ಇತರರ ಬಗ್ಗೆಯೂ ಜವಾಬ್ದಾರನಾಗಿದ್ದಾನೆ. ಅಲ್ಲಾಹನು ಕೇವಲ ನಿಮ್ಮ ಸತ್ಕರ್ಮಗಳ ಬಗ್ಗೆ ಅಷ್ಟೇ ಕೇಳುವುದಿಲ್ಲ. ಬದಲು ಯಾರ ಜವಾಬ್ದಾರಿ ನಿಮ್ಮ ಮೇಲಿತ್ತು. ಆ ಪೈಕಿ ಎಷ್ಟು ಜವಾಬ್ದಾರಿಯನ್ನು ನಿಭಾಯಿಸಿದ್ದೀರಿ ಎಂದು ಕೇಳುವನು. ಆದುದರಿಂದ ಕೇವಲ ತನ್ನ ಆತ್ಮಶುದ್ಧಿ ಮನುಷ್ಯನಿಗೆ ಸಾಕಾರವಾಗದು. **(ತಫ್ಸೀರ್ ಕಬೀರ್ ಸಂಪುಟ 3 ಪುಟ 41–42, ಮುದ್ರಣ ಖಾದಿಯಾನ್ 2010)**.

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಅವಮಾನವಾಗುವ ರೀತಿಯಲ್ಲಿ ಶಿಕ್ಷೆ ಅವತರಿಸಲಿ. ಅಂತೆಯೇ ಈ ವಿನೀತನು ಸಹ ದುಆ ಮಾಡುವನು. ಓ ಪರಿಪೂರ್ಣ ಮತ್ತು ಪ್ರತಾಪವುಳ್ಳ ದೇವನೇ ನಾನು ಅರಿತಿದ್ದೇನೆ. ವಾಸ್ತವದಲ್ಲಿ ಈಸಾಮಸೀಹ್ ನಾಸರಿ ನಿನ್ನ ದಾಸನು ಮತ್ತು ನಿನ್ನ ಸಂದೇಶವಾಹಕನಾಗಿದ್ದಾನೆ ಹೊರತು ಖಂಡಿತವಾಗಿಯೂ ದೇವನಲ್ಲ. ಅಂತೆಯೇ ಪವಿತ್ರ ಖುರ್‌ಆನ್ ನಿನ್ನ ಪವಿತ್ರ ಗ್ರಂಥವಾಗಿದೆ ಮತ್ತು ಮುಹಮ್ಮದ್ ಮುಸ್ತಫಾ(ಸ) ನಿನ್ನ ಪ್ರೀತಿಯ ಮತ್ತು ಪವಿತ್ರ ಪ್ರವಾದಿಯಾಗಿರುವರು. ಈ ಮಾತಿನಲ್ಲಿ ನಾನು ಸತ್ಯವಂತನಲ್ಲ ಎಂದಾದರೆ ನನ್ನ ಮೇಲೆ ಒಂದು ವರ್ಷದೊಳಗೆ ನನ್ನ ಅವಮಾನವಾಗುವ ರೀತಿಯಲ್ಲಿ ಶಿಕ್ಷೆ ಅವತರಿಸಲಿ. ಓ ಪ್ರಭೂ ನನ್ನ ಅವಮಾನಕ್ಕೆ ಈ ಮಾತೇ ಸಾಕಾಗಬಹುದು. ಒಂದು ವರ್ಷದೊಳಗೆ ನನ್ನ ವಿರೋಧಿಗಳು ನನ್ನ ಪರವಾಗಿ ಅವತರಿಸಿದಂತ ದೃಷ್ಟಾಂತ ಜಾಹಿರು ಪಡಿಸುವುದರಲ್ಲಿ ವಿವಶರಾಗುವರು. (ಅದೇ ಪುಟ 69).

ಹಝ್ರತ್ ಮಸೀಹ್ ಮೌಊದ್(ಅ) ಅವರು ಮತ್ತೆ ಮತ್ತೆ ಆಧ್ಯಾತ್ಮಿಕ ಸ್ಪರ್ಧೆಯ ಮೇಲೆ ಒತ್ತು ನೀಡಿದಾಗ ಮತ್ತು ಈ ಕಡೆ ಹೆಚ್ಚು ಒಲವು ತೋರಿದಾಗ ಪಾದರಿ ಅಬ್ದುಲ್ಲ ಆಥಂ ಗಾಬರಿಯಾದರು. ಮತ್ತು ಮುಂಚಿತವಾಗಿಯೇ ತನ್ನ ಸೋಲು ಒಪ್ಪಿಕೊಂಡರು. ಅವರು ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ರವರಿಗೆ ಒಂದು ಕಾಗದ ಕಳುಹಿಸಿದರು. ಅದರಲ್ಲಿ ಬರೆಯಲಾಗಿತ್ತು. ನಮಗೆ ಪವಾಡ ತೋರಿಸುವ ಅವಶ್ಯಕತೆಯೂ ಇಲ್ಲ. ನಮ್ಮೊಳಗೆ ಪವಾಡ ತೋರಿಸುವ ಶಕ್ತಿಯೂ ಇಲ್ಲ. ಮತ್ತೆ ಬರೆದರು. ಸಾಹೇಬರು ಯಾವುದಾದರೂ ಪವಾಡ ತೋರಿಸಲು ಸಿದ್ಧರಿದ್ದರೆ. ನಾವು ಅದನ್ನು ನೋಡದೇ ಕಣ್ಣೇನು ಮುಚ್ಚಿಕೊಳ್ಳುವುದಿಲ್ಲ. ಎಷ್ಟು ಸಾಧ್ಯವೋ ಅಷ್ಟು ತಮ್ಮ ತಪ್ಪಿನ ಸುಧಾರಣೆಯನ್ನು ನಿಮ್ಮ ಪವಾಡದಿಂದ ಮಾಡಿಕೊಳ್ಳಬಹುದೋ ಅದನ್ನು ತನ್ನ ಕರ್ತವ್ಯವೆಂದು ಭಾವಿಸುವೆವು. ಅದಕ್ಕೆ ಉತ್ತರವಾಗಿ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು. ನಿಸ್ಸಂಶಯವಾಗಿಯೂ ನಿಮ್ಮ ಈ ಹೇಳಿಕೆ ನ್ಯಾಯಯುತವಾಗಿದೆ. ನ್ಯಾಯ ಪ್ರಿಯನ ಹೊರತು ಯಾರಿಂದಲೂ ಇಂತಹ ಮಾತು ಹೊರಡಲು ಸಾಧ್ಯವಿಲ್ಲ. ಆದರೆ ಇಲ್ಲಿ ನಿಮ್ಮ ಈ ಮಾತು. 'ಎಷ್ಟು ಸಾಧ್ಯವೋ ಅಷ್ಟು ತಮ್ಮ ತಪ್ಪಿನ ಸುಧಾರಣೆ ನಿಮ್ಮ ಪವಾಡದಿಂದಾಗಿ ಮಾಡಲು ಸಾಧ್ಯವೋ ಅದನ್ನು ಮಾಡುವುದು ತನ್ನ ಕರ್ತವ್ಯವೆಂದು ಭಾವಿಸುವೆವು.' ವ್ಯಾಖ್ಯಾನವನ್ನು ಬಯಸುತ್ತದೆ. ಈ ವಿನೀತನು ಕೇವಲ ಈ ಸಂದೇಶ ಕಳುಹಿಸಿದ ಉದ್ದೇಶವೆಂದರೆ, ಈ ಸಂದೇಶ ಅಲ್ಲಾಹನ ದಾಸರಲ್ಲಿಗೆ ತಲುಪಬೇಕು. ಲೋಕದಲ್ಲಿರುವ ಎಲ್ಲಾ ಪ್ರಸಕ್ತ ಧರ್ಮಗಳಲ್ಲಿ ಆ ಧರ್ಮ ಸತ್ಯ ಮೇಲಿದೆ. ಮತ್ತು ಅಲ್ಲಾಹನು ಬಯಸಿದಂತಿದೆ. ಅದು ಖುರ್‌ಆನ್ ತಂದ ಧರ್ಮವಾಗಿದೆ. ಮತ್ತು ಮುಕ್ತಿಯನ್ನು ಪಡೆಯುವ ಮಾರ್ಗ 'ಲಾ ಇಲಾಹ ಇಲ್ಲಲ್ಲಾಹ್, ಮುಹಮ್ಮದ್ ರಸೂಲುಲ್ಲಾಹ್' ಆಗಿದೆ. ಇದೀಗ ನೀವು ಈ ಮಾತಿಗೆ ಸಿದ್ಧರಿರುವಿರೋ, ದೃಷ್ಟಾಂತ ನೋಡಿದ ಮೇಲೆ ಈ ಧರ್ಮವನ್ನು ಸ್ವೀಕರಿಸುವಿರೋ? ನೀವು ಸಿದ್ಧರಾಗಿದ್ದರೆ ಕೆಲವು ಸಾಲುಗಳು ಬರೆದು ಮೂರು ಪತ್ರಿಕೆಗಳಲ್ಲಿ ಅಂದರೆ ನೂರ್ ಆಫ್‌ಶಾಂ, ಮನ್‌ಶೂರ್ ಮುಹಮ್ಮದಿ ಮತ್ತು ಯಾವುದೇ ಆರ್ಯರ ಪತ್ರಿಕೆಯಲ್ಲಿ ಪ್ರಕಟಿಸಬೇಕು. ನಾನು ಅಲ್ಲಾಹನನ್ನು ಸಾಕ್ಷವಹಿಸಿ ಈ ವಾಗ್ದಾನ ನೀಡುತ್ತೇವೆ. ಈ ಚರ್ಚೆಯ ನಂತರ ಅದರ ತಾರೀಖು 22 ಮೇ 1893 ನಿಗಧಿಯಾಗಿದೆ. ಮಿರ್ಜಾ ಗುಲಾಂ ಅಹ್ಮದ್‌ನಿಗೆ ಅಲ್ಲಾಹನು ಸಹಕಾರ ನೀಡುವವನಾದರೆ ಮತ್ತು ಅವನ ಪರವಾಗಿ ಅಲ್ಲಾಹನು ಯಾವುದಾದರೊಂದು ದೃಷ್ಟಾಂತ ಜಾಹೀರುಪಡಿಸಿದರೆ ಅದು ಸಮಯಕ್ಕೆ ಪೂರ್ವ ನುಡಿದಂತೆ ಪೂರ್ಣಗೊಂರೆ ನಾವು ಆ ದೃಷ್ಟಾಂತವನ್ನು ನೋಡಿದ ನಂತರ ತಡಮಾಡದೆ ಮುಸಲ್ಮಾನರಾಗುವೆವು. ಒಂದು ವೇಳೆ ದೃಷ್ಟಾಂತ ನೋಡಿದ ಮೇಲೆಯೂ ಇಸ್ಲಾಮ್ ಧರ್ಮ ಸ್ವೀಕರಿಸಲಿಲ್ಲ ಎಂದಾದರೆ ಅವನ ಎದುರಿನಲ್ಲಿ ಅದೇ ವರ್ಷದೊಳಗೆ ಅವನಂತೆಯೇ ಪವಾಡದ ದೃಷ್ಟಾಂತ ತೋರಿಸದಿದ್ದರೆ ಆ ವಚನಭಂಗಕ್ಕಾಗಿ ದಂಡರೂಪದಲ್ಲಿ ಅರ್ಧ ಆಸ್ತಿ ಇಸ್ಲಾಮ್ ಧರ್ಮಕ್ಕಾಗಿ ಅವನಿಗೆ ಒಪ್ಪಿಸುವೆವು. ಒಂದು ವೇಳೆ ನಾವು ಎರಡನೇ ಸತ್ಯದ ಮೇಲೂ ನಡೆದುಕೊಳ್ಳಲಿಲ್ಲವಾದರೆ ಮತ್ತು ವಚನಭಂಗ ಮಾಡಿದರೆ, ಆ ವಚನಭಂಗದ ನಂತರ ಯಾವೊಂದು ಶಾಪದಾಯಕ ದೃಷ್ಟಾಂತ ನಮ್ಮ ಪ್ರತಿ ಮಿರ್ಝಾ ಗುಲಾಂ ಅಹ್ಮದ್ ಪತ್ರಿಕೆಗಳಲ್ಲಿ ಪ್ರಕಟ ಪಡಿಸಬಯಸಿದರೆ ಅದು ನಮ್ಮ ಕಡೆಯಿಂದ ಒಪ್ಪಿತವಾಗಿರುವುದು. ಅದು ಸಾಮಾನ್ಯ ರೀತಿಯಲ್ಲಿ ಪತ್ರಿಕೆಗಳ ಮಾಧ್ಯಮದಿಂದಾಗಲಿ ಅಥವಾ ತನ್ನ ಪತ್ರಿಕೆಗಳಲ್ಲಿ ಪ್ರಕಟಪಡಿಸಲಿ. ಇಂತಿ. ಈ ಬರಹ ನಿಮ್ಮ ಕಡೆಯಿಂದ ಹೆಸರು, ಧರ್ಮ, ತಂದೆಯ ಹೆಸರು, ಸ್ಥಳ ನಮೂದಿತವಾಗಿರಬೇಕು. ಅಂತೆಯೇ ಉಭಯತ್ರರ ಐವತ್ತು, ಐವತ್ತು ಆದರಣೀಯ ನಂಬಲರ್ಹರ ಸಾಕ್ಷಿ ಅದರ ಮೇಲೆ ಅಚ್ಚಾಗಿರಬೇಕು. ಆಗ ಮೂರು ಪತ್ರಿಕೆಗಳಲ್ಲಿ ಅದನ್ನು ನೀವು ಪ್ರಕಟಿಸಬೇಕು. ಅದಾಗ್ಯೂ ನೀವು ಸತ್ಯವನ್ನು ಬಯಸುವವರಾಗಿದ್ದೀರಿ. ಈ ಮಾನದಂಡ ನಿಮ್ಮ ಮತ್ತು ನಮ್ಮ ಧರ್ಮಗಳ ಆಶಯದಂತಿದೆ. ಇದೀಗ ದೇವನಿಗೋಸ್ಕರ ದಯವಿಟ್ಟು ತಡ ಮಾಡಬೇಡಿರಿ. ಅಂತೂ ಇದೀಗ ಸಮಯ ಬಂದಿದೆ. ಅಲ್ಲಾಹನು ಸತ್ಯ ಧರ್ಮದ ಪ್ರಕಾಶ ಮತ್ತು ಅನುಗ್ರಹಗಳನ್ನು ಜಾಹಿರು ಪಡಿಸಬಯಸುತ್ತಾನೆ. ಮತ್ತು ಲೋಕವನ್ನು ಒಂದೇ ಧರ್ಮದಡಿ ತರಬಯಸುತ್ತಾನೆ. ಆದುದರಿಂದ ನೀವು ದೃಢ ಮನಸ್ಸಿನಿಂದ ಪ್ರಪ್ರಥಮವಾಗಿ ಈ ಮಾರ್ಗದಲ್ಲಿ ಹೆಜ್ಜೆಯನ್ನಿಡಿ ಮತ್ತು ತನ್ನ ವಚನವನ್ನು ನಿಷ್ಠೆಯಿಂದ ಹಾಗೂ ಧೈರ್ಯದಿಂದ ಪುರ್ಣಗೊಳಿಸಿರಿ. ಆಗ ನೀವು ಅಲ್ಲಾಹನ ಹತ್ತಿರ ಸತ್ಯವಂತರಾಗುವಿರಿ ಮತ್ತು ನಿಮ್ಮ ಸತ್ಯತೆಯ ಈ ದೃಷ್ಟಾಂತ ಅಮರವಾಗಿರುವುದು.

ನೀವು ಹೀಗೆ ಹೇಳುವವರಾದರೆ, ನಾವು ಇವೆಲ್ಲ ಮಾಡಿಯೇ ತೀರುವೆವು. ಮತ್ತು ಯಾವುದೇ ದೃಷ್ಟಾಂತ ನೋಡಿದರೆ ಇಸ್ಲಾಮ್ ಧರ್ಮ ಸ್ವೀಕರಿಸುವೆವು ಅಥವಾ ಎರಡನೇ ವಿಧದ ಶರತ್ತುಗಳ ಪ್ರಕಾರ ಪಾಲಿಸುವೆವು ಮತ್ತು ಈ ಪ್ರತಿಜ್ಞೆ ಮೊದಲೇ ಮೂರು ಪತ್ರಿಕೆಗಳಲ್ಲಿ ಪ್ರಕಟಿಸುವೆವು. ಆದರೆ ನೀವೇ ಸುಲ್ಲುಗಾರರೆಂದಾದರೆ ಮತ್ತು ಯಾವುದೇ ದೃಷ್ಟಾಂತ ತೋರಿಸದಂತಾದರೆ ನಿಮಗೆ ಯಾವ ಶಿಕ್ಷೆ ವಿಧಿಸಬೇಕು. **ನಾನು ಅದಕ್ಕೆ ಉತ್ತರವಾಗಿ ತೌರಾತಿನ ಆಶಯದಂತೆ ಮರಣ ದಂಡನೆಯನ್ನು ಸ್ವೀಕರಿಸುವೆನು. ಇದು ಕಾನೂನಿಗೆ ವಿರುದ್ಧ ಎಂದಾದರೆ ನನ್ನ ಒಟ್ಟು ಆಸ್ತಿಯನ್ನು ನಿಮಗೆ ಕೊಡುವೆನು.** ಯಾವ ರೀತಿಯಲ್ಲಾದರೂ ಅದನ್ನು ನನ್ನಿಂದ ದೃಢಿಕರಿಸಿಕೊಳ್ಳಬಹುದು. (ಅದೇ ಪುಟ 52 ರಿಂದ 54)

ತಪ್ಪಿನ ಸುಧಾರಣೆ ಸಹ ಅಲ್ಲಾಹನ ಅನುಗ್ರಹದಿಂದ ಆಗುತ್ತದೆ. ಅಲ್ಲಾಹನ ವಚನ ಇದೆ. **'ಇನ್ನುಕ ಲಾ ತಹ್ದೀ ಮನ್ ಅಹ್‌ಬಬ್ತ ವಲಾ ಕಿನ್ನಲ್ಲಾಹ ಯಹ್‌ದಿ ಮಯ್ಯಂಶಾಉ. ವಹುವ ಆಲಮು ಬಿಲ್ ಮುಹ್ತದೀನ್'** ಅಂದರೆ ನೀನು ಬಯಸುವವರಿಗೆ ಮಾರ್ಗದರ್ಶನ ನೀಡಲು ಸಾಧ್ಯವಿಲ್ಲ. ಆದರೆ ಅಲ್ಲಾಹನು ಯಾರಿಗೆ ಮಾರ್ಗದರ್ಶನ ನೀಡಬಯಸುವವನೋ ಅವನಿಗೆ ಮಾರ್ಗದರ್ಶನ

ನೀಡಬಲ್ಲನು. ಅವನು ಮಾರ್ಗದರ್ಶನ ಪಡೆಯುವವರನ್ನು ಚೆನ್ನಾಗಿ ಬಲ್ಲವನಾಗಿದ್ದಾನೆ. ಮುಂದೆ ಇನ್‌ಶಾ ಅಲ್ಲಾಹ್, ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರಿಂದ ಪ್ರಸ್ತುತಪಡಿಸಿದ ಇನ್ನೊಂದು ಬಹುಮಾನದ ಪಂಥಹ್ವಾನ ನಾವು ಒದುಗರ ಸಮ್ಮುಖದಲ್ಲಿ ಪ್ರಸ್ತುತಪಡಿಸುವೆವು.

**(ಮನ್‌ಸೂರ್ ಅಹ್ಮದ್ ಮಸ್‌ರೂರ್)**

## ಝಕಾತ್ ಒಂದು ಕಡ್ಡಾಯ ಪ್ರಮುಖ ಕರ್ಮವಾಗಿದೆ. ಅದರ ಪಾಲನೆಯ ಕಡೆ ವಿಶೇಷ ಗಮನವಹಿಸಬೇಕು!

ಜಮಾಅತ್ ಬಂಧುಗಳು ತಿಳಿದವರೇ ಆಗಿದ್ದಾರೆ. ಪವಿತ್ರ ಖುರ್‌ಆನ್‌ನಲ್ಲಿ ನಮಾಝ್ ನಿರ್ವಹಣೆ ಜೊತೆ ಜೊತೆಯಲ್ಲಿ ಝಕಾತಿನ ನಿರ್ದೇಶನವಿದೆ. ಆದುದರಿಂದ ಎಲ್ಲಾ ಅರ್ಹ ಬಂಧು ಭಗಿನಿಯರಲ್ಲಿ ವಿನಂತಿಸಿ ಕೊಳ್ಳುವುದೇನೆಂದರೆ ಅವರು ಈ ಪ್ರಮುಖ ಕಡ್ಡಾಯ ನಿರ್ವಹಣೆಯತ್ತ ಗಮನ ಹರಿಸಬೇಕಾಗಿದೆ.

ಝಕಾತ್ ಇಸ್ಲಾಮಿನ ಮೂಲಭೂತ ಸಿದ್ಧಾಂತವಾಗಿದೆ. ಅದು ಎಲ್ಲಾ ನಿಗದಿತ ಅರ್ಹ ಜನರಿಗೆ ಕಡ್ಡಾಯವಾಗಿದೆ. ಆ ಪೈಕಿ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಓ ಎಲ್ಲಾ ನನ್ನ ಜಮಾಅತಿಗೆ ಸೇರಿದವರೆಂದು ಹೇಳುವ ಜನರೇ! ನೀವು ಆಕಾಶದಲ್ಲಿ ನಿಜವಾಗಿಯೂ ಭಯಭಕ್ತಿಯ ಮಾರ್ಗಗಳಲ್ಲಿ ನಡೆದವರಾದಾಗ ಮಾತ್ರ ನನ್ನ ಜಮಾಅತಿಗೆ ಸೇರಿದವರಾಗುವಿರಿ. ಆದುದರಿಂದ ತನ್ನ ಐದು ಹೊತ್ತಿನ ನಮಾಝುಗಳನ್ನು ಎಂಥ ಭಯ ಮತ್ತು ಆತ್ಮೀಯವಾಗಿ ನಿರ್ವಹಿಸಬೇಕೆಂದರೆ, ಅಲ್ಲಾಹನು ನಿಮ್ಮನ್ನು ನೋಡುತ್ತಿದ್ದಾನೆ ಎಂದಾಗಿರಬೇಕು. ಅಂತೆಯೇ ತನ್ನ ಉಪವಾಸಗಳನ್ನು ಅಲ್ಲಾಹನಿಗೋಸ್ಕರ ಪೂರ್ಣ ಶ್ರದ್ಧೆಯಿಂದ ಪಾಲಿಸುವವರಾಗಿರಿ. ಝಕಾತ್‌ಗೆ ಅರ್ಹರಾದ ಪ್ರತಿಯೊಬ್ಬರು ಝಕಾತ್ ನೀಡಬೇಕು. **(ಕಿಶ್ತಿ ನೂಹ್, ರೂಹಾನಿ ಖಝಾಇನ್, ಸಂಪುಟ–19, ಪುಟ–15)**

ಆಭರಣಗಳ ಝಕಾತ್ ನೀಡುವಿಕೆ ಕುರಿತು ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: **"**ನೀವು ಉಪಯೋಗಿಸುವ ಆಭರಣಗಳು ಮತ್ತು ಒಮ್ಮೊಮ್ಮೆ ಬಡ ಸ್ತ್ರೀಯರಿಗೆ ಉಪಯೋಗಿಸಲು ನೀಡುವ ಆಭರಣಗಳು ಕುರಿತು ಕೆಲವರು ಭಾವಿಸುವುದೇನೆಂದರೆ ಅದರ ಮೇಲೆ ಝಕಾತ್ ಕಡ್ಡಾಯವಲ್ಲ ಎಂದು. ಮತ್ತು ಯಾವ ಆಭರಣಗಳು ಉಪಯೋಗಿಸಲಾಗುತ್ತದೆಯೋ ಮತ್ತು ಇತರರಿಗೆ ಬಳಸಲು ಕೊಡುವುದಿಲ್ಲವೋ ಆ ಆಭರಣಗಳ ಮೇಲೆ ಝಕಾತ್ ಕೊಡಬೇಕಾಗಿದೆ ಎಂದು. ಏಕೆಂದರೆ ಅದು ತನ್ನ ಸ್ವಂತಕ್ಕಾಗಿ ಬಳಸಲ್ಪಡುತ್ತದೆ. ನಮ್ಮ ಮನೆಗಳಲ್ಲಿ ಅದೇ ತರಹ ಕ್ರಮಬದ್ಧರಾಗಿರುತ್ತಾರೆ. ಮತ್ತು ಪ್ರತಿ ವರ್ಷ ತನ್ನ ಆಭರಣಗಳ ಝಕಾತನ್ನು ನೀಡುತ್ತಾರೆ. ಮತ್ತು ಯಾವ ಆಭರಣಗಳು ರೂಪಾಯಿಗಳಂತೆ ಜಮಾ ಮಾಡಿ ಇಡುತ್ತಾರೋ. ಅದರ ಝಕಾತ್ ಕೊಡುವುದರಲ್ಲಿ ಯಾರಿಗೂ ತಕರಾರು ಇಲ್ಲ. **(ಅಲ್–ಹಕಮ್ 17 ನವೆಂಬರ್ 1905, ಪುಟ 11)**

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: **"**ನೆನಪಿಡಬೇಕಾದ ವಿಷಯವೇನೆಂದರೆ ಈ ತೆರಿಗೆಯನ್ನು ನಾವು 'ಝಕಾತ್' ಎನ್ನುತ್ತೇವೆ. ಇದು ಆದಾಯದ ಮೇಲೆ ನಿರ್ಧಾರವಲ್ಲ. ಬದಲು ಬಂಡವಾಳ ಹಾಗೂ ಲಾಭ ಎಲ್ಲವೂ ಸೇರಿಸಿ ನೀಡಲಾಗುತ್ತದೆ. ಅದೇ ರೀತಿ 2.50% ವಾಸ್ತವದಲ್ಲಿ ಕೆಲ ಸಂದರ್ಭಗಳಲ್ಲಿ ಲಾಭದ 50% ದಷ್ಟಾಗುತ್ತದೆ**"** **(ಅಹ್ಮದಿಅತ್ ಯಾನಿ ಹಖೀಖಿ ಇಸ್ಲಾಮ್, ಅನ್ವಾರುಲ್ ಉಲೂಮ್, ಸಂಪುಟ–8, ಪುಟ–306)**

ಆಭರಣಗಳು ಮತ್ತು ನಗದು ರೂಪಾಯಿಯ ಝಕಾತಿಗೆ ನಿರ್ಧರಿತ ಕ್ರಮದ ಕುರಿತು ಸಯ್ಯದ್‌ನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಅಲ್–ಖಾಮಿಸ್(ಅಬಅ) ಹೇಳುತ್ತಾರೆ. ಬೆಳ್ಳಿಗೆ ಬೆಳ್ಳಿ ಮತ್ತು ಚಿನ್ನಕ್ಕೆ ಚಿನ್ನವೇ ನಿರ್ಧರಿತ ಕ್ರಮವಾಗಿರುವುದು. ಅದು ರಸೂಲುಲ್ಲಾಹ್(ಸ) ರವರ ಪರಿಶುದ್ಧ ಕಾಲದಲ್ಲಿ ರಸೂಲುಲ್ಲಾಹ್(ಸ) ಸ್ವಯಂ ಜಾರಿಗೆ ತಂದಿದ್ದರು. ಎಲ್ಲಿಯವರೆಗೆ ನಗದು ರೂಪಾಯಿಗಳ ನಿರ್ಧರಿತ ಕ್ರಮದ ಪ್ರಶ್ನೆ ಇದೆಯೋ ಅದನ್ನು ಪ್ರಸಕ್ತ ಸಮಯ ಲೋಕವು ಚಿನ್ನವನ್ನೇ ಬಂಡವಾಳ ಎಂದು ಒಪ್ಪಿಕೊಂಡಿದೆ. ಆದುದರಿಂದ ನಗದು ರೂಪಾಯಿಗಳ ಝಕಾತ್ ಕೂಡ ಚಿನ್ನದ ಮಾನದಂಡದಂತೆಯೇ ಕೊಡಲಾಗುತ್ತದೆ. (ಮಕ್ತೂಬ್ ಹುಝೂರ್(ಅತಬಅ) ಬನಾಮ್ ಸದರ್ ಸಾಹಿಬ್ ಮಜ್ಲಿಸ್ ಇಫ್ತಾಹ್)

ರಸೂಲುಲ್ಲಾಹ್(ಸ) ಬೆಳ್ಳಿಗೋಸ್ಕರ 52 ವರೆ ತೊಲ (52.5) ಚಿನ್ನಕ್ಕೋಸ್ಕರ ಏಳುವರೆ ತೊಲ (7.5) ನಿಗದಿಪಡಿಸಲಾಗಿದೆ.

* ಯಾರ ಬಳಿ ಐವತ್ತೆರಡುವರೆ (52.5) ತೊಲ 612 ಗ್ರಾಂ ಬೆಳ್ಳಿ ಇದೆಯೋ ಮತ್ತು ಅದು ಅವರ ಬಳಿ ಒಂದು ವರ್ಷ ಆದರೆ. ಆಗ ಅದರ 1/40 ಭಾಗ ಅಂದರೆ ಎರಡುವರೆ ಪ್ರತಿಶತ ಝಕಾತ್ ನೀಡುವುದು ಕಡ್ಡಾಯವಾಗಿರುತ್ತದೆ.

ಅದೇ ರೀತಿ ಯಾರ ಬಳಿ ಎಳುವರೆ (7.5) ತೊಲ 87 ಗ್ರಾಂ ಚಿನ್ನವಿರುತ್ತದೆ. ಅಥವಾ ಅದಕ್ಕೆ ಸಮನಾದ ನಗದು ಹಣದ ರಾಶಿಯಿರುತ್ತದೆ. ಅದರ ಮೇಲೆ ಒಂದು ವರ್ಷ ಅವಧಿ ಕಳೆದರೆ ಆಗ ಅದರ ಮೇಲೆಯೂ 1/40 ಭಾಗ ಅಂದರೆ ಎರಡುವರೆ ಪ್ರತಿಶತ ಝಕಾತ್ ನೀಡುವುದು ಫರ್ಝ್ (ಕಡ್ಡಾಯ) ಆಗಿರುತ್ತದೆ.

* ಝಕಾತ್ ರೂಪದಲ್ಲಿ ಪಡೆದ ಒಟ್ಟು ಮೊತ್ತ ಕೇಂದ್ರಕ್ಕೆ ರವಾನಿಸುವುದು ಅವಶ್ಯಕವಾಗಿದೆ.

ಅಲ್ಲಾಹನು ನಮಗೆಲ್ಲರಿಗೂ ಈ ಪ್ರಮುಖ ಕರ್ತವ್ಯವನ್ನು ಪಾಲಿಸಲು ಭಾಗ್ಯ ದಯಪಾಲಿಸಲಿ ಮತ್ತು ಜಮಾಅತಿನ ಎಲ್ಲಾ ಬಂಧುಗಳ ಸಂಪತ್ತು ಹಾಗೂ ಆತ್ಮಗಳಲ್ಲಿ ತನ್ನ ಅನುಗ್ರಹ ದಯಪಾಲಿಸಲಿ. **ಆಮೀನ್**

**(ನಾಝಿರ್ ಬೈತುಲ್ ಮಾಲ್ ಆಮದ್ ಖಾದಿಯಾನ್)**

*(ಪುಟ ಸಂಖ್ಯೆ 12ರ ಉಳಿದ ಭಾಗ)*

ತನ್ನ ನಡತೆಯಿಂದ (ಸುನ್ನತ್) ತೋರಿಸಿಕೊಟ್ಟಿದ್ದಾರೆ. ಈ 5 ಹೊತ್ತಿನ ನಮಾಝುಗಳು ಹೇಗೆ ಮತ್ತು ಯಾವ ಸಮಯ ಮಾಡಬೇಕು ಎಂದು. ಒಂದು ಹದೀಸೂ ಇದೆ. ಹಝ್ರತ್ ರಸೂಲುಲ್ಲಾಹ್(ಸ) ಒಂದು ಸಂದರ್ಭದಲ್ಲಿ ಮಗ್ರಿಬ್ ನಮಾಜ್ ಪ್ರಾಥಮಿಕ ಸಮಯದಲ್ಲಿ ನಿರ್ವಹಿಸಿದರು. ಇನ್ನೊಂದು ಸಮಯ ಅಂತಿಮ ಘಳಿಗೆಯಲ್ಲಿ ನಿರ್ವಹಿಸಿದರು. ಅದೇ ರೀತಿ ಇಶಾಅ, ಫಜರ್, ಝುಹರ್ ಮತ್ತು ಅಸರ್ ನಮಾಝುಗಳನ್ನು ಪ್ರಾಥಮಿಕ ಹಾಗೂ ಅಂತಿಮ ಸಮಯಗಳಲ್ಲಿ ನಿರ್ವಹಿಸಿದರು. ಸಹಾಬ ಹೇಳಿದರು. ಯಾ ರಸೂಲುಲ್ಲಾಹ್(ಸ) ನೀವು ಎರಡು ವಿಭಿನ್ನ ವೇಳೆಗಳಲ್ಲಿ ಏಕೆ ನಮಾಝ್ ನಿರ್ವಹಿಸಿದ್ದೀರಿ. ಹಝ್ರತ್ ರಸೂಲುಲ್ಲಾಹ್(ಸ) ಹೇಳಿದರು. ಅಲ್ಲಾಹನ ದೇವದೂತರು ನನ್ನ ಬಳಿಗೆ ಬಂದಿದ್ದನು. ಅವರು ನನಗೆ ಈ ಎರಡು ಸಮಯಗಳನ್ನು ತೋರಿಸಿದರು. ಒಂದು ಪ್ರಾಥಮಿಕ ಸಮಯದಲ್ಲಿ ಇನ್ನೊಂದು ಅಂತಿಮ ಘಟ್ಟದಲಿ ಇದರ ಮಧ್ಯೆಯೂ ನಮಾಝುಗಳನ್ನು ನಿರ್ವಹಿಸಬಹುದಾಗಿದೆ. ಅಂತೂ ಈ ವಿಭಿನ್ನ ಸಮಯಗಳು ನಮಗೆ ಹಝ್ರತ್ ರಸೂಲುಲ್ಲಾಹ್(ಸ) ಹೇಳಿಕೊಟ್ಟಿದ್ದಾರೆ.

* ಒಬ್ಬ ಬಾಲಕನು ಕೇಳಿದನು. ಹುಝೂರ್ ನೀವು Free time ನಲ್ಲಿ ಇರುವಾಗ, ನೀವು ಊಟ ಮಾಡುತ್ತಿರುವಾಗ ಅಥವಾ ಮಲಗುವಾಗಲೂ ನಿಮ್ಮ ಬಳಿ security ಇರುತ್ತದೆಯೇ?

ಆಗ ಹುಝೂರ್ ಹೇಳಿದರು. ನನ್ನ ಗಮನ ಅ ಕಡೆ ಇರುವುದಿಲ್ಲ, ಕಚೇರಿಯಲ್ಲಿ ನನ್ನ ಸಮೀಪ ಯಾರೂ ಇರುವುದಿಲ್ಲ. ನಾನು ಮನೆಯಲ್ಲಿ ತುಂಬ ಫ್ರೀ ಆಗಿರುತ್ತೇನೆ. ಕಚೇರಿಯಲ್ಲೂ ಫ್ರೀ ಇರುತ್ತೇನೆ ಕಚೇರಿಯ ಯಾವ ಸಿಬ್ಬಂಧಿಯೂ ನನ್ನ ಸಮೀಪವಿರುವುದಿಲ್ಲ.

ವಖ್ಫೆ ನೌ ಪಠ್ಯದಲ್ಲಿ ಉನ್ನತ ದರ್ಜೆ ಪಡೆದ ವಾಖಿಫೀನಲ್ಲಿ ಬಹುಮಾನ ವಿತರಣೆ

* ಅನಂತರ ಹುಝೂರ್(ಅತಬಅ)ರವರು ಈ ವಾಖಿಫೀನ್ ನೌ ಅವರಿಗೆ ತನ್ನ ಶುಭ ಹಸ್ತದಿಂದ ಹಸ್ತಕ್ಷರಗೊಂಡ ಬಹುಮಾನಗಳನ್ನು ನೀಡಿದರು. ಅವರು ಗತವರ್ಷ 2014ರ ವಾರ್ಷಿಕ ಪಠ್ಯಗಳ ಪರಿಶೀಲನೆ ನಂತರ ವಯಸ್ಸಿಗನುಗುಣವಾಗಿ ಜರ್ಮನಿಯಾದ್ಯಂತ ಮೊದಲ ಮೂರು ಉನ್ನತ ದರ್ಜೆ ಪಡೆದವರಾಗಿದ್ದರು. 12 ವರ್ಷದ ಗುಂಪಿನಲ್ಲಿ ಪ್ರಥಮ ಅಝೀಝುಂ ಸದೀದ್ ಹಮೀದ್, ದ್ವಿತೀಯ ಅಝೀಝುಮ್ ಮುಹಮ್ಮದ್ ಫರ್‌ಹಾನ್ ಶೇಖ್, ಮತ್ತು ತೃತೀಯ ಅಝೀಝುಮ್ ಫರಾಸತ್ ಹಸ್ಬಾನ್ ಅಲಿ ಆದರು. 13 ವರ್ಷದ ಗುಂಪಿನಲ್ಲಿ ಪ್ರಥಮ ಅಝೀಝುಮ್ ಉಸ್ಮಾನ್ ಅಹ್ಮದ್ ಆಮಿರ್, ದ್ವಿತೀಯ ಅಝೀಝುಮ್ ಫಾರಾನ್ ರಾಶಿದ್ ಮತ್ತು ತೃತೀಯ ಅಝೀಝುಮ್ ಮಿಸ್ಬಾಹ್ ಉಲ್ ಹಖ್ ಶಮ್ಸ್ ಆದರು. 14 ವರ್ಷದ ಗುಂಪಿನಲ್ಲಿ ಪ್ರಥಮ ಅಝೀಝುಮ್ ಜಾಝಿಬ್ ಆಸಿಫ್, ದ್ವಿತೀಯ ಅಝೀಝುಮ್ ಹಸನ್ ಅಹ್ಮದ್ ಸಲಾಮ್ ಸಂಧು, ಮತ್ತು ತೃತೀಯ ಅರ್ಸಲಾನ್ ಅಹ್ಮದ್ ಢಲ್ಲೋನ್ ಆಗಿದ್ದರು. ಅಲ್ಲಾಹನು ಇವರೆಲ್ಲರಿಗೂ ಈ ಗೌರವ ಶುಭವಾಗಿರಲಿ. **ಆಮೀನ್**

ವಾಖಿಫೀನ್ ನೌ class 7 ಗಂಟೆ 10 ನಿಮಿಷಕ್ಕೆ ಅಂತ್ಯಗೊಂಡಿತು.

**(ಅಖ್ಬಾರೆ ಬದರ್ ಉರ್ದು 9 ಜುಲೈ 2015)**

**(ಮುಂದುವರಿಯುವುದು)**

## ಅನ್ಯ ಗೋತ್ರಗಳೊಂದಿಗೆ ವಿವಾಹ

**ಹಝ್ರತ್ ಮಸೀಹ್ ಮೌಊದ್ ಅಲೂಹಿಸ್ಸಲಾಮ್ ಹೇಳುತ್ತಾರೆ:–**

"ನಮ್ಮ ಸಮುದಾಯದಲ್ಲಿ ಕಂಡುಬರುತ್ತಿರುವ ಒಂದು ಕೆಟ್ಟ ಸಂಪ್ರದಾಯವೇನೆಂದರೆ, ನಮ್ಮೊಳಗಿರುವ ಇತರ ಗೋತ್ರಗಳಿಗೆ ಹೆಣ್ಣು ಕೊಡಲು ಹಾಗೂ ಪಡೆದುಕೊಳ್ಳಲು ಇಷ್ಟಪಡುವುದಿಲ್ಲ. ಇದು ಅಹಂಕಾರ ಮತ್ತು ಮತ್ಸರದಿಂದಾಗಿದೆ. ಇದು ಶರೀಅತ್ತಿಗೆ ಅಪ್ಪಟ ವಿರುದ್ಧವೂ ಆಗಿರುತ್ತದೆ. ಎಲ್ಲಾ ಆದಮ್ ಸಂತತಿಗಳು ಏಕದೇವನ ದಾಸರಾಗಿದ್ದಾರೆ. ಹೆಣ್ಣು ಕೊಡುವ ಪಡೆಯುವ ವಿಷಯದಲ್ಲಿ ಗಮನಿಸಬೇಕಾದ ವಿಷಯವೇನೆಂದರೆ ಅವರು ಭಯಭಕ್ತಿ ಹಾಗೂ ಉತ್ತಮ ನಡತೆ ಹೊಂದಿರುವವರಾಗಿರಬೇಕು ಮತ್ತು ಅವರು ಯಾವುದೇ ರೀತಿಯ ಪಿತೂರಿಗೆ ಕಾರಣರಾಗಿರಬಾರದು.

ನೆನಪಿಡಿರಿ! ಇಸ್ಲಾಮಿನಲ್ಲಿ ಕುಲ, ಗೋತ್ರಗಳ ಕುರಿತು ಯಾವುದೇ ತಾರತಮ್ಯವಿಲ್ಲ. ಕೇವಲ ಭಯಭಕ್ತಿ ಮತ್ತು ಸಾತ್ವಿಕತೆಯೇ ಪ್ರಧಾನವಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದನು: **ಇನ್ನ ಅಕ್ರಮಕುಮ್ ಇಂದಲ್ಲಾಹಿ ಅತ್‌ಖಾಕುಮ್** (ಅಲ್‌ಹುಜರಾತ್:14) ಅಂದರೆ: ನಿಮ್ಮ ಪೈಕಿ ಹೆಚ್ಚು ಸಾತ್ವಿಕನಾರೋ ಖಂಡಿತವಾಗಿಯೂ ಆತನೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಗೌರವಾರ್ಹನು." (ಮಲ್ಫೂಝಾತ್ ಸಂಪುಟ–5, ಪುಟ–48–49, ಮುದ್ರಣ ಖಾದಿಯಾನ್ 2003)

**(ನಝೂರತ್ ಇಸ್ಲಾಹ್–ವ–ಇರ್‌ಶಾದ್ (ಮರ್‌ಕಝಿಯಾ, ಖಾದಿಯಾನ್)**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2020-22 Vol No.02, Thursday, 18 February 2021, Issue No. 07

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 06ರ ವರದಿಯ ಉಳಿದ ಭಾಗ)**

* ಒಬ್ಬ ಬಾಲಕನು ಪ್ರಶ್ನೆ ಕೇಳಿದನು. ಹುಝೂರ್ ಒಂದು ಕುತುಬದಲ್ಲಿ ಅತ್ಫಾಲುಲ್ ಅಹ್ಮದಿಯಾ ಅವರಿಗೆ mobile ನಿಷೇಧಿಸಿದ್ದಾರೆ. ಇದು ನಮಗೆ ನಿಷೇಧಿಸಲು ಕಾರಣವೇನೆಂದರೆ ನಾವು ಯಾವ business ಮಾಡುತ್ತಿಲ್ಲ. ಯಾವುದೇ ಕೆಲಸ ಮಾಡುತ್ತಿಲ್ಲ. ನಾನು ಇದು ಸಹ ಕೇಳಿದ್ದೇನೆ. ಒಬ್ಬನು ಖಾದಿಮ್ 15 ವರ್ಷದವನಾದ ನಂತರ ತೆಗೆದುಕೊಳ್ಳಬಹುದು. ನನ್ನ ಎಂದರೆ ಒಬ್ಬ ಬಾಲಕನು 15 ವರ್ಷದವನಾದಾಗ ಅವನು ಮೊಬೈಲ್ ತೆಗೆದುಕೊಳ್ಳುವ ಅನುಮತಿ ಇದೆಯೇ?

ಆಗ ಹುಝೂರ್ ಹೇಳಿದರು. ಮೊಬೈಲ್ ತೆಗೆದುಕೊಳ್ಳುವುದು ಪಾಪವೇನಲ್ಲ, ಪ್ರಶ್ನೆಯಿರುವುದು ಅಗತ್ಯವಿದ್ದರೆ, ಕೆಲವು ತಂದೆ ತಾಯಿಯರು ತುಂಬ ಮೂಢನಂಬಿಕೆಯುಳ್ಳವರಾಗಿದ್ದಾರೆ. ಅವರು ತಿಳಿಯುವುದು ನಮ್ಮ ಮಕ್ಕಳೊಂದಿಗೆ ಸಂಪರ್ಕವಿರಬೇಕು. ಅವರು 14, 15 ವರ್ಷದಲ್ಲಿ ಕೊಡಿಸುತ್ತಾರೆ. ನೀವು ತಪ್ಪು ಬಳಕೆ ಮಾಡುತ್ತಿಲ್ಲವಾದರೆ ಇತ್ತೀಚೆಗೆ ಬಂದ Mobile, Cell phone , I Phone ಅಥವಾ ಇದೀಗ ಹೆಸರಿಸಿದ್ದು, smart phone ಇನಿತರ samsung ಇತ್ಯಾದಿ, android ಇತ್ಯಾದಿ, ಅದರ ಮೇಲೆ ಇತರ appilcations ಬರುತ್ತವೆ. ತಪ್ಪು ಮಾತುಗಳು ಬರುತ್ತಿವೆ, ನೀವು ಒಳ್ಳೆಯ ಕೆಲಸಗಳಿಗೆ ಬಳಕೆ ಮಾಡಿದರೆ, ನಾನು ಈ ಹಿಂದೆಯೇ ಹೇಳಿದ್ದೇನೆ. ಅಡ್ಡಿಯೇನಿಲ್ಲ, ತನ್ನ ತಂದೆ ತಾಯಿಯರೊಡನೆ ಸಂಪರ್ಕಿಸಲು ಉಪಯೋಗಿಸುವುದಾದರೆ, ತಮ್ಮ ಗೆಳೆಯರೊಂದಿಗೆ study ಯ ಕುರಿತು ಕೇಳುವುದಾದರೆ, ಅಥವಾ ಸಂಪರ್ಕಿಸಲು ಆದರೆ ಏನೂ ಅಡ್ಡಿಯಿಲ್ಲ. ತಪ್ಪು ಅಪ್ಲಿಕೇಷನ್ಸ್ ಮತ್ತು ಇಡೀ ದಿನ ಯಾವುದೆ ಗೇಮ್‌ನಲ್ಲಿ ಹಿದೆ ಬೀಳುವುದಾದರೆ, ನಮಾಝುಗಳನ್ನು ಬಿಡುವುದು, ಇಡೀ ದಿನ ನಿಮ್ಮ ನೈತಿಕತೆ ಹಾಳಾಗುವಂತಹ ಚಲನಚಿತ್ರಗಳನ್ನು ನೋಡುವುದು, ಅದು ಹಿರಿಯರಿಗೂ ತಪ್ಪು ಮತ್ತು ಕಿರಿಯರಿಗೂ ತಪ್ಪಾಗಿರುತ್ತದೆ. ಆದರೆ, ಚಿಕ್ಕವರಿಗೆ ಬುದ್ಧಿ ಕಡಿಮೆ ಇರುತ್ತದೆ. ಬಹು ಬೇಗ ಜನರ ಮಾತುಗಳನ್ನು ಕೇಳಿ ತಪ್ಪು ಕೆಲಸ ಮಾಡತೊಡಗುತ್ತಾರೆ. ನಿಮ್ಮಲ್ಲಿ ಅಷ್ಟು ಬುದ್ಧಿಯಿದ್ದರೆ ಉಪಯೋಗಿಸಿರಿ. ನಿಮ್ಮ ತಂದೆ ತಾಯಿಯರು ನಿಮಗೆ ಕೊಡಿಸುವರು. ಆದರೆ ದುಬಾರಿಯೂ ಇರುತ್ತದೆ. Iphone ದರವೇನಿದೆ.

(ವಕ್ಫೆ ನೌ ವಿದ್ಯಾರ್ಥಿ ಹೇಳಿದನು, ಎರಡು ನೂರು ಯೂರೋಗಳು)

ಆಗ ಹುಝೂರ್ ಹೇಳಿದರು. ಈಗ ನಿಮ್ಮ ತಂದೆ ತಾಯಿಯರು ಎರಡು ನೂರು ಯೂರೋ ಖರ್ಚು ಮಾಡಿದರೆ ತಾನೆ ನಿಮಗೆ ಸಿಗುವುದು.

ಒಬ್ಬ ವಾಖಿಫೆ ನೌ ವಿದ್ಯಾರ್ಥಿ ಕೇಳಿದನು. ನಾನು ಒಂದು ದುಆ ಮಾಡಲು ಬೇಡಿಕೊಳ್ಳುತ್ತೇನೆ. ನನ್ನ ಮಾಮಾ ಮಲೇಶಿಯಾದಲ್ಲಿರುವರು, ಅವರ ಮೇಲಿರುವ ಕೇಸು ಬೇಗ ಪರಿಹಾರವಾಗಲು ದುಆ ಕೋರುತ್ತೇನೆ.

ಆಗ ಹುಝೂರ್ ಹೇಳಿದರು. ಎಲ್ಲರದ್ದು ಆಗಲಿ, ಕೇವಲ ನಿಮ್ಮ ಮಾವನದ್ದು ಏಕೆ?

ಒಬ್ಬ ವಾಖಿಫೆ ನೌ ಪ್ರಶ್ನೆ ಮಾಡಿದನು. ನೀವು ಹುಝೂರ್ ಆದಾಗ ನಿಮಗೆ ಹೇಗೆ ಅನಿಸಿತು?

ಆಗ ಹುಝೂರ್ ಹೇಳಿದರು. ಯಾರೋ ನನ್ನ ಮೇಲೆ ಪರ್ವತ ಹೇರಿದಂತೆ ಅನಿಸಿತು.

ಒಬ್ಬ ಬಾಲಕನು ಪ್ರಶ್ನೆ ಮಾಡಿದನು. ಶಹೀದ್ ಆದವರಿಗೆ ಅದೇ ಬಟ್ಟೆಗಳಲ್ಲಿ ಏಕೆ ಹೂಡಲಾಗುತ್ತದೆ?

ಆಗ ಹುಝೂರ್ ಹೇಳಿದರು. ಯಾರು ಹೇಳಿದರು. ಕೆಲವೊಮ್ಮೆ ಇಂತಹ ಸಂದರ್ಭ ಬರುತ್ತದೆ. ಯುದ್ಧಗಳಲ್ಲಿ ಶಹೀದರಾಗುತ್ತಿದ್ದರು. ಆಗ ಕಫನ್ (ವಸ್ತ್ರ) ಗೋಸ್ಕರ ಯಾವ ವಸ್ತುವಿರುತ್ತಿರಲಿಲ್ಲ ಮತ್ತು ಶವ ಕೆಡುವ ಅಪಾಯವಿರುತ್ತಿತ್ತು. ಅದಕ್ಕಾಗಿ ಹಝ್ರತ್ ರಸೂಲುಲ್ಲಾಹ್(ಸ) ಆ ಸಮಯ ಯಾವ ಬಟ್ಟೆಯಲ್ಲಿರುತ್ತಿದ್ದರೋ ಅದರಲ್ಲಿಯೇ ಹೂಲಲಾಗುತ್ತಿತ್ತು. ಕೆಲವೊಮ್ಮೆ ಅವರ ಸ್ಥಿತಿ ಹೀಗಿರುತ್ತಿತ್ತು. ಅವರ ಬಳಿ ಪೂರ್ಣ ಪ್ರಮಾನದ ಬಟ್ಟೆಯೂ ಇರುತ್ತಿರಲಿಲ್ಲ. ಶರವನ್ನು ಹೊದಿಸಿದರೆ ಕಾಲುಗಳು ಬೆತ್ತಲಾಗುತ್ತಿದ್ದವು. ಕಾಲುಗಳನ್ನು ಹೊದಿಸಲಾದರೆ ಶಿರ ಬೆತ್ತಲೆಯಾಗುತ್ತಿತ್ತು. ಇಂತಹ ಪರಿಸ್ತಿತಿಗಳಲ್ಲಿ ಶವ ಕೆಡುವ ಭಯವಿತ್ತು. ಸ್ನಾನ ಮಾಡಿಸದೆ ಹೂಡಬಹುದಾಗಿದೆ. ಆದರೆ ಒಬ್ಬ ಶಹೀದನಿಗೆ ಆ ಸ್ಥಿತಿ ಇಲ್ಲವಾದರೆ ಅದನ್ನು ಸ್ನಾನ (ದುಸುಅ) ಮಾಡಿಸಬಹುದಾಗಿದೆ. ಅದನ್ನು ಸ್ನಾನ ಮಾಡಿಸಲಾಗುತ್ತದೆ ಮತ್ತು ಕಫನ್ ಧರಿಸಲಾಗುತ್ತದೆ.

* ಒಬ್ಬ ಬಾಲಕನು ಪ್ರಶ್ನೆ ಮಾಡಿದನು. ನಾವು ರೈಲಿನಲ್ಲಿ ಪ್ರಯಾಣಿಸುವಾಗ ತುಂಬ ಜನರಿರುತ್ತಾರೆ, ಅವರಲ್ಲಿ ಸಾಕು ಪ್ರಾಣಿಗಳು ಇರುತ್ತವೆ. ಅವರ ಪ್ರಾಣಿಗಳು ನಮ್ಮ ಬಟ್ಟೆಗಳನ್ನು ತಾಗಿದರೆ ಅದೇ ಬಟ್ಟೆಗಳಲ್ಲಿ ನಮಾಝ್ ಮಾಡಬಹುದೇ?

ಆಗ ಹುಝೂರ್ ಹೇಳಿದರು. ಇತ್ತೀಚೆಗೆ ಅವರು ತಮ್ಮ ಪ್ರಾಣಿಗಳಿಗೆ shampoo ಹಚ್ಚಿ ಹಚ್ಚಿ ಎಷ್ಟು ಸ್ವಚ್ಛಗೊಳಿಸುತ್ತಾರೆಂದರೆ ನಿಮ್ಮ ಬಟ್ಟೆಗಳಿಗಿಂತಲೂ ಅವು ಸ್ವಚ್ಛವಿರುತ್ತವೆ. ನಮಾಝ್ ಮಾಡಬಹುದು. ಬಟ್ಟೆ ಬದಲಿಸಲು ಸಮಯವಿದ್ದರೆ ಬದಲಿಸಬಹುದು, ಆದರೆ ಅದನ್ನೇ ನೆಪಮಾಡಿಕೊಂಡು ನಮಾಝ್ ಬಿಡಬಾರದು. ಹಝ್ರತ್ ರಸೂಲುಲ್ಲಾಹ್(ಸ) ರವರ ಕಾಲದಲ್ಲಿ ಜನರ ಬಳಿ ಮೇಕೆಗಳ ದೊಡ್ಡ ದೊಡ್ಡ ದಂಡೇ ಇರುತ್ತಿದ್ದವು. ಅದರ ಉಸ್ತುವಾರಿಗೋಸ್ಕರ ನಾಯಿಗಳನ್ನು ಇಟ್ಟುಕೊಳ್ಳುತ್ತಿದ್ದರು. ಆ ಕಾಲದಲ್ಲಿಯೂ ನಾಯಿಗಳು ಇರುತ್ತಿದ್ದವು. ಮತ್ತು ಮೇಕೆಗಳ ಜೋಪಾನಕ್ಕಾಗಿ ನಾಯಿ ಸಾಕುತ್ತಿದ್ದರು. ಆ ಮಂದೆಗಳನ್ನು ನೋಡಿಕೊಳ್ಳುವ ಸಹಾಬರು ದಿನವೆಲ್ಲ ಆ ನಾಯಿಗಳೊಂದಿಗೆ ಇರುತ್ತಿದ್ದರು. ಅವರ ಬಟ್ಟೆಗಳನ್ನು ಸಹ ತಾಗುತ್ತಿರಬಹುದು. ಅದಾಗ್ಯೂ ಸಹಾಬರು ಮಸ್ಜಿದ್ ನಬ್ವಿಗೆ ಬಂದು ನಮಾಝ್ ಮಾಡಿ ಹೋಗುತ್ತಿದ್ದರು. ಅವರು ಬಟ್ಟೆ ಬದಲಿಸಿ ಸ್ನಾನ ಮಾಡಿ ಅಂತೂ ಬರುತ್ತಿರಲಿಲ್ಲ. ಇವೆಲ್ಲ ನಮಾಝ್ ಮಾಡದಿರಲು ನೆಪಗಳಾಗಿವೆ. ತಾಗಿದರೂ ಏನೂ ಅಂತಹ ಮಾತಿಲ್ಲ. ಒಂದು ನಾಯಿಯ ಮೇಲೆಯೇ ಅಷ್ಟೇಕೆ ನಿಮಗೆ ಕಷ್ಟವಾಗುವುದು, ಬೆಕ್ಕನ್ನು ಚುಂಬಿಸುತ್ತಿರುತ್ತೀರಿ. ಈ ಬೆಕ್ಕುಗಳಿವೆ. ಪಕ್ಷಿಗಳಿವೆ, ಅದರಂತೆಯೇ ನಾಯಿಗಳು, ತಾಗಿದರೂ ಏನೂ ಅಡ್ಡಿಯಿಲ್ಲ, ನೀವು ಆರಾಮವಾಗಿ ನಮಾಝ್ ಮಾಡಬಹುದು, ನಂತರ ನಿಮ್ಮಗೆ ಅಸಹ್ಯವಾಗಿ ಕಂಡರೆ ಹೋಗಿ ಬಟ್ಟೆ ಬದಲಿಸಬಹುದು, ಆದರೆ ನಮಾಝಿನ ಸಮಯ ಕಳೆಯದಿರಿ.

ಹುಝೂರ್ ಹೇಳಿದರು. ಕೆಲವರಲ್ಲಿ ಅದು ಪಾಕಿಸ್ತಾನದಲ್ಲಿ ಒಂದು ರಿವಾಜು ಇದೆ. ನಾಯಿಗೆ ಕೈ ತಾಗಿದರೆ ಏಳು ಸಲ ಕೈ ತೊಳೆದುಕೊಳ್ಳದಿದ್ದರೆ ಸ್ವಚ್ಛವಾಗುವುದಿಲ್ಲ ಎನ್ನುತ್ತಾರೆ. ಮಹಿಳೆಯೋರ್ವಳು ರಬ್ವಾದಲ್ಲಿ ಬಂದಿದ್ದಳು. ಅಹ್ಮದಿಯೇತರ ಹಾಲು ಮಾರುವ ಮಹಿಳೆಯರು ಮತ್ತು ಪುರುಷರು ಅಕ್ಕಪಕ್ಕದ ಊರುಗಳಿಂದ ಬರುತ್ತಿದ್ದರು. ಯಾರದಾದರೂ ಮನೆಯಲ್ಲಿ ನಾಯಿ ಇದ್ದರೆ, ಅದಕ್ಕೆ ಕೈ ತಾಗಿದರೆ ಅಥವಾ ನಾಯಿ ಅವರ ಕೈ ಚುಂಬಿಸಿದರೆ ಒಮ್ಮೆ ಸಾಬೂನಿನಿಂದ ಕೈ ತೊಳೆದುಕೊಂಡರೆ ಸಾಕು ಮುಗಿಯಿತು. ಎಂದು ಅವರು ಹೇಳಿದರೆ ಆಗ ಅವಳು ಹೇಳಿದಳು. ಛೇ, ಛೇ, ನೀವು ಕಾಫಿರ್ ಆಗಿದ್ದೀರಿ, ಕೈಯನ್ನು ಏಳು ಸಲ ತೊಳೆಯಬೇಕು. ನಿಮಗೆ ನಾಯಿಯ ನಾಲಿಗೆ ತಾಗಿದೆ. ಅಪವಿತ್ರಗೊಂಡಿದ್ದೀರಿ ಹೊಲಸಾಗಿದ್ದೀರಿ, ಹೋಗಿ ನಾಳೆಯಿಂದ ನಾನು ನಿಮಗೆ ಹಾಲು ಕೊಡುವುದಿಲ್ಲ. ಇಂತಹ ಸ್ಥಿತಿಯಿದೆ, ಇಂತಹ ಜನರೂ ಇದ್ದಾರೆ. ಯಾವುದೇ ವಿಷಯದಲ್ಲಿ ಇಂತಹದೊಂದು ಅತಿಶಯೋಕ್ತಿ ಮಾಡಬಾರದು.

* ಒಬ್ಬ ವಾಖಿಫೆ ನೌ ಬಾಲಕ ಪ್ರಶ್ನೆ ಮಾಡಿದನು. ಅಲ್ಲಾಹನು ಯಾವಾಗ ಮುಸಲ್ಮಾನರ ಮೇಲೆ ದಿನವೊಂದಕ್ಕೆ 5 ಹೊತ್ತಿನ ನಮಾಝ್ ಕಡ್ಡಾಯಗೊಳಿಸಿದನು?

ಹುಝೂರ್ ಹೇಳಿದರು. ಈ ಆಜ್ಞೆ ಅಲ್ಲಾಹನು ಹಝ್ರತ್ ರಸೂಲುಲ್ಲಾಹ್(ಸ) ರವರ ಮೇಲೆ ಅವತರಿಸಿದನು. ಅಲ್ಲದೇ ಪವಿತ್ರ ಖುರ್‌ಆನ್‌ನಲ್ಲಿ ಹಲವು ಕಡೆ 5 ಹೊತ್ತಿನ ನಮಾಝ್‌ಗಳ ಬಗ್ಗೆ ಪ್ರಸ್ತಾಪವಿದೆ. ಅದರ ವೇಳೆಗಳನ್ನು ತಿಳಿಸಲಾಗಿದೆ. ಅದೇ ರೀತಿ ಹಝ್ರತ್ ರಸೂಲುಲ್ಲಾಹ್(ಸ)

*(ಪುಟ ಸಂಖೆ 11 ರಲ್ಲಿ ಮುಂದುವರಿಸಲಾಗಿದೆ)*

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
**NATIONAL TOLL FREE**
**1800–103–2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.